ಮಂಗಳವಾರ, ಆಗಸ್ಟ್ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 232 | ಪುಟ 14

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನಕಾರಾತ್ಮಕ ಟೀಕೆಯನ್ನೂ ಸಹ್ಯವಾಗಿಸುವ ವಿಧಾನವೇ 'ಸ್ಯಾಂಡ್‌ವಿಚ್' ತಂತ್ರ

ರಾಜ್ಯದ ಕೆಲವೆಡೆ ಧಾರಾಕಾರ ಮಳೆ 11

23ರಂದು ಉಕ್ರೇನ್‌ಗೆ ಪ್ರಧಾನಿ ಮೋದಿ ಭೇಟಿ 7

ಆಳ-ಅಗಲ: ಅತ್ಯಾಚಾರಿಗಳಿಗೆ 'ನಿರ್ಭಯ'

'ತಲಾಖ್: ಕಾನೂನುಬದ್ಧವಲ್ಲ, ಧಾರ್ಮಿಕ ಮಾನ್ಯತೆಯೂ ಇಲ್ಲ' 7

ಸೆನ್ಸೆಕ್ಸ್	ನಿಫ್ಟಿ	₹/$
80,424	24,572	83.87

ವೈದ್ಯ ವಿದ್ಯಾರ್ಥಿನಿ ಕೊಲೆ: 'ಸುಪ್ರೀಂ' ವಿಚಾರಣೆ ಇಂದು

ನವದೆಹಲಿ (ಪಿಟಿಐ): ಕೋಲ್ಕತ್ತದ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ನಡೆದ ವೈದ್ಯಕೀಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಸಂಬಂಧ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ದೂರಿನ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ನಡೆಸಲಿದೆ.

ಆಗಸ್ಟ್ 20ರಂದು ಕೈಗೆತ್ತಿಕೊಳ್ಳಲು ಪಟ್ಟಿ ಮಾಡಿರುವ ಕಲಾಪಗಳ ಪಟ್ಟಿಯಲ್ಲಿ ಈ ಪ್ರಕರಣ ಎಲ್ಲಕ್ಕಿಂತ ಮೊದಲು ಬರಲಿದೆ. ಸಿಜೆಐ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಬೆಳಿಗ್ಗೆ 10.30ಕ್ಕೆ ವಿಚಾರಣೆ ನಡೆಸಲಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಪೀಠದಲ್ಲಿದ್ದಾರೆ.

ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಆಗಸ್ಟ್ 9ರಂದು ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಕೊಲೆಗೈಯಲಾಗಿತ್ತು. ಈ ಘಟನೆಗೆ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿದೆ.

ಝಿಕಾ: ರಾಜ್ಯದಲ್ಲಿ ಮೊದಲ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ನಗರದ ಗಾಂಧಿನಗರ ನಿವಾಸಿ 74 ವರ್ಷದ ವೃದ್ಧರೊಬ್ಬರು ಝಿಕಾ ವೈರಾಣು ಸೋಂಕಿನಿಂದ ಮೃತಪಟ್ಟಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ತೀವ್ರ ಜ್ವರದಿಂದ ಬಳಲುತ್ತಿದ್ದ ಅವರು ಜೂನ್ ತಿಂಗಳಲ್ಲಿ ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿ ಮನೆಗೆ ಮರಳಿದ್ದರು. ಕೆಲ ದಿನಗಳ ಬಳಿಕ ಅವರಿಗೆ ಝಿಕಾ ವೈರಾಣು ಬಾಧಿಸಿರುವುದು ದೃಢಪಟ್ಟಿತ್ತು. ಜುಲೈ ತಿಂಗಳಲ್ಲಿ ಮೃತಪಟ್ಟಿದ್ದರು.

ಗಂಭೀರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿದ್ದ ಮೃತರಿಗೆ ಝಿಕಾ ವೈರಾಣು ಸೋಂಕು ಸಹ ತಗುಲಿತ್ತು ಎಂಬುದು ಮರಣದ ಆಡಿಟ್ ವರದಿಯಲ್ಲಿ ಖಚಿತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ 29ರವರೆಗೆ ಕ್ರಮ ಬೇಡ: ಹೈಕೋರ್ಟ್ • ರಾಜ್ಯಪಾಲರ ಪರ ತುಷಾರ್ ಮೆಹ್ತಾ, ಮುಖ್ಯಮಂತ್ರಿ ಪರ ಅಭಿಷೇಕ್ ಮನು ಸಿಂಘ್ವಿ ವಾದ

ಮುಡಾ ಪ್ರಕರಣ: ಸಿ.ಎಂ 10 ದಿನ ನಿರಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ ನಿವೇಶನ ಹಂಚಿಕೆಯಲ್ಲಿನ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರ ಆದೇಶಕ್ಕೆ ಅನುಗುಣವಾಗಿ ಇದೇ 29ರವರೆಗೆ ಯಾವುದೇ ಕ್ರಮಕ್ಕೆ ಮುಂದಾಗಬಾರದು' ಎಂದು ಹೈಕೋರ್ಟ್, ಜನಪ್ರತಿನಿಧಿಗಳ ಸೆಷನ್ಸ್ ಕೋರ್ಟ್‌ಗೆ ನಿರ್ದೇಶಿಸಿದೆ.

ಈ ಸಂಬಂಧ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶವನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

'ಹೈಕೋರ್ಟ್ ಈಗ ಪ್ರಕರಣದ ವಿಚಾರಣೆ ನಡೆಸುತ್ತಿದ್ದು, ವಾದ ಇನ್ನಷ್ಟೇ ಪೂರ್ಣಗೊಳ್ಳಬೇಕಿದೆ. ಹೀಗಾಗಿ, ಮುಂದಿನ ವಿಚಾರಣೆವರೆಗೆ ಜನಪ್ರತಿನಿಧಿಗಳ ನ್ಯಾಯಾಲಯ ತನ್ನ ನ್ಯಾಯಿಕ ಪ್ರಕ್ರಿಯೆಯನ್ನು ಮುಂದೂಡಬೇಕು. ಆತುರದ ನಿರ್ಧಾರ ಕೈಗೊಳ್ಳಬಾರದು' ಎಂದರು.

4ನೇ ಪುಟ ನೋಡಿ

ರಾಜ್ಯಪಾಲರ ಆದೇಶದ ಬಗ್ಗೆ ಸೆಷನ್ಸ್ ನ್ಯಾಯಾಲಯ ತೀರ್ಮಾನ ಮಾಡಲು ಸಾಧ್ಯವೇ? ಈ ವಿಚಾರವನ್ನು ಸಾಂವಿಧಾನಿಕ ಅಧಿಕಾರ ಹೊಂದಿದ ಹೈಕೋರ್ಟ್ ತೀರ್ಮಾನಿಸಬೇಕಲ್ಲವೇ?

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಥಾವರಚಂದ್ ಗೆಹಲೋತ್ ಅವರ ಅಣಕು ಶವಯಾತ್ರೆ ನಡೆಸಿ ಕಾಂಗ್ರೆಸ್ ಕಾರ್ಯಕರ್ತರು ದಾವಣಗೆರೆಯ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟಿಸಿದರು – ಪ್ರಜಾವಾಣಿ ಚಿತ್ರ

ರಾಜ್ಯಪಾಲರ ವಿರುದ್ಧ 'ಕೈ' ಕೆಂಡ

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ಖಂಡಿಸಿ ರಾಜ್ಯದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆದರೆ, ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಸಚಿವರು, ಸಂಸದರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪ್ರತಿಭಟನಾ ಸಮಾವೇಶ, ರ‍್ಯಾಲಿಗಳಲ್ಲಿ ಭಾಗವಹಿಸಿ ಮಾತನಾಡಿದ ಸಚಿವರು ಹಾಗೂ ಕಾಂಗ್ರೆಸ್ ನಾಯಕರು ಕೇಂದ್ರ ಸರ್ಕಾರ ಮತ್ತು ರಾಜ್ಯಪಾಲರ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕೆಲವಡೆ ರಾಜ್ಯಪಾಲರ ಪ್ರತಿಕೃತಿಯನ್ನು ದಹಿಸಿದರು.

ಮಂಗಳೂರಿನಲ್ಲಿ ನಡೆದ ಪ್ರತಿಭಟನೆ ವೇಳೆ ಕೆಲವರು ಸಿಟಿ ಬಸ್ಸೊಂದಕ್ಕೆ ಕಲ್ಲು ತೂರಿದ್ದರಿಂದ ಪ್ರಯಾಣಿಕ ಮಹಿಳೆಯೊಬ್ಬರಿಗೆ ಗಾಯವಾಯಿತು. ರಸ್ತೆ ತಡೆ ನಡೆಸಿ, ಟೈರ್‌ಗಳಿಗೆ ಬೆಂಕಿ ಹಚ್ಚಿದವರನ್ನು ಪೊಲೀಸರು ವಶಕ್ಕೆ ಪಡೆದರು.

ಕ್ರುದ್ಧ ಕಾಂಗ್ರೆಸ್ ಕಾರ್ಯಕರ್ತರು, ರಾಜ್ಯಪಾಲ ಮತ್ತು ಬಿಜೆಪಿ ನಾಯಕರಿಗೆ ಧಿಕ್ಕಾರ ಕೂಗಿದರು.

4ನೇ ಪುಟ ನೋಡಿ

ಎಚ್‌ಡಿಕೆ ವಿರುದ್ಧ ಚಾರ್ಜ್‌ಶೀಟ್: ಮತ್ತೆ ಪ್ರಸ್ತಾವ

ನಿಯಮ ಉಲ್ಲಂಘಿಸಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ (ಎಸ್‌ಎಸ್‌ವಿಎಂ) ಕಂಪನಿಗೆ ಗಣಿ ಗುತ್ತಿಗೆ ಮಂಜೂರು ಮಾಡಿರುವ ಆರೋಪದಡಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಲೋಕಾಯುಕ್ತ ವಿಶೇಷ ತನಿಖಾ ತಂಡ (ಎಸ್‌ಐಟಿ) ರಾಜ್ಯಪಾಲರಿಗೆ ಸೋಮವಾರ ಮತ್ತೆ ಪ್ರಸ್ತಾವ ಸಲ್ಲಿಸಿದೆ.

ಕುಮಾರಸ್ವಾಮಿ ಅವರು 2007ರಲ್ಲಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಎಸ್‌ಎಸ್‌ವಿಎಂ ಕಂಪನಿಗೆ ಗಣಿ ಮತ್ತು ಖನಿಜ ನಿಯಮಗಳನ್ನು ಉಲ್ಲಂಘಿಸಿ 550 ಎಕರೆ ವಿಸ್ತೀರ್ಣದ ಗಣಿ ಗುತ್ತಿಗೆ ಮಂಜೂರು ಮಾಡಿದ ಆರೋಪವಿದೆ. 2011ರಲ್ಲಿ ಲೋಕಾಯುಕ್ತರಾಗಿದ್ದ ಎನ್. ಸಂತೋಷ್ ಹೆಗ್ಡೆ ಅವರು ಅಕ್ರಮ ಗಣಿಗಾರಿಕೆ ಕುರಿತು ಸಲ್ಲಿಸಿದ್ದ ವರದಿಯಲ್ಲಿನ ಉಲ್ಲೇಖ ಆಧರಿಸಿ ಲೋಕಾಯುಕ್ತದ ಎಸ್‌ಐಟಿ ತನಿಖೆ ನಡೆಸುತ್ತಿದೆ.

4ನೇ ಪುಟ ನೋಡಿ

ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ– ಜೆಡಿಎಸ್ ಶಾಸಕರು, ಮುಖಂಡರು ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರ

'ಗೆಹಲೋತ್ ದಲಿತರಾಗಿದ್ದಕ್ಕೆ ಗುರಿ'

'ಥಾವರಚಂದ್ ಗೆಹಲೋತ್ ದಲಿತ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೇ ಕಾಂಗ್ರೆಸ್ ಪಕ್ಷ ಅವರನ್ನು ಗುರಿ ಮಾಡಿದೆ. ಇದು ಕಾಂಗ್ರೆಸ್ ದಲಿತ ವಿರೋಧಿ ನೀತಿಗೆ ಸ್ಪಷ್ಟ ಉದಾಹರಣೆ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಆರೋಪಿಸಿದರು.

ಸೋಮವಾರ ಸಂಜೆ ನಡೆದ ಪಕ್ಷದ ನಾಯಕರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಾಂಗ್ಲಾ ದೇಶದ ಮಾದರಿಯಲ್ಲಿ ರಾಜಭವನಕ್ಕೆ ನುಗ್ಗಿ ರಾಜ್ಯಪಾಲರನ್ನು ಕೆಳಗಿಳಿಸುತ್ತೇವೆ ಎಂದು ಕಾಂಗ್ರೆಸ್ ನಾಯಕರು ಬೆದರಿಕೆ ಒಡ್ಡಿದ್ದಾರೆ. ಇದರ ಅರ್ಥ ಬಾಂಗ್ಲಾದೇಶ ಮತ್ತು ಶ್ರೀಲಂಕಾ ಮಾದರಿಯಲ್ಲಿ ಕರ್ನಾಟಕದಲ್ಲೂ ಗಲಭೆ ಮತ್ತು ಅರಾಜಕತೆ ಸೃಷ್ಟಿಸಲು ಕಾಂಗ್ರೆಸ್ ಸಂಚು ರೂಪಿಸಿದೆ ಎಂದಾಗಿದೆ. ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹಿಸಿ ಇದೇ 22ರಂದು ಎಲ್ಲ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದರು.

4ನೇ ಪುಟ ನೋಡಿ

ವಿವರಣೆ ಕೇಳಿದ ಎನ್‌ಜಿಟಿ

ಶಿರೂರು ಭೂಕುಸಿತಕ್ಕೆ ಅವೈಜ್ಞಾನಿಕ ಕಾಮಗಾರಿ ಕಾರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಸಂಭವಿಸಿದ ಭೂಕುಸಿತಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅವೈಜ್ಞಾನಿಕ ಕಾಮಗಾರಿಯೂ ಕಾರಣ ಎಂದು ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾ (ಜಿಎಸ್‌ಐ) ಪ್ರಾಥಮಿಕ ವರದಿ ಸಲ್ಲಿಸಿದೆ. ಹೀಗಾಗಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ಹಾಗೂ ಉತ್ತರ ಕನ್ನಡ ಜಿಲ್ಲಾಧಿಕಾರಿ ಅವರಿಂದ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ ವಿವರಣೆ ಕೇಳಿದೆ.

ಭೂಕುಸಿತದ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪೀಠವು ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾದ ಮಹಾನಿರ್ದೇಶಕರಿಗೂ ನೋಟಿಸ್ ನೀಡಿದೆ.

ಮಹಾರಾಷ್ಟ್ರದ ಪನ್ವೇಲ್ ಅನ್ನು ತಮಿಳುನಾಡಿನ ಕನ್ಯಾಕುಮಾರಿಯೊಂದಿಗೆ ಸಂಪರ್ಕಿಸುವ 1,640 ಕಿ.ಮೀ. ಉದ್ದದ ಹೆದ್ದಾರಿಯು ಶಿರೂರು ಮೂಲಕ ಹಾದು ಹೋಗುತ್ತಿದೆ. ಭೂಕುಸಿತದಿಂದ ಎಂಟು ಮಂದಿ ಸತ್ತಿದ್ದಾರೆ. ನಾಪತ್ತೆಯಾದ ಮೂವರು ಇನ್ನೂ ಪತ್ತೆಯಾಗಿಲ್ಲ. ಪ್ರಾಧಿಕಾರದ ಅವೈಜ್ಞಾನಿಕ ಕಾಮಗಾರಿಯು ಈ ದುರಂತಕ್ಕೆ ಕಾರಣ. ಜತೆಗೆ, ಅಲ್ಪಾವಧಿಯಲ್ಲಿ ಭಾರಿ ಮಳೆಯಾಗಿದ್ದರಿಂದಲೂ ಭೂಕುಸಿತ ಸಂಭವಿಸಿದೆ' ಎಂದು ನ್ಯಾಯಪೀಠದ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಹೆದ್ದಾರಿ ನಿರ್ಮಾಣಕ್ಕೆ ಇಳಿಜಾರು ಪ್ರದೇಶಗಳಲ್ಲಿ ಮಾರ್ಪಾಡು ಮಾಡಿದ್ದರಿಂದ ನೀರಿನ ನೈಸರ್ಗಿಕ ಹರಿವಿಗೆ ಅಡ್ಡಿಯಾಯಿತು. ಈ ಪ್ರದೇಶದಲ್ಲಿ ಅವೈಜ್ಞಾನಿಕವಾಗಿ ರಸ್ತೆಗಳ ವಿಸ್ತರಣೆ ಹಾಗೂ ಬೆಟ್ಟಗಳನ್ನು ಲಂಬವಾಗಿ ಕತ್ತರಿಸುವ ಬಗ್ಗೆ ವಿಜ್ಞಾನಿಗಳು ಹಲವು ಸಲ ಎಚ್ಚರಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವಾರ್ಷಿಕ 3,500–4000 ಮಿ.ಮೀ ಮಳೆಯಾಗುತ್ತದೆ. ಇಂತಹ ಪ್ರದೇಶದಲ್ಲಿ ಮೂಲಸೌಕರ್ಯ ಯೋಜನೆಗಳನ್ನು ಕಾರ್ಯಗತಗೊಳಿಸುವುದು ದೊಡ್ಡ ಸವಾಲು. ಇಲಾಖೆಗಳು ರಸ್ತೆ ಯೋಜನೆಗಳನ್ನು ಕಾರ್ಯಗತಗೊಳಿಸುವ ಮೊದಲು ಭೂಪ್ರದೇಶದ ಸಮಗ್ರ ಅಧ್ಯಯನ ನಡೆಸುವುದು ಸೂಕ್ತ. ಈ ಬಗ್ಗೆ ಜಿಎಸ್‌ಐ ಸಹ ಕಳವಳ ವ್ಯಕ್ತಪಡಿಸಿದೆ. ಈ ಪ್ರಕರಣದಲ್ಲಿ ಪರಿಸರ ಸಂರಕ್ಷಣೆ ಕಾಯ್ದೆಯ ಉಲ್ಲಂಘನೆ ಆಗಿರುವುದು ಸ್ಪಷ್ಟ' ಎಂದ ಪೀಠ ಅಭಿಪ್ರಾಯಪಟ್ಟಿದೆ. ಪ್ರಕರಣದ ವಿಚಾರಣೆಯನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಲಾಗಿದೆ.

ಉತ್ತರ ಪ್ರದೇಶದ ಆಸ್ಪತ್ರೆಯಲ್ಲಿ ಘಟನೆ; ಮೂವರ ಬಂಧನ

ನರ್ಸ್ ಮೇಲೆ ವೈದ್ಯನಿಂದ ಅತ್ಯಾಚಾರ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಉತ್ತರ ಪ್ರದೇಶದ ಮುರಾದಾಬಾದ್ ಜಿಲ್ಲೆಯ ಖಾಸಗಿ ಆಸ್ಪತ್ರೆಯೊಂದರಲ್ಲಿ ನರ್ಸ್ ಮೇಲೆ ವೈದ್ಯರೊಬ್ಬರು ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ಈ ನರ್ಸ್ ದಲಿತ ಸಮುದಾಯದವರು.

ಅತ್ಯಾಚಾರ ಪ್ರಕರಣದ ಪ್ರಮುಖ ಆರೋಪಿ ಡಾ.ಶಹನವಾಜ್ ಸೇರಿದಂತೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಜಿಲ್ಲಾ ಆರೋಗ್ಯಾಧಿಕಾರಿಯು ಆಸ್ಪತ್ರೆಯ ಪರವಾನಗಿ ರದ್ದುಗೊಳಿಸಿ, ಬೀಗ ಜಡಿದಿದ್ದಾರೆ.

ಮುರಾದಾಬಾದ್‌ನ ಠಾಕೂರ್‌ದ್ವಾರ ಪ್ರದೇಶದಲ್ಲಿರುವ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಸಂತ್ರಸ್ತೆಯು (20 ವರ್ಷ) ಶನಿವಾರ ರಾತ್ರಿಪಾಳಿಗೆ ಬಂದಿದ್ದರು. ಮಧ್ಯರಾತ್ರಿಯ ವೇಳೆ ಶಹನವಾಜ್ ತಮ್ಮ ಕೊಠಡಿಗೆ ಕರೆಸಿ, ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

'ವೈದ್ಯರ ಕೊಠಡಿಗೆ ತೆರಳಲು ನಿರಾಕರಿಸಿದರೂ ಆಸ್ಪತ್ರೆಯ ಇಬ್ಬರು ಸಿಬ್ಬಂದಿ ಬಲವಂತವಾಗಿ ಕೊಠಡಿಗೆ ಎಳೆದೊಯ್ದಿದ್ದಾರೆ' ಎಂದು ಸಂತ್ರಸ್ತೆಯು ದೂರಿನಲ್ಲಿ ತಿಳಿಸಿದ್ದಾರೆ. ಸಿಬ್ಬಂದಿಯನ್ನು ಮೆಹನಾಜ್ (ದಾದಿ) ಮತ್ತು ಜುನೈದ್ (ವಾರ್ಡ್ ಬಾಯ್) ಎಂದು ಗುರುತಿಸಲಾಗಿದ್ದು, ಇಬ್ಬರನ್ನೂ ಬಂಧಿಸಲಾಗಿದೆ.

'ಮೆಹನಾಜ್ ಮತ್ತು ಜುನೈದ್, ಕೊಠಡಿಯ ಬಾಗಿಲನ್ನು ಹೊರಗಿನಿಂದ ಲಾಕ್ ಮಾಡಿ ತೆರಳಿದ್ದಾರೆ. ಸಂತ್ರಸ್ತೆಯ ಮೊಬೈಲ್ ಫೋನ್ ಕೂಡಾ ಕೊಂಡೊಯ್ದಿದ್ದಾರೆ. ನರ್ಸ್ ಜೋರಾಗಿ ಕಿರುಚಾಡಿದರೂ ಆಕೆಯ ನೆರವಿಗೆ ಯಾರೂ ಬರಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

11ನೇ ಪುಟ ನೋಡಿ

ನಕಲಿ ಎನ್‌ಸಿಸಿ ಶಿಬಿರ: ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ

ಚೆನ್ನೈ: ಕೇಂದ್ರ ಮೀಸಲು ಪೊಲೀಸ್ ಪಡೆಯ ಮಾಜಿ ಸಿಬ್ಬಂದಿಯೊಬ್ಬರ ನೆರವು ಪಡೆದು, ಎನ್‌ಸಿಸಿ ಸಂಯೋಜಕ ಎಂದು ಬಿಂಬಿಸಿಕೊಂಡಿದ್ದ ವ್ಯಕ್ತಿಯೊಬ್ಬ ಕೃಷ್ಣಗಿರಿಯ ಖಾಸಗಿ ಶಾಲೆಯಲ್ಲಿ ನಾಲ್ಕು ದಿನಗಳ 'ನಕಲಿ ಎನ್‌ಸಿಸಿ ಶಿಬಿರ' ನಡೆಸಿ, 13 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ.

ಅಲ್ಲದೆ ಶಿಬಿರದಲ್ಲಿ ಇತರೆ 12 ಬಾಲಕಿಯರನ್ನು ಅನುಚಿತವಾಗಿ ಸ್ಪರ್ಶಿಸುವ ಮೂಲಕ ಅವರನ್ನು ಲೈಂಗಿಕ ದುರ್ಬಳಕೆ ಮಾಡಿಕೊಂಡಿದ್ದಾನೆ ಎಂದೂ ಆರೋಪಿಸಲಾಗಿದೆ. ಈ ಸಂಬಂಧ ಪ್ರಮುಖ ಆರೋಪಿ ಶಿವರಾಮನ್, ಶಾಲೆಯ ಪ್ರತಿನಿಧಿ ಸ್ಯಾಮ್ಸನ್ ವೆಸ್ಲಿ, ಪ್ರಾಚಾರ್ಯ ಸತೀಶ್ ಕುಮಾರ್, ಇಬ್ಬರು ಶಿಕ್ಷಕರು, ಸಿಆರ್‌ಪಿಎಫ್ ಮಾಜಿ ಸಿಬ್ಬಂದಿ ವಿ.ಸುಬ್ರಮಣಿ ಸೇರಿದಂತೆ 11 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

11ನೇ ಪುಟ ನೋಡಿ

ಉಗ್ರರ ದಾಳಿ: ಸಿಆರ್‌ಪಿಎಫ್ ಇನ್‌ಸ್ಪೆಕ್ಟರ್ ಹುತಾತ್ಮ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯಲ್ಲಿ ಸೋಮವಾರ ಮಧ್ಯಾಹ್ನ ಗಸ್ತು ಪಡೆಯ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ಪರಿಣಾಮ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಇನ್‌ಸ್ಪೆಕ್ಟರ್ ಒಬ್ಬರು ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡೋಡಾ ಪೊಲೀಸ್ ಠಾಣೆ ವ್ಯಾಪ್ತಿಯ ಚಿಲ್ ಪ್ರದೇಶದಲ್ಲಿ ಸಿಆರ್‌ಪಿಎಫ್ ಮತ್ತು ಸ್ಥಳೀಯ ಪೊಲೀಸರ ವಿಶೇಷ ಕಾರ್ಯಾಚರಣೆ ತಂಡ (ಎಸ್‌ಒಜಿ) ಜಂಟಿಯಾಗಿ ಗಸ್ತು ನಡೆಸುತ್ತಿದ್ದಾಗ ಮಧ್ಯಾಹ್ನ 3.30ರ ವೇಳೆಯಲ್ಲಿ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ.

ಈ ವೇಳೆ ಸಿಆರ್‌ಪಿಎಫ್‌ನ 187ನೇ ಬೆಟಾಲಿಯನ್‌ನ ಇನ್‌ಸ್ಪೆಕ್ಟರ್ ಕುಲದೀಪ್ ಕುಮಾರ್(54) ಅವರಿಗೆ ಗುಂಡು ತಗುಲಿತು. ಗಾಯಗೊಂಡ ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಕೊನೆಯುಸಿರೆಳೆದರು ಎಂದು ಅಧಿಕಾರಿಗಳು ವಿವರಿಸಿದ್ದಾರೆ. ಕುಲದೀಪ್ ಹರಿಯಾಣ ಮೂಲದವರು.

ಈ ವಿಷಯವನ್ನು ಉಧಂಪುರ ಪೊಲೀಸರು 'ಎಕ್ಸ್'ನಲ್ಲಿ ಪೋಸ್ಟ್ ಮಾಡುವ ಮೂಲಕ ದೃಢಪಡಿಸಿದ್ದಾರೆ. ಉಗ್ರರು ಸ್ಥಳದಿಂದ ಪರಾರಿಯಾಗಿದ್ದು, ಅವರ ಪತ್ತೆಗಾಗಿ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದಿದ್ದಾರೆ.

ಗೃಹ ಸಚಿವಾಲಯದ ಪ್ರಕಾರ, ಪ್ರಸಕ್ತ ವರ್ಷದ ಜುಲೈ 21ರವರೆಗೆ 11 ಭಯೋತ್ಪಾದಕ ದಾಳಿಗಳು ಮತ್ತು 24 ಭಯೋತ್ಪಾದಕ ನಿಗ್ರಹ ಕಾರ್ಯಾಚರಣೆಗಳಲ್ಲಿ ನಾಗರಿಕರು, ಭದ್ರತಾ ಸಿಬ್ಬಂದಿ ಸೇರಿ 28 ಮಂದಿ ಮೃತಪಟ್ಟಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆ ಘೋಷಣೆ ಆಗಿರುವ ಕಾರಣಕ್ಕೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಇಲ್ಲಿನ ವಿಧಾನಸಭೆಗೆ ಸೆಪ್ಟೆಂಬರ್ 18, 25 ಮತ್ತು ಅಕ್ಟೋಬರ್ 1ರಂದು ಮೂರು ಹಂತಗಳಲ್ಲಿ ಮತದಾನ ನಡೆಯಲಿದ್ದು, ಅಕ್ಟೋಬರ್ 4ರಂದು ಫಲಿತಾಂಶ ಪ್ರಕಟವಾಗಲಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಒಳಪುಟಗಳಲ್ಲಿ

ಜಲಾಶಯದಲ್ಲಿ ಸೋರಿಕೆ ಸಂಪೂರ್ಣ ಬಂದ್ 5

ಸಿನಿಮಾ ಕಲಾವಿದೆಯರಿಗೆ ಲೈಂಗಿಕ ಕಿರುಕುಳ 7

ಸ್ನೂಕರ್: ಪಂಕಜ್ ಅಡ್ವಾಣಿಗೆ ಪ್ರಶಸ್ತಿ ಡಬಲ್ 11

PUBLIC NOTICE

TO WHOMSOEVER IT MAY CONCERN

My client is negotiating to purchase the Schedule Property from **Smt. A.S SUNANDA**, aged about 80 years, Wife of Sri. A.N Shiva Kumar, **Sri. D.C CHIKKANNA** Son of Chaudappa, Aged about 70 years, No.307, 11th Ward Near Jain Temple, Doddaballapura Road, Devanahalli Town, Bangalore, who have represented that they are having clear and marketable title over the Schedule Property.

Any persons claiming to have any right or claims or objection, may lodge their objections or claim along with supporting documents with the undersigned within **03 days** from the date of publication of this notice.

If no such objection or claims is received within the prescribed time, my client will proceed to complete the transaction. If any objection and claim is lodged beyond the prescribed period it shall not be reckoned and it shall be deemed that all objections and claims by whomsoever are waived.

Schedule "A" Property
(Property owned and possessed by Smt A.S.Sunanda)

All that piece and parcel of Immovable Agricultural land bearing **Sy.No.14/3** Measuring 1.15.08.00 (1 Acres 15.08 Guntas) situated at Shetterahalli Village, Kasaba Hobli, Devanahalli Taluk, Bangalore & bounded on the:

East by : Property bearing Sy.No.14/1
West by : LA. SA No.13 , Block 2 Land
North by : Savakanahalli Border
South by : Property belonging to D.C Chikkanna and Road

Schedule "B" Property
(Property owned and possessed by Dr. C. Chikkanna)

All that piece and parcel of Immovable Agricultural land bearing Sy.No.14/4 Measuring 1.15.12.00 (1 Acre 15.12 Guntas) situated at Shetterahalli Village, Kasaba Hobli, Devanahalli Taluk, Bangalore & bounded on the

East by : Block 1 land (25 Feet Road formed in A.S Sunanda property)
West by : LA. SA No.13 (Land belongs to Siddappa)
North by : Property belonging to A.S Sunanda
South by : NH 207 Road

B. Srinivas, Advocate
"SUNDERA RAMA" No.230, 39th 'C' Cross,
9th Main, 5th Block, Jayanagar,
Bangalore-560041
Ph-9741670685 / 9900148162
srinivasadvocate@gmail.com
Bangalore Date: 19-08-2024

ಮಾಲ್‌ಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ಮಹದೇವಪುರದ ವಿ.ಆರ್.ಮಾಲ್‌ಗೆ ಸೋಮವಾರ ಮಧ್ಯಾಹ್ನ 3ರ ಸುಮಾರಿಗೆ ದುಷ್ಕರ್ಮಿಗಳು ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಿದ್ದು, ಮಾಲ್‌ನಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಇ-ಮೇಲ್‌ನಲ್ಲಿ ಬೆದರಿಕೆ ಸಂದೇಶ ಬಂದಿತ್ತು. ಅದನ್ನು ಗಮನಿಸಿದ ಮಾಲ್‌ನ ಸಿಬ್ಬಂದಿ ಗ್ರಾಹಕರಿಗೆ ತಿಳಿಸಿ, ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲರನ್ನೂ ಹೊರಕ್ಕೆ ಕಳುಹಿಸಿದ್ದರು. ಬಳಿಕ, ಪೊಲೀಸರಿಗೂ ಮಾಹಿತಿ ನೀಡಿದ್ದರು.

ಮಾಲ್‌ಗೆ ಬಂದ ಶ್ವಾನದಳ ಮತ್ತು ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು. 'ಯಾವುದೇ ಸ್ಫೋಟಕ ವಸ್ತುಗಳು ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢವಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ವೈಟ್‌ಫೀಲ್ಡ್ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದರು.

ಇ-ಮೇಲ್‌ನಲ್ಲಿ ಏನಿತ್ತು: 'ನೀವು ಯಾರೂ ಬದುಕಲು ಅರ್ಹರಲ್ಲ. ಈ ಕಟ್ಟಡದ ಒಳಗೆ ಬಾಂಬ್ ಇದೆ. ಈ ಕಟ್ಟಡದ ಒಳಗಿರುವ ಎಲ್ಲರ ಜೀವ ರಕ್ತದ ಮಡುವಿನಲ್ಲಿ ಅಂತ್ಯವಾಗುತ್ತದೆ. ನಾನು ಮಾನವೀಯತೆಯನ್ನು ದ್ವೇಷಿಸುವೆ, ನೀವು ಯಾರೂ ಬದುಕಲು ಅರ್ಹರಲ್ಲ' ಎಂಬುದಾಗಿ ಇ-ಮೇಲ್‌ನಲ್ಲಿ ಬರೆಯಲಾಗಿತ್ತು.

ಕೆಪಿಸಿಸಿಯಿಂದ ಬೃಹತ್ ಪ್ರತಿಭಟನೆ • ಏಕವಚನದಲ್ಲೇ ವಾಗ್ದಾಳಿ ನಡೆಸಿದ ಸಚಿವರು • ರಾಷ್ಟ್ರಪತಿಗೆ ಮನವಿ

'ಗಲಾಟೆ ನಡೆದರೆ ರಾಜ್ಯಪಾಲರೇ ಹೊಣೆ'

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿ ವಿರುದ್ಧ ತನಿಖೆಗೆ ನೀಡಿರುವ ಅನುಮತಿಯನ್ನು ರಾಜ್ಯಪಾಲರು ಹಿಂಪಡೆಯುವಂತೆ ನಿರ್ದೇಶಿಸುವಂತೆ ಕೋರಿ ರಾಷ್ಟ್ರಪತಿಗೆ ಬೆಂಗಳೂರು ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಅವರ ಮೂಲಕ ಕಾಂಗ್ರೆಸ್ ಮುಖಂಡರು ಸೋಮವಾರ ಮನವಿ ಸಲ್ಲಿಸಿದರು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಬದಲಿ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮ ಖಂಡಿಸಿ, ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಿಂದ (ಕೆಪಿಸಿಸಿ) ಬೃಹತ್ ಪ್ರತಿಭಟನೆ ನಡೆಯಿತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಚಿವರು, ಶಾಸಕರು, ಪದಾಧಿಕಾರಿಗಳು ಹಾಗೂ ಅಪಾರ ಸಂಖ್ಯೆಯ ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು. ರಾಜ್ಯಪಾಲರ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದ ಸಚಿವರು, 'ಥಾವರ್‌ಚಂದ್ ಗೆಹಲೋತ್ ಅವರೇ ರಾಜ್ಯಬಿಟ್ಟು ತೊಲಗಿ' ಎಂದು ಆಗ್ರಹಿಸಿದರು.

ಸಚಿವ ಜಮೀರ್ ಅಹಮದ್ ಖಾನ್ ಮಾತನಾಡಿ, 'ರಾಜ್ಯಪಾಲರ ನಡೆ ಖಂಡನೀಯ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕೆ ಇಳಿಸುವ ಪ್ರಶ್ನೆಯೇ ಇಲ್ಲ. ಕಾಂಗ್ರೆಸ್ ಹೈಕಮಾಂಡ್, ರಾಜ್ಯದ ಜನರು ಮುಖ್ಯಮಂತ್ರಿಯವರ ಪರ ಇದ್ದಾರೆ. ಹಿಂದುಳಿದ ವರ್ಗಗಳ ನಾಯಕ ಸಿದ್ದರಾಮಯ್ಯ ಅವರ ಏಳಿಗೆಯನ್ನು ಸಹಿಸದೇ ಷಡ್ಯಂತ್ರ ನಡೆಸಲಾಗಿದೆ' ಎಂದು ಹೇಳಿದರು.

'ರಾಜ್ಯಪಾಲರ ಕ್ರಮ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯಯವರ ಅಭಿಮಾನಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಗದ್ದಲ, ದಾಂದಲೆ, ಹಲ್ಲೆಗಳು ನಡೆದರೆ ಅದಕ್ಕೆ ರಾಜ್ಯಪಾಲರೇ ಹೊಣೆ. ರಾಜ್ಯಪಾಲರ ಕಚೇರಿ ಬಿಜೆಪಿ ಕಚೇರಿಯಾಗಿ ಬದಲಾಗಿದೆ' ಎಂದು ವಾಗ್ದಾಳಿ ನಡೆಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಥಾವರ್‌ಚಂದ್ ಗೆಹಲೋತ್ ಅವರು ಘನತೆಯಿಲ್ಲದ ರಾಜ್ಯಪಾಲರು. ಅವರು ರಾಜ್ಯವನ್ನು ಬಿಟ್ಟು ತೊಲಗಬೇಕು. ಭ್ರಷ್ಟಾಚಾರದಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಪಿಎಚ್.ಡಿ ಮಾಡಿದ್ದಾರೆ. ಬ್ಲ್ಯಾಕ್‌ಮೇಲ್ ನೈಪುಣ್ಯತೆ ಯಿರುವ ಏಕೈಕ ವ್ಯಕ್ತಿಯೆಂದರೆ ಎಚ್.ಡಿ.ಕುಮಾರಸ್ವಾಮಿ. ಅವರೂ ಸಹ ಈಗ ಕಳ್ಳರಕೂಟ ಸೇರಿದ್ದಾರೆ' ಎಂದು ಆರೋಪಿಸಿದರು.

ಮುಖ್ಯಾಂಶಗಳು
- ಸಿದ್ದರಾಮಯ್ಯ ಅವರ ಏಳಿಗೆಯನ್ನು ಸಹಿಸದೇ ಷಡ್ಯಂತ್ರ: ಜಮೀರ್
- ಘನತೆಯಿಲ್ಲದ ರಾಜ್ಯಪಾಲರು ರಾಜ್ಯವನ್ನು ಬಿಟ್ಟು ತೊಲಗಬೇಕು: ದಿನೇಶ್

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಮಾತನಾಡಿ, 'ಥಾವರ್‌ಚಂದ್ ಗೆಹಲೋತ್ ಒಬ್ಬ ಅಯೋಗ್ಯ, ಬೇಜವಾಬ್ದಾರಿ ರಾಜ್ಯಪಾಲ. ಯಾವುದೇ ದಾಖಲೆಗಳಿಲ್ಲದೇ ತನಿಖೆಗೆ ಅನುಮತಿ ನೀಡಿದ್ದಾರೆ. ನಾವು ಹೋರಾಟದಿಂದಲೇ ಅಧಿಕಾರಕ್ಕೆ ಬಂದಿದ್ದೇವೆ. ಈಗಲೂ ಸುಮ್ಮನೆ ಕೂರಲ್ಲ. ಹೋರಾಟ ತೀವ್ರವಾಗಲಿದೆ' ಎಂದು ಎಚ್ಚರಿಸಿದರು.

ಸಿ.ಎಂ ಸಿದ್ದರಾಮಯ್ಯ ಅವರು ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಫೋಟೋ ಜರ್ನಲಿಸ್ಟ್ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಫೋಟೋ ಎಕ್ಸಿಬಿಷನ್ ಅನ್ನು ಉದ್ಘಾಟನೆ ಮಾಡಿ ತಮ್ಮ ಚಿತ್ರವನ್ನು ಸ್ವತಃ ಕ್ಲಿಕ್ಕಿಸಿದರು

'ಕಾಂಗ್ರೆಸ್ ಮುಗಿಸುವುದು ಬಿಜೆಪಿ ಭ್ರಮೆ'

ಬೆಂಗಳೂರು: 'ನಾನು ಬಡಜನರ ಪರವಾಗಿ ಇರುವುದೇ ವಿರೋಧ ಪಕ್ಷಗಳ ಭಯಕ್ಕೆ ಕಾರಣವಾಗಿದೆ. ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಿರುವುದು ಅವರನ್ನು ಕಾಡುತ್ತಿದೆ. ನನ್ನನ್ನು ರಾಜಕೀಯವಾಗಿ ಮುಗಿಸಿದರೆ, ಕಾಂಗ್ರೆಸ್ ಮುಗಿಸಬಹುದು ಎಂಬ ಭ್ರಮೆಯಲ್ಲಿ ಬಿಜೆಪಿಯವರಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಸೋಮವಾರ ಪತ್ರಿಕಾ ಛಾಯಾಗ್ರಾಹಕರ ಛಾಯಾಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಿ ಬಳಿಕ ಅವರು ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನನ್ನ ಆತ್ಮಸಾಕ್ಷಿ ಸ್ಪಷ್ಟವಾಗಿದ್ದು, ನಾನು ಯಾವ ತಪ್ಪನ್ನೂ ಮಾಡಿಲ್ಲ' ಎಂದರು.

ನೆಲದ ಕಾನೂನು ಗೌರವಿಸುವ ಒಬ್ಬ ಪ್ರಜೆಯಾಗಿ, ಸುಳ್ಳು ಪ್ರಕರಣದಲ್ಲಿ ನನ್ನ ಮೇಲೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ರಾಜಕೀಯ ಪ್ರೇರಿತ ನಿರ್ಣಯದ ವಿರುದ್ಧ ಹೈಕೋರ್ಟ್‌ಗೆ ಮೊರೆ ಹೋಗಿದ್ದೇನೆ. ಯಾವುದೇ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು ಎಂದು ಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಅಂತಿಮ ಗೆಲುವು ಸತ್ಯದ್ದೇ ಆಗಿರಲಿದೆ ಎಂಬುದು ನನ್ನ ದೃಢ ನಂಬಿಕೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ನಗರಸಭಾ ಕಾರ್ಯಾಲಯ ರಾಮನಗರ
ರಾಮನಗರ ಜಿಲ್ಲೆ – 562 159.
ದೂ.: 080–27271286. ಇಮೇಲ್: ka.ramanagara.cmc@gmail.com
ವೆಬ್‌ಸೈಟ್: www.ramanagaracity.mrc.gov.in

ಸಂಖ್ಯೆ : ನ.ಸ.ರಾ./ಆ.ಶಾ./ಸ.ಕಾ.ಅ. (ಪ.ಅ.)/ಟೆಂಡರ್/ಸಿಆರ್/ಲೆಗೆಸಿ/15ನೇ ಹ.ಕಾ./15/2023–24 ದಿನಾಂಕ : 14–08–2024

ಮರು ಟೆಂಡರ್ ಪ್ರಕಟಣೆ

2023–24 ನೇ ಸಾಲಿನ 15 ನೇ ಹಣಕಾಸು ಯೋಜನೆಯಡಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಟೆಂಡರ್ ಕರೆಯಲಾಗಿರುತ್ತದೆ. **ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಭಾಗವಹಿಸಲು ಕೊನೆಯ ದಿನಾಂಕ : 30–08–2024 ರ ಸಂಜೆ 4.30 ಆಗಿರುತ್ತದೆ.**

1) ವಿವರ : ಹೈಡ್ರಾಲಿಕ್ ಮಿನಿ ಎಕ್ಸಾವೇಟರ್ ಖರೀದಿ, DMA/2023-24/IND0918/Call-3. ಅಂದಾಜು ಮೊತ್ತ (ರೂ. ಗಳಲ್ಲಿ) : 33,00,000.00, ಇ.ಎಂ.ಡಿ. ಮೊತ್ತ : (ರೂ. ಗಳಲ್ಲಿ) : 82,500.00, ಅನುದಾನದ ವಿವರ : 2023–24 ನೇ ಸಾಲಿನ 15ನೇ ಹಣಕಾಸು.

ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಆಡಳಿತಾಧಿಕಾರಿಗಳು, ನಗರಸಭೆ, ರಾಮನಗರ. | ಸಹಿ/– ಪೌರಾಯುಕ್ತರು, ನಗರಸಭೆ, ರಾಮನಗರ.
ಡಿಐಪಿಆರ್/ರಾಮನಗರ/244/ಮಣಿಪಾಲ್/2024–25

PUBLIC NOTICE

It is hereby notified that, our clients have agreed to purchase the Schedule Property from its Owner **SRI.ADESH SURI** S/o late Sri.K.L.Suri, residing at No.134 83/3B, Sri Kapaleeshwarar Nagar, Karunanithi Salai, Neelankarai, Kancheepuram, Injambakkam, Tamil Nadu-600115. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **7 (Seven) days** from the date of publication of this notice. Objection/s received thereafter will not be binding on our clients.

SCHEDULE

All that piece and parcel of the vacant immovable property bearing **Municipal No.2547/2388/A/3 (Plot No.2 & 3 in Sy.No.63), admeasuring 17,240 Sq.ft,** situated at **Kasavanahalli Village,** Varthur Hobli, Bengaluru East Taluk (formerly known as Bengaluru South Taluk), Bengaluru Urban District, within administrative jurisdiction of BBMP No.150 and bounded as follows:

East by : Plot bearing No.4
West by : Road
North by : Road and portion of Plot No.3
South by : Plot bearing Nos.10 & 11

Sd/- BAYYA REDDY. M
For ISHA LAW CHAMBERS LLP
Advocates & Solicitors,
No.101, 2nd Floor, Sri Manjunatha Complex, 22nd Main, BSK 2nd Stage,
Opp : Banashankari BDA Complex, Bengaluru-560070

ನೈಋತ್ಯ ರೈಲ್ವೆ

ಪಾರ್ಸಲ್ ಸ್ಥಳ, ಪಾರ್ಕಿಂಗ್ & ಬಿಟ್ ಆಫ್ ಹೋಂ ಜಾಹೀರಾತು/ಪ್ರಕಟಣೆಗಳ ಗುತ್ತಿಗೆಗಾಗಿ ಇ–ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ–ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ:

1. ಕೇಟರಿಂಗ್ & ಎಂಪಿಎಸ್: 20.08.2024
2. ಪಾರ್ಸಲ್‌ಗಳು: 20.08.2024, 22.08.2024, 26.08.2024, 28.08.2024
3. ಪಾರ್ಕಿಂಗ್ & ಪಾವತಿ ಮತ್ತು ಬಳಕೆ: 20.08.2024, 21.08.2024, 26.08.2024, 27.08.2024, 28.08.2024
4. ಜಾಹೀರಾತು: 29.08.2024
5. ವಿವಿಧ: 20.08.2024, 22.08.2024, 23.08.2024, 29.08.2024, 30.08.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ [illegible]

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು
PUB/353/AAMO/PRB/SWR/2024-25
South Western Railway - SWR | SWRRLY | SWRRLY

ರಾಜ್ಯಪಾಲರ ಕ್ರಮವನ್ನು ಖಂಡಿಸಿ ಸಾಹಿತಿಗಳು, ರಂಗಕರ್ಮಿಗಳು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ಸಾಹಿತಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ' ನಿವೇಶನ ಹಂಚಿಕೆ ಪ್ರಕರಣದ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮ ಖಂಡಿಸಿ 'ಪ್ರಜಾಪ್ರಭುತ್ವ ಕ್ಕಾಗಿ ನಾವು-ಸಮಾನ ಮನಸ್ಕರು' ಸಂಘಟನೆ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಹಿತಿಗಳು, ರಂಗಕರ್ಮಿಗಳು, ಸಾಮಾಜಿಕ ಕಾರ್ಯಕರ್ತರೂ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಸೋಮವಾರ ಪ್ರತಿಭಟಿಸಿದರು.

ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಸಾಹಿತಿ ಅರವಿಂದ ಮಾಲಗತ್ತಿ ಮಾತನಾಡಿ, 'ಬಿಜೆಪಿಯವರು ಸಂವಿಧಾನ ಪರ ಇದ್ದೇವೆ ಎಂದು ಹೇಳಿಕೊಳ್ಳುತ್ತಾರೆ. ಸಂವಿಧಾನಾತ್ಮಕವಾಗಿ ಅಧಿಕಾರಕ್ಕೆ ಬಂದವರ ಮೇಲೆ ಅಸಂವಿಧಾನಿಕವಾಗಿ ಷಡ್ಯಂತ್ರ ರಾಜಕಾರಣ ನಡೆಸುತ್ತಿದ್ದಾರೆ' ಎಂದು ಆಕ್ರೋಶ ಹೊರಹಾಕಿದರು.

ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್. ಎನ್.ಮುಕುಂದರಾಜ್, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರು ತನಿಖೆಗೆ ಆದೇಶ ನೀಡುವ ಮೂಲಕ ಮಲಗಿರುವ ಕನ್ನಡಿಗರನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ. ಸಂವಿಧಾನ ಉಳಿಸಲು ಎಲ್ಲರೂ ಒಗ್ಗಟ್ಟು ಪ್ರದರ್ಶಿಸುವ ಸಮಯ ಮತ್ತೆ ಬಂದಿದೆ. ಸಂವಿಧಾನವನ್ನು ಕಾಪಾಡುವುದು ಕನ್ನಡಿಗರ ರಕ್ತಗತವಾದ ಗುಣ' ಎಂದು ಪ್ರತಿಪಾದಿಸಿದರು.

ಲೇಖಕಿ ವಿಜಯಮ್ಮ ಮಾತನಾಡಿ, 'ಅಸಂವಿಧಾನಿಕವಾಗಿ ರಾಜ್ಯದ ಮೇಲೆ ಕಣ್ಣು ಹಾಕಿರುವವರ ವಿರುದ್ಧ ಹೋರಾಟ ಅನಿವಾರ್ಯ. ಸಿದ್ದರಾಮಯ್ಯ ಅವರನ್ನು ಪಲ್ಲಟಗೊಳಿಸುವ ಕೆಲಸವನ್ನು ರಾಜ್ಯಪಾಲರ ಮೂಲಕ ಮನುವಾದಿ ಮನಃಸ್ಥಿತಿಗಳು ಮಾಡುತ್ತಿವೆ' ಎಂದರು.

ಪ್ರತಿಭಟನೆಯಲ್ಲಿ ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಸಾಹಿತಿಗಳಾದ ಕೆ. ಮರುಳಸಿದ್ದಪ್ಪ, ಎಸ್.ಜಿ. ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಪತ್ರಕರ್ತ ದಿನೇಶ್ ಅಮಿನ್ ಮಟ್ಟು, ಶಿಕ್ಷಣ ತಜ್ಞ ಬಿ.ಶ್ರೀಪಾದ್ ಭಟ್, ಗಾಯಕ ಪಿಚ್ಚಳ್ಳಿ ಶ್ರೀನಿವಾಸ್, ಹೋರಾಟಗಾರ್ತಿ ಕೆ.ಎಸ್.ವಿಮಲಾ, ರಾಜಪ್ಪ ದಳವಾಯಿ, ವಿಚಾರವಾದಿಗಳ ವೇದಿಕೆಯ ನಾಗೇಶ್ ಅರಳಕುಪ್ಪೆ ಮತ್ತಿತರರಿದ್ದರು.

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್
TeamLease® Putting India to Work
CIN: L74140KA2000PLC118395
315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.
ದೂರವಾಣಿ: + 91 80 6824 3333 / ಫ್ಯಾಕ್ಸ್: + 91 80 6824 3001
corporateaffairs@teamlease.com | https://group.teamlease.com

ಇಪ್ಪತ್ತನಾಲ್ಕನೇ (24ನೇ) ವಾರ್ಷಿಕ ಸರ್ವಸದಸ್ಯರ ಸಭೆ, ರಿಮೋಟ್ ಇ-ವೋಟಿಂಗ್ ಮತ್ತು ಅಂತಿಮ ದಿನಾಂಕದ ವಿವರಗಳು

[illegible]

ಇ-ವೋಟಿಂಗ್ ಪ್ರಾರಂಭ	ಇ-ವೋಟಿಂಗ್ ಮುಕ್ತಾಯ
ಸೆಪ್ಟೆಂಬರ್ 17, 2024 ಭಾ.ಕಾ. ಬೆಳಿಗ್ಗೆ 09.00	ಸೆಪ್ಟೆಂಬರ್ 19, 2024 ಭಾ.ಕಾ. ಸಂಜೆ 05.00

[illegible]

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/-
ಅಲಕಾ ಚಾವ್ಲಾ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲೈಯನ್ಸ್ ಆಫೀಸರ್
(M. No. F10911)
ದಿನಾಂಕ : ಆಗಸ್ಟ್ 19, 2024
ಸ್ಥಳ : ಬೆಂಗಳೂರು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ(ಉ)/ಕಾನಿಇಂ(ಕ)/ಸಕಾಇಂ–3/ಕ–98(12)/24–25/3770–3773 ದಿನಾಂಕ: 17.08.2024

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಂಯು, ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ(ಉ)/ಕಾನಿಇಂ(ಕ)/ಸಕಾಇಂ–3/23–24/ಇಪಿಆರ್–02 ದಿನಾಂಕ: 20.05.2023 ರ ಅನ್ವಯ ವಿವಿಧ ಉಪಕೇಂದ್ರಗಳಿಗೆ ಅವಶ್ಯವಿರುವ ಕಾಪರ್ ಕಂಟ್ರೋಲ್ ಕೇಬಲ್ ಸರಬರಾಜು ಮಾಡಲು ಬಿಡ್‌ಗಳನ್ನು ಆಹ್ವಾನಿಸಿದೆ – ಕರೆ – 5.

ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ದಿನಾಂಕ 21.08.2024 ರಂದು ಅಥವಾ ಆನಂತರ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ 'E Procurement KPTCL' ಹೈಪರ್‌ಲಿಂಕ್‌ನಲ್ಲಿ ಅಥವಾ https://kppp.karnataka.gov.in ಇಲ್ಲಿಗೆ ಲಾಗ್‌ಇನ್ ಆಗಿ ಪಡೆದುಕೊಳ್ಳಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ., ಉತ್ತರ ವೃತ್ತ, ನೆಲಮಹಡಿ, ಕ.ವಿ.ಪ್ರ.ನಿ.ನಿ, ಕಛೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು–09.

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–02/17/2024–25 ದಿನಾಂಕ: 19.08.2024

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಕರಣ್‌ಅಗರ್‌ವಾಲ್, ಶ್ರೀ ಲಲಿತ್‌ಅಗರ್‌ವಾಲ್, ಶ್ರೀ ಗನ್‌ಶ್ಯಾಮ್‌ಕುಮಾರ್, ಶ್ರೀ ಅರಿಂದಮ್ ಬನೇರ್ಜಿ, ಶ್ರೀಮತಿ ಮುನಿರತ್ನ ಮತ್ತು ಶ್ರೀ ವೆಂಕಟಪ್ಪ ಇವರುಗಳು ರಾಮನಗರಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 564ರಲ್ಲಿ 0ಎ–39.08ಗುಂ, ಸರ್ವೆ ಸಂಖ್ಯೆ: 565ರಲ್ಲಿ 01ಎ–05.08 ಗುಂ. ಸರ್ವೆ ಸಂಖ್ಯೆ: 566 ರಲ್ಲಿ 01ಎ–05.08ಗುಂ. ಸರ್ವೆ ಸಂಖ್ಯೆ: 567 ರಲ್ಲಿ 01ಎ–05.08ಗುಂ. ಸರ್ವೆ ಸಂಖ್ಯೆ: 568 ರಲ್ಲಿ 01ಎ–05.08ಗುಂ. ಸರ್ವೆ ಸಂಖ್ಯೆ: 569ರಲ್ಲಿ 01ಎ–05.08ಗುಂ. ಸರ್ವೆ ಸಂಖ್ಯೆ: 570 ರಲ್ಲಿ 01ಎ–05.08ಗುಂ. ಸರ್ವೆ ಸಂಖ್ಯೆ: 571ರಲ್ಲಿ01ಎ–05.08ಗುಂ. ಸರ್ವೆ ಸಂಖ್ಯೆ: 572ರಲ್ಲಿ 01ಎ–05.08ಗುಂ. ಸರ್ವೆ ಸಂಖ್ಯೆ: 573ರಲ್ಲಿ 01ಎ–05.08ಗುಂ. ಸರ್ವೆ ಸಂಖ್ಯೆ: 574ರಲ್ಲಿ 01ಎ–05.04ಗುಂ ಮತ್ತು ಸರ್ವೆ ಸಂಖ್ಯೆ: 578ರಲ್ಲಿ 01ಎ–05.08ಗುಂ ಒಟ್ಟು 13ಎಕರೆ–19.12ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು "ವ್ಯವಸಾಯ" ವಲಯದಿಂದ "ವಸತಿ" ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1. ಈ ಜಮೀನಿನ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಮಧ್ಯಮ ವರ್ಗದ ಸಾರ್ವಜನಿಕರಿಗೆ ಅಂದರೆ, ಮಧ್ಯಮ ಆದಾಯ ಹೊಂದಿರುವ ವರ್ಗಕ್ಕೆ ಮತ್ತು ಆರ್ಥಿಕವಾಗಿ ದುರ್ಬಲ ಹೊಂದಿರುವ ವರ್ಗಕ್ಕೆ, ಸುಸಜ್ಜಿತವಾಗಿ ಅಭಿವೃದ್ಧಿ ಹೊಂದಿದ ವಾಸದ ನಿವೇಶನಗಳು ಯೋಗ್ಯ ಬೆಲೆಯಲ್ಲಿ ಲಭ್ಯವಾಗುತ್ತವೆ.
2. ಈ ಜಮೀನಿನ ವಿನ್ಯಾಸ ಕೈಗೊಳ್ಳುವ ಸಂದರ್ಭದಲ್ಲಿ ಹಾಗೂ ಅಭಿವೃದ್ಧಿಪಡಿಸುವ ಸಮಯದಲ್ಲಿ ಸುತ್ತಮುತ್ತಲಿನ ಕಾರ್ಮಿಕರಿಗೆ ಉದ್ಯೋಗಾವಕಾಶಗಳು ದೊರಕುತ್ತವೆ.
3. ಈ ಜಮೀನಿನ ವಿನ್ಯಾಸಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶವೂ ಸಹ ಅಭಿವೃದ್ಧಿ ಹೊಂದುತ್ತದೆ.
4. ಯೋಜನಾ ಬದ್ಧವಾದ ವಿನ್ಯಾಸ ಅಭಿವೃದ್ಧಿಯಿಂದ ಉತ್ತಮ ರಸ್ತೆಗಳು, ನಾಗರೀಕಸೌಕರ್ಯ ಹೊಂದಿದ ಪ್ರದೇಶ ಹಾಗೂ ಉದ್ಯಾನವನಗಳು, ಇತ್ಯಾದಿ, ಸಾರ್ವಜನಿಕರಿಗೆ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾಸಾಸಂಇ/ವಾಪ್ರ/1544/MAA /24–25

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE
HIGH COURT: MADRAS
S.A.No. 640 of 2009
Against
A.S.No. 5 of 2005
(Additional District Judge of Krishnagiri)
Jayamma (Died) and others Vs R. Subramaniam and others
To
A.S. Sandiya Rani,
D/o N. Amarnath Sharma,
No. S 54-A, Kirloskar Colony,
3rd Stage, Basaveshwar Nagar,
Bangalore-560079,
In the above appeal notice to you returnable by 10.09.2024 has been ordered by the High Court of Madras on 13.08.2024. Please make arrangements to represent the appeal as and when it is listed failing which orders will be passed in your absence.
M/s V, Nicholas and N.E.A. Dinesh Advocates,
No.116, Additonal Law Chambers, High Court, Chennai-600 104.
Mobile: 9381034891
Counsel for Appellants

ಮಾರ್ಗದರ್ಶಿ ಚಿಟ್ (ಕರ್ನಾಟಕ) ಪ್ರೈ. ಲಿ.
ಮಾರತ್‌ಹಳ್ಳಿ ಶಾಖೆ, ಬೆಂಗಳೂರು
ಸಾರ್ವಜನಿಕ ಪ್ರಕಟಣೆ
ಸಂಬಂಧಪಟ್ಟ ಎಲ್ಲಾ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ವ್ಯಾಪಾರ ಅನುಕೂಲಕರ ಉದ್ದೇಶದಿಂದ ದಿನಾಂಕ 14–08–2024 ರಿಂದ ನಾವು ನಮ್ಮ ಕಚೇರಿ ಆವರಣವನ್ನು ನಂ 20, 3ನೇ ಮಹಡಿ, ಕೃಷ್ಣ ಶೈನ್ ಕಾಂಪ್ಲೆಕ್ಸ್ ಎಸ್‌ಬಿಐ ಮೇಲೆ, ಮಾರತಹಳ್ಳಿ ಬೆಂಗಳೂರು 560037 ರಿಂದ "ಜೆನಿತ್ ಸ್ಕ್ವೇರ್" ನಂ. 60, ಆರ್ ಜೆ ಗಾರ್ಡನ್, ಔಟರ್ ರಿಂಗ್ ರೋಡ್, ಆನಂದ್ ನಗರ, ಮಾರತಹಳ್ಳಿ, ಬೆಂಗಳೂರು 560037 ನ ಹೊಸ ಆವರಣಕ್ಕೆ ಬದಲಾಯಿಸುತ್ತಿದ್ದೇವೆ. ಯಾವುದೇ ರೀತಿಯ ಸಂವಹನಕ್ಕಾಗಿ ಎಲ್ಲಾ ಸಂಬಂಧಪಟ್ಟವರು ಹೊಸ ಆವರಣವನ್ನು ಸಂಪರ್ಕಿಸಲು ಸೂಚಿಸುತ್ತೇವೆ.

PERSONAL

Announcements

ANNOUNCEMENT
I, **Krishna Murthy Son of Late Sri N. Raja Rao** R/at No.27/2, Kesari Nilaya, H.B. Samaja Road, Gandhi Bazar, Basavangudi, Bengaluru-560 004, do here by declare that both the names i.e. N.R. Krishna Murthy & Krishna Murthy are one and the same and refers to me only. Henceforth I shall be known and called as **KRISHNA MURTHY** only, for all purposes as set out vide affidavit dated 19-08-2024 sworn before Advocate & Notary S. Vijayalakshmi, Bengaluru-560001

Change of Name

CHANGE OF NAME
I, **GANESH MALAGI**, residing at #502, Hearty Homes, Ganesh Temple Road, HAL Layout, Singasandra, Bengaluru-560068, have changed my name to **GANESH ASHOK MALAGI** vide affidavit dated 19-08-2024 before notary A.S.Narayana Reddy, Bengaluru. Henceforth I shall be called as **GANESH ASHOK MALAGI** only

I, SUHASINI.H.M., W/o Supreeth.P, D/o H.B.Mrithyunjaya, R/o.No.14, Ulsoor Road, Ulsoor, Bengaluru-08, have changed my name from SUHASINI.H.M. to SUHASINI, for all intents and purposes, vide Affidavit dated 17-08-2024, sworn before Notary: Sivakumara.M.N., Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD **Classifieds** More value, more impact | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9901641752 | 080- 45557163/164
*Conditions apply

ನೃಪತುಂಗ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನೃಪತುಂಗ ವಿಶ್ವವಿದ್ಯಾಲದಯ ಪ್ರಥಮ ಘಟಿಕೋತ್ಸವ ಬುಧವಾರ (ಆಗಸ್ಟ್ 21) ಬೆಳಿಗ್ಗೆ 11ಕ್ಕೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ. ಬೇರೆ ಬೇರೆ ಕ್ಷೇತ್ರದ ಮೂವರು ಸಾಧಕರಿಗೆ ಗೌರವ ಡಾಕ್ಟರೇಟ್, ವಿವಿಧ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ 16 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುವುದು ಎಂದು ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ಎಸ್. ಬಳ್ಳಿ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, '792 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. ಇಸ್ರೊ ವಿಜ್ಞಾನಿ ನಂದಿನಿ ಹರಿನಾಥ, ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್‌ನ ರಾಮಸ್ವಾಮಿ ಬಾಲಸುಬ್ರಮಣಿಯನ್ ಮತ್ತು ಇನ್ಫೊಸಿಸ್ ಸಂಸ್ಥಾಪಕರಲ್ಲಿ ಒಬ್ಬರಾದ ದಿನೇಶ ಕೆ. ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು' ಎಂದರು.

2020-22ರ ಬ್ಯಾಚ್‌ನ 169 ಮತ್ತು 2021-23ರ ಬ್ಯಾಚ್‌ನ 169 ಸ್ನಾತಕೋತರ ಪದವೀಧರರಿಗೆ ಮತ್ತು 2020-23ರ 454 ಸ್ನಾತಕ ಪದವೀಧರರಿಗೆ ಪದವಿ ಪ್ರದಾನ ಮಾಡಲಾಗುವುದು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ ಎಂ.ಜಗದೀಶ್ ಭಾಗವಹಿಸುವರು ಎಂದರು. ನೃಪತುಂಗ ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಕುಲಸಚಿವ ಶಿವಾನಂದ ಬ. ಕರಾಳೆ ಮತ್ತು ಮೌಲ್ಯಮಾಪನ ಕುಲಸಚಿವ ಎ.ಸಿ. ಮಂಜುಳಾ ಭಾಗವಹಿಸಿದ್ದರು.

1,060 ಎಫ್‌ಐಆರ್, ₹5.30 ಲಕ್ಷ ದಂಡ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿ, ಚಾಲನೆ ಮಾಡುತ್ತಿರುವ ದ್ವಿಚಕ್ರ ವಾಹನಗಳ ಸವಾರರು ಹಾಗೂ ವಾಹನ ಚಾಲಕರ ವಿರುದ್ಧ ಪೂರ್ವ ಸಂಚಾರ ವಿಭಾಗದ ಪೊಲೀಸರು ವಿಶೇಷ ಕಾರ್ಯಾಚರಣೆ ಮುಂದುವರೆಸಿದ್ದು, ಒಟ್ಟು 1,060 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಯಾಣಿಕರು ಕೇಳಿದ ಸ್ಥಳಕ್ಕೆ ಬಾಡಿಗೆಗೆ ತೆರಳಲು ನಿರಾಕರಣೆ, ದುಬಾರಿ ಬಾಡಿಗೆ, ಟ್ರಾಫಿಕ್ ಸಿಗ್ನಲ್ ದಾಟಿ ನಿಯಮ ಉಲ್ಲಂಘನೆ, ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ವಾಹನ ಚಾಲನೆ, ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆ, ದ್ವಿಚಕ್ರ ವಾಹನದಲ್ಲಿ ಮೂವರ ಸವಾರಿ, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ, ಸುರಕ್ಷತಾ ಬೆಲ್ಟ್ ಧರಿಸದೆ ವಾಹನ ಚಾಲನೆ, ನಿಗದಿಗಿಂತ ಹೆಚ್ಚಿನ ಶಾಲಾ ಮಕ್ಕಳನ್ನು ವಾಹನದಲ್ಲಿ ಕರೆದೊಯ್ಯುವುದು, ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಸವಾರಿ ಮಾಡಿ ನಿಯಮ ಉಲ್ಲಂಘಿಸುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ಸಂಚಾರ ನಿಯಮ ಉಲ್ಲಂಘಿಸಿದ ಸವಾರರಿಂದ ಒಂದೇ ದಿನದಲ್ಲಿ ₹5.30 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಮನೆಗೆ ತೆರಳಲು ವಿದ್ಯಾರ್ಥಿಗಳ ಪರದಾಟ ● ವಾಹನ ಸಂಚಾರಕ್ಕೆ ಅಡ್ಡಿ

ಎನ್‌ಟಿಐ ಲೇಔಟ್‌ನಲ್ಲಿ ಜಲಾವೃತಗೊಂಡ ರಸ್ತೆ ದಾಟಲು ವಿದ್ಯಾರ್ಥಿಗಳಿಗೆ ಪೋಷಕರು ನೆರವಾದರು
–ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ಧನ್

ರಸ್ತೆಯಲ್ಲೇ ಮಳೆ ನೀರು ನಾಗರಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲವು ಭಾಗಗಳಲ್ಲಿ ಸೋಮವಾರ ಮಧ್ಯಾಹ್ನ ಸುರಿದ ಮಳೆಯಿಂದ ಹಲವು ರಸ್ತೆಗಳು ಜಲಾವೃತಗೊಂಡು, ವಿದ್ಯಾರ್ಥಿಗಳು ಮನೆಗೆ ಹೋಗಲು ಹರಸಾಹಸಪಟ್ಟರು.

ಮಳೆ ಹೆಚ್ಚು ಸುರಿಯದಿದ್ದರೂ ನೀರು ಚರಂಡಿಗಳಲ್ಲಿ ಸಾಗದೆ, ರಸ್ತೆಯ ಮೇಲೇ ನಿಂತಿದ್ದರಿಂದ ನಾಗರಿಕರು, ವಾಹನಗಳು ಮಧ್ಯದಲ್ಲಿಯೇ ಸಿಲುಕಿಕೊಂಡಿದ್ದವು. ಹಲವು ವಾಹನಗಳು ಕೆಟ್ಟು ನಿಂತಿದ್ದರಿಂದ, ನಾಗರಿಕರು ಅವುಗಳನ್ನು ತಳ್ಳಿದರು.

ನಾಗಶೆಟ್ಟಿಹಳ್ಳಿ ಸಮೀಪದ ಎನ್‌ಟಿಐ ಬಡಾವಣೆಯ ಪ್ರೆಸ್ಟೀಜ್ ಫೇರ್ ಫೀಲ್ಡ್ ಬಳಿ ರಸ್ತೆಯಲ್ಲಿ ಸುಮಾರು ಎರಡು ಅಡಿ ನೀರು ನಿಂತಿತ್ತು. ಶಾಲೆಯಿಂದ ಮನೆಗೆ ಹೊರಟ ವಿದ್ಯಾರ್ಥಿಗಳು ರಸ್ತೆ ದಾಟಲು ಸಾಹಸ ಮಾಡಿದರು. ಸ್ಥಳೀಯರು, ಶಿಕ್ಷಕರು, ಪೋಷಕರು ರಸ್ತೆ ದಾಟಲು ಅವರಿಗೆ ನೆರವಾದರು.

ಹೆಬ್ಬಾಳ ಜಂಕ್ಷನ್‌ನ ಸುತ್ತಮುತ್ತಲ ರಸ್ತೆಯಲ್ಲಿ ಎಂದಿನಂತೆ ಸೋಮವಾರ ಮಧ್ಯಾಹ್ನವೂ ಮಳೆನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಸರ್ವಿಸ್ ರಸ್ತೆಗಳ ತುಂಬ ನೀರು ನಿಂತು ವಾಹನ ಸವಾರರು ನೀರಿನಲ್ಲೇ ಸಾಗಲು ಪರದಾಡಿದರು.

ಹೆಣ್ಣೂರು– ಬಾಗಲೂರು ಮುಖ್ಯರಸ್ತೆ, ವಡ್ಡರಪಾಳ್ಯ ಜಂಕ್ಷನ್, ಯೋಗೇಶ್ವರನಗರ ಕ್ರಾಸ್‌ನಿಂದ ವೀರಣ್ಣ ಪಾಳ್ಯ, ದೇವಿನಗರದ ಅಂಡರ್‌ಪಾಸ್, ಸದಾಶಿವನಗರ ಪೊಲೀಸ್ ಠಾಣೆ, ವಿಂಡ್ಸರ್ ಮ್ಯಾನರ್ ರೈಲ್ವೆ ಸೇತುವೆ, ನಾಗವಾರ ಕೆಐಬಿಯಿಂದ ಹೆಣ್ಣೂರು ಕ್ರಾಸ್, ಸಂಜಯನಗರ ಕ್ರಾಸ್‌ನಿಂದ ವಿಮಾನ ನಿಲ್ದಾಣ, ಎಚ್‌ಆರ್‌ಬಿಆರ್ ಲೇಔಟ್, ಕಲ್ಯಾಣನಗರ, ಜಯಮಹಲ್ ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ವಿಶ್ವನಾಥ ನಾಗೇನಹಳ್ಳಿಯಲ್ಲಿ 3.5 ಸೆಂ.ಮೀ, ಕೊಡಿಗೇ-ಹಳ್ಳಿಯಲ್ಲಿ 2.8 ಸೆಂ.ಮೀ, ಬಾಣಸವಾಡಿಯಲ್ಲಿ 1.8 ಸೆಂ.ಮೀ, ಕುಶಾಲನಗರದಲ್ಲಿ 1.7 ಹಾಗೂ ರಾಜಮಹಲ್ ಗುಟ್ಟಹಳ್ಳಿಯಲ್ಲಿ 1.2 ಸೆಂ.ಮೀ ಮಳೆಯಾಯಿತು.

ಮಲ್ಲೇಶ್ವರದ ಸಂಪಿಗೆ ರಸ್ತೆ ಸಮೀಪದ ನಾಗಪ್ಪ ಸ್ಟ್ರೀಟ್‌ನಲ್ಲಿ ಮರ ಉರುಳಿಬಿದ್ದಿ, ಸ್ಕೂಟಿ ವಾಹನ ಜಖಂಗೊಂಡಿತು.

ನಗರದ ಹೊರವರ್ತುಲ ರಸ್ತೆ ಸಮೀಪದ ಬಾಬುಸಾಪಾಳ್ಯದ ಸರ್ವಿಸ್ ರಸ್ತೆಯಲ್ಲಿ ಮಳೆ ನೀರಿನಲ್ಲೇ ವಾಹನ ಸವಾರರ 'ಸಂಚಾರ ಸಾಹಸ'
– ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಸಂಪಿಗೆ ರಸ್ತೆ ಸಮೀಪದ ನಾಗಪ್ಪ ಸ್ಟ್ರೀಟ್‌ನಲ್ಲಿ ಸ್ಕೂಟಿ ಮೇಲೆ ಬಿದ್ದ ಮರ

ಆರ್‌ಎಂವಿ 2ನೇ ಹಂತದ ಡಾಲರ್ಸ್ ಕಾಲೊನಿಯ ರಸ್ತೆಯಲ್ಲಿ ತುಂಬಿದ್ದ ಮಳೆನೀರಿನಲ್ಲಿ ಸಂಚರಿಸಿದ ಕಾರು
– ಪ್ರಜಾವಾಣಿ ಚಿತ್ರ

ಭಾನುವಾರ ಸುರಿದ ಮಳೆಯಿಂದ ಸೋಂಪುರ ಹೋಬಳಿಯ ರಾಗಿ ಹೊಲದಲ್ಲಿ ನಿಂತಿರುವ ಮಳೆ ನೀರು

ನಿರಂತರ ಮಳೆ: ಬೆಳೆ ಕೊಳೆಯುವ ಆತಂಕ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಹಲವು ದಿನಗಳಿಂದ ನಿತ್ಯ ಸುರಿಯುತ್ತಿರುವ ಮಳೆಯಿಂದ ಸೋಂಪುರ ಹೋಬಳಿಯ ರೈತರ ಮೊಗದಲ್ಲಿ ಬೇಸರ ಮೂಡಿದೆ.

ಮುಂಗಾರು ಮಳೆಗೆ ಹೋಬಳಿಯಾದ್ಯಂತ ತೊಗರಿ, ಅಲಸಂದೆ, ಅವರೆ, ಮೆಕ್ಕೆಜೋಳ, ಕಡಲೆ ಕಾಯಿ, ಬಿತ್ತನೆ ಮಾಡಲಾಗಿದೆ. ಜುಲೈ ತಿಂಗಳ ಮಧ್ಯಭಾಗದಿಂದ ಆಗಸ್ಟ್ ತಿಂಗಳ ಮೊದಲ ವಾರದವರೆಗೆ ರಾಗಿ ಬಿತ್ತನೆ ಮಾಡಲಾಗಿದೆ. ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಬಿತ್ತನೆಯಾದ ಬೆಳೆಗಳಲ್ಲಿ ಕುಂಟೆ ಹೊಡೆದು, ಕಳೆ ಕಿತ್ತು, ಗೊಬ್ಬರ ಹಾಕಿ, ಒಳನಾಟಿ ಬೇಸಾಯ ಮಾಡಲು ಸಾಧ್ಯವಾಗುತ್ತಿಲ್ಲ. ನಿರಂತರ ಮಳೆಯಾಗುತ್ತಿರುವುದರಿಂದ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದ್ದು ಬಿತ್ತನೆಯಾಗಿರುವ ರಾಗಿ ಕೊಳೆಯುವ ಸ್ಥಿತಿಯಲ್ಲಿದೆ. ತೊಗರಿ, ಅವರೆ, ಅಲಸಂದೆ, ಮೇವಿನ ಜೋಳಗಳಲ್ಲಿ ಬೇರು ಕೊಳೆ ರೋಗ ಕಾಣಿಸಿಕೊಂಡಿದೆ.

ಮಳೆಯಿಂದ ಕಳೆ ಹೆಚ್ಚಾಗಿದೆ. ಬೆಳೆಗಳಿಗಿಂತ ಕಳೆಯೇ ಹೊಲಗಳಲ್ಲಿ ಕಾಣಿಸುತ್ತಿದೆ. ಒಂದಷ್ಟು ದಿನಗಳ ಕಾಲ ಮಳೆ ಬಿಡುವು ಕೊಟ್ಟಿದ್ದರೆ ಬೇಸಾಯಕ್ಕೆ ಅನುಕೂಲವಾಗುತ್ತಿತ್ತು ಎನ್ನುತ್ತಾರೆ ರೈತರು.

'ವಚನ ದರ್ಶನ' ಕೃತಿ ಮುಟ್ಟುಗೋಲಿಗೆ ಆಗ್ರಹ

ಬೆಂಗಳೂರು: 'ವಚನ ಸಾಹಿತ್ಯ ನಾಶಪಡಿಸುವ ಉದ್ದೇಶದಿಂದ ಪ್ರಜ್ಞಾಪ್ರವಾಹ ಸಂಸ್ಥೆ ಪ್ರಕಟಿಸಿರುವ 'ವಚನ ದರ್ಶನ' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ವಿಶ್ವಗುರು ಬಸವಣ್ಣನವರ ಅನುಯಾಯಿಗಳ ಒಕ್ಕೂಟ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಸೋಮವಾರ ಪತ್ರಿಕಾಗೋಷ್ಠಿ-ಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಓಂಕಾರ್ ಚೊಂಡಿ, 'ವಚನ ದರ್ಶನ ಪುಸ್ತಕದ ಮುಖಪುಟದಲ್ಲಿ ಬಸವಣ್ಣ ಅವರ ಭಾವಚಿತ್ರವನ್ನು ವಿರೂಪವಾಗಿ ಬಿಂಬಿಸಿದ್ದು, ಅದರಲ್ಲಿ ಬಸವಾದಿ ಶರಣರ ಕುರುಹುಗಳಿಲ್ಲದೆ ಕೇಶಶಿಖಾ ಧ್ಯಾನಾಸಕ್ತ ಭಂಗಿಯ ವಟು, ಬಿಲ್ಲು ಬಾಣ, ತುಳಸಿಕಟ್ಟೆ ಚಿತ್ರಿಸಲಾಗಿದೆ. ಪುಸ್ತಕ ಬಿಡುಗಡೆ ವಿರೋಧಿಸಿ ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಮಠಾಧೀಶರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದರು.

ಕೆಚ್ಚೆದೆಯ ಕನ್ನಡಿಗರ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಶ್ರೀನಿವಾಸ್ ಭದ್ರಣ್ಣವರ ಮಾತನಾಡಿ, 'ಪುಸ್ತಕದಲ್ಲಿ ಲಿಂಗಾಯತ ಧರ್ಮದ ತತ್ವ ಸಿದ್ಧಾಂತಗಳ ವಿರುದ್ಧವಾದ ವಿಚಾರಗಳನ್ನು ಪ್ರಕಟಿಸಲಾಗಿದೆ. ಸರಿಯಾದ ಅಧ್ಯಯನ ನಡೆದಿಲ್ಲ. ಇದರಿಂದ ಜನರಿಗೆ ತಪ್ಪು ಸಂದೇಶ ಹೋಗುತ್ತಿದೆ. ಪುಸ್ತಕವನ್ನು ಯಾರೂ ಖರೀದಿ ಮಾಡಬಾರದು. ವಚನ ಪುಸ್ತಕಗಳ ಬಗ್ಗೆ ಪ್ರಚಾರ ಮಾಡುವ ಉದ್ದೇಶವಿದ್ದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ 'ಸಮಗ್ರ ವಚನ ಸಾಹಿತ್ಯ' ಪುಸ್ತಕವನ್ನು ಹಂಚಿಕೆ ಮಾಡಲಿ' ಎಂದು ಸಲಹೆ ನೀಡಿದರು. ಗೋಷ್ಠಿಯಲ್ಲಿ ಒಕ್ಕೂಟದ ಸಂಜೀವ್ ಕಡಗದ್, ಶಿವಕುಮಾರ್ ಇದ್ದರು.

ಮಳೆ ನೀರು ನಿಲ್ಲುವ ರಸ್ತೆಗಳಲ್ಲಿ ದುರಸ್ತಿ ಕಾರ್ಯಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆ ನೀರು ನಿಲ್ಲುವ ಸ್ಥಳಗಳು ಹಾಗೂ ರಸ್ತೆಗಳನ್ನು ಸಮೀಕ್ಷೆ ಮಾಡಿ, ಕೂಡಲೇ ದುರಸ್ತಿ ಕಾಮಗಾರಿ ನಡೆಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ವಲಯ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಮುಖ್ಯ ಆಯುಕ್ತರು, ಆಯಾ ವಲಯ ವ್ಯಾಪ್ತಿಯಲ್ಲಿ 'ಬ್ಲಾಕೇಜ್' ಸ್ಥಳಗಳನ್ನು ಪಟ್ಟಿ ಮಾಡಬೇಕು. ನೀರು ಸರಾಗವಾಗಿ ಹರಿದುಹೋಗದ ಸ್ಥಳಗಳಲ್ಲಿ ಮಣ್ಣು, ಕಸ-ಕಡ್ಡಿಗಳನ್ನು ತೆರವುಗೊಳಿಸಬೇಕು. ರಸ್ತೆಗಳಲ್ಲಿ ನೀರು ನಿಲ್ಲುವ ಸ್ಥಳಗಳಲ್ಲಿ ಚರಂಡಿಗೆ

ನೀರು ಹರಿಯುವಂತೆ ಸ್ವಚ್ಛತೆಕೈಗೊಳ್ಳಬೇಕು. ಅಧಿಕಾರಿಗಳು ಸ್ಥಳಗಳನ್ನು ಖುದ್ದಾಗಿ ಪರಿಶೀಲನೆ ನಡೆಸಿ, ಟ್ರ್ಯಾಕ್ಟರ್ ಗಳನ್ನು ಬಳಸಿಕೊಂಡು ಹೂಳು ತೆರವುಗೊಳಿಸಬೇಕು. ಮಳೆಯಿಂದ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನೂ ಕೈಗೊಳ್ಳಬೇಕು ಎಂದು ಸೂಚಿಸಿದರು.

ನಗರದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿನ ಗುಂಡಿಗಳನ್ನು ಆದ್ಯತೆ ಮೇರೆಗೆ ಮುಚ್ಚಬೇಕು. ಇತರೆ ಪ್ರಮುಖ ರಸ್ತೆ ಹಾಗೂ ವಾರ್ಡ್ ರಸ್ತೆಗಳಲ್ಲೂ ಗುಂಡಿಗಳನ್ನು ಮುಚ್ಚುವ ಕೆಲಸ ನಡೆಯಬೇಕು. ರಸ್ತೆಯೇ ಹಾಳಾಗಿದ್ದರೆ ಅದನ್ನೂ ದುರಸ್ತಿ ಮಾಡಲು ವಲಯ ಆಯುಕ್ತರು ಕ್ರಮ ಕೈಗೊಳ್ಳಬೇಕು ಎಂದರು. ನಗರದಲ್ಲಿ ಡೆಂಗಿ ಪ್ರಕರಣಗಳು ಇಳಿಕೆ ಆಗುತ್ತಿವೆ. ಪ್ರತಿ ದಿನ ಸರಾಸರಿ 95 ಪ್ರಕರಣಗಳು ದಾಖಲಾಗುತ್ತಿವೆ. ಸಂಪೂರ್ಣ ನಿಯಂತ್ರಣಕ್ಕೆ ಆಯಾ ವಲಯ ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಶಿವಾನಂದ್ ಕಲ್ಕೆರೆ, ಅವಿನಾಶ್ ಮೆನನ್ ರಾಜೇಂದ್ರನ್, ಗಿರೀಶ್, ವಲಯ ಆಯುಕ್ತರಾದ ರಮೇಶ್, ರಮ್ಯಾ, ವಿನೋತ್ ಪ್ರಿಯಾ, ಕರೀಗೌಡ, ಸ್ನೇಹಲ್, ವಲಯ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

ಉಗ್ರ ಚಟುವಟಿಕೆ: ಇಬ್ಬರ ವಿರುದ್ಧ ಆರೋಪಪಟ್ಟಿ

ಬೆಂಗಳೂರು: ರಾಜ್ಯದಲ್ಲಿ ಉಗ್ರ ಚಟುವಟಿಕೆ ನಡೆಸಲು ಸಂಚು ರೂಪಿಸಿದ್ದ ಆರೋಪದಡಿ ಬಂಧಿತರಾಗಿರುವ ಇಬ್ಬರು ಶಂಕಿತರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನ್ಯಾಯಾಲಯಕ್ಕೆ ಹೆಚ್ಚುವರಿ ಆರೋಪ ಪಟ್ಟಿ ಸಲ್ಲಿಸಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ನಿವಾಸಿಗಳಾದ ಅಬ್ದುಲ್ ಮತೀನ್ ತಾಹಾ ಮತ್ತು ಮುಸಾವೀರ್ ಹುಸೇನ್ ಶಾಜೀದ್ ಅವರನ್ನು ಏಪ್ರಿಲ್ 12ರಂದು ಬಂಧಿಸಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಈ ವರೆಗೆ ಒಟ್ಟು 18 ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲಾಗಿದೆ. 2020ರಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಹೆಚ್ಚುವರಿ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ತನಿಖಾಧಿಕಾರಿ ಗಳು ಸಲ್ಲಿಸಿದ್ದಾರೆ.

ಈ ಇಬ್ಬರು ಶಂಕಿತರು 'ದಿ ರಾಮೇಶ್ವರಂ ಕೆಫೆ'ಯಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲೂ ಭಾಗಿಯಾಗಿದ್ದರು. ಇವರನ್ನು ಕೋಲ್ಕತ್ತದಲ್ಲಿ ಬಂಧಿಸಲಾಗಿತ್ತು.

ಉದ್ಯೋಗ ಸಿಗದ ಹತಾಶೆ: ಆತ್ಮಹತ್ಯೆ

ದೊಡ್ಡಬಳ್ಳಾಪುರ: ಉದ್ಯೋಗ ಸಿಗದ ಹತಾಶರಾಗಿದ್ದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರರೊಬ್ಬರು ಡೆತ್‌ನೋಟ್ ಬರೆದು ಇಲ್ಲಿನ ವಿದ್ಯಾನಗರದಲ್ಲಿ ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಿ.ಇ ಮುಗಿಸಿ ಏಳು ವರ್ಷ ಕಳೆದರೂ ಉದ್ಯೋಗ ಸಿಗದ ಕಾರಣ ಬೇಸತ್ತು ಭರತ್ ಕುಮಾರ್ (29) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಿಧನ ವಾರ್ತೆ

ಜನರಲ್ ಸುಂದರರಾಜನ್ ಪದ್ಮನಾಭನ್

ಚೆನ್ನೈ (ಪಿಟಿಐ): ಮಾಜಿ ಸೇನಾ ಮುಖ್ಯಸ್ಥ ಜನರಲ್ ಸುಂದರರಾಜನ್ ಪದ್ಮನಾಭನ್ (83) ಅವರು

ವಯೋಸಹಜ ಕಾಯಿಲೆಗಳಿಂದಾಗಿ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು.

ಅವರು 2000ನೇ ಇಸವಿಯ ಸೆಪ್ಟೆಂಬರ್ 30ರಿಂದ 2002ರ ಡಿಸೆಂಬರ್ 31ರವರೆಗೆ ಸೇನಾ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸಿದ್ದರು.

ಪದ್ಮನಾಭನ್ ಅವರಿಗೆ ಪತ್ನಿ, ಮಗಳು ಮತ್ತು ಮಗ ಇದ್ದಾರೆ. ಅಂತ್ಯಕ್ರಿಯೆಯು ಮಂಗಳವಾರ ಸಂಜೆ ನಡೆಯಲಿದೆ ಎಂದು ಮೂಲಗಳು ಹೇಳಿವೆ. 15 ಕೋರ್‌ನ ಕಮಾಂಡರ್ ಆಗಿ ಸಲ್ಲಿಸಿದ್ದ ಸೇವೆಯನ್ನು ಪರಿಗಣಿಸಿ ಜನರಲ್ ಪದ್ಮನಾಭನ್ ಅವರಿಗೆ 'ಅತಿ ವಿಶಿಷ್ಟ ಸೇವಾ ಪದಕ' ನೀಡಲಾಗಿತ್ತು. ಜನರಲ್ ಪದ್ಮನಾಭನ್ ಅವರು ಡೆಹ್ರಾಡೂನ್‌ನ ರಾಷ್ಟ್ರಿಯ ಭಾರತೀಯ ಮಿಲಿಟರಿ ಕಾಲೇಜು ಹಾಗೂ ಖಡಕ್ ವಾಸ್ಲಾದ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ಅಧ್ಯಯನ ಮಾಡಿದ್ದರ

ಎಸ್.ಟಿ. ಪುಟ್ಟಾನಾಯ್ಕ್

ಬೆಂಗಳೂರಿನ: ಇಲ್ಲಿನ ಶ್ರೀರಾಂಪುರ ಬಡಾವಣೆ ನಿವಾಸಿ ಎಸ್.ಟಿ. ಪುಟ್ಟಾನಾಯ್ಕ್ (83) ಸೋಮವಾರ

ನಿಧನರಾದರು.

ಹೊಸನಗರ ತಾಲ್ಲೂಕಿನ ಯಡೂರು–ಮಾಸ್ತಿಕಟ್ಟೆಯ-ವರಾದ ಇವರು ಬಿರ್ಲಾ ಸಮೂಹದ ಮಾಲ್ಬಾನೀಸ್ ಕಂಪನಿಯಲ್ಲಿ ವ್ಯವಸ್ಥಾಪಕರಾಗಿ, ನಿವೃತ್ತರಾಗಿದ್ದರು. ಕೆಲ ದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲು-ತ್ತಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಹರಿಶ್ಚಂದ್ರ ಘಾಟ್‌ನಲ್ಲಿ ಮಂಗಳವಾರ (ಆ. 20) ಮಧ್ಯಾಹ್ನ 2ಕ್ಕೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

IndusInd Bank
ಸುರಕ್ಷತೆಯತ್ತ ಮೊದಲ ಹೆಜ್ಜೆ
ತಿಳಿದುಕೊಳ್ಳಿ. ಜಾಗೃತರಾಗಿರಿ.



ನಿಮ್ಮ OTP, CVV ಮತ್ತು PIN ಅನ್ನು ಯಾರೊಂದಿಗೆ ಹಂಚಿಕೊಳ್ಳಬೇಡಿ ಮತ್ತು ಅನಪೇಕ್ಷಿತ E-mail ಅಥವಾ SMS ನಲ್ಲಿರುವ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ. ನಿಮ್ಮ ವಿವರಗಳನ್ನು ಗೌಪ್ಯವಾಗಿಡಿ.
ವಂಚನೆಯನ್ನು ವರದಿ ಮಾಡಲು ಡಯಲ್ ಮಾಡಿ 1930, ಅಥವಾ
www.cybercrime.gov.in ಗೆ ಲಾಗಿನ್ ಮಾಡಿ
JAANKAAR BANO JAGRUK RAHO
QR ಕೋಡ್‌ಅನ್ನು ಸ್ಕ್ಯಾನ್ ಮಾಡಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ



ಪ್ರಗತಿಪರ ಸಾಧನೆಗಳ ಸರದಾರ, ಸಾಮಾಜಿಕ ಪರಿವರ್ತನೆಯ ಹರಿಕಾರ, ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ
ಡಿ. ದೇವರಾಜ ಅರಸು ಅವರ 109 ನೇ ಜನ್ಮ ದಿನಾಚರಣೆ ಹಾಗೂ ಡಿ.ದೇವರಾಜ ಅರಸು ಪ್ರಶಸ್ತಿ ಪ್ರದಾನ ಸಮಾರಂಭ

ಡಿ. ದೇವರಾಜ ಅರಸು ರವರ ಪ್ರತಿಮೆಗೆ ಮಾಲಾರ್ಪಣೆ
ದಿನಾಂಕ : 20-8-2024, ಮಂಗಳವಾರ
ಬೆಳಿಗ್ಗೆ : 10.30 ಗಂಟೆಗೆ,
ಸ್ಥಳ : ವಿಧಾನಸೌಧದ ಪಶ್ಚಿಮ ದ್ವಾರ

ಸಾರ್ವಜನಿಕ ಸಮಾರಂಭ
ಪೂರ್ವಾಹ್ನ : 11.00 ಗಂಟೆಗೆ
ಸ್ಥಳ : ವಿಧಾನಸೌಧದ ಬ್ಯಾಂಕ್ವೆಟ್ ಹಾಲ್



ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ್ ಎಸ್. ತಂಗಡಗಿ ಅವರು ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಇಲಾಖೆಯ ಸವಲತ್ತು ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು.

ಸರ್ವರಿಗೂ ಆದರದ ಸ್ವಾಗತ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಂಜಯ್. ಬಿ. ಶೆಟ್ಟಣ್ಣವರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕೆ.ಎ. ದಯಾನಂದ, ಭಾ.ಆ.ಸೇ., ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಬಿಜೆಪಿ– ಜೆಡಿಎಸ್‌ನಿಂದ ಪ್ರತಿಭಟನೆ; ಜನಜಾಗೃತಿ ಮೂಡಿಸಲು ಪಾದಯಾತ್ರೆ; ನಾಯಕರ ಹೇಳಿಕೆ

ರಾಷ್ಟ್ರಪತಿ ಆಡಳಿತ ಜಾರಿ ಮಾಡಿ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಕಾನೂನು ಸುವ್ಯವಸ್ಥೆ ಹಾಳುಗೆಡವಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಿಂಸೆಗೆ ಪ್ರಚೋದನೆ ನೀಡುತ್ತಿರುವುದರಿಂದ ರಾಷ್ಟ್ರಪತಿ ಆಡಳಿತ ಜಾರಿ ಮಾಡಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ರಾಜ್ಯಪಾಲರಿಗೆ ಮನವಿ ಮಾಡಿದರು.

ವಿಧಾನಸೌಧದ ಗಾಂಧಿ ಪ್ರತಿಮೆಯ ಬಳಿ ನಡೆದ ಬಿಜೆಪಿ– ಜೆಡಿಎಸ್ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಅವರು ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕು. ಆದರೆ, ಅವರು ಕಲ್ಲು ಹೊಡೆಯಿರಿ, ಟೈರ್ ಸುಟ್ಟು ಹಾಕಿ ಎಂದು ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ ಎಂದು ಕಿಡಿಕಾರಿದರು.

'ಬಿಜೆಪಿ– ಜೆಡಿಎಸ್ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದೆ. ತಮ್ಮವರು ಪ್ರತಿಭಟನೆ ಮಾಡುತ್ತಾರೆ, ಸಹಕಾರ ನೀಡಿ ಎಂದು ಕಾಂಗ್ರೆಸ್ ನಾಯಕರು, ಪೊಲೀಸರಿಗೆ ಸೂಚನೆ ನೀಡಿದ್ದಾರೆ. ಪೊಲೀಸರ ಕೈ ಕಟ್ಟಿ ಹಾಕಿ ಕಾನೂನು ಸುವ್ಯವಸ್ಥೆ ಹಾಳುಗೆಡವಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಬೇಕು ಎಂದು ರಾಜ್ಯಪಾಲರಿಗೆ ಮನವಿ ಮಾಡುತ್ತೇನೆ' ಎಂದರು.

'ವಿಧಾನಸಭೆಯಲ್ಲಿ ಮುಡಾ ಹಗರಣ ಕುರಿತು ಬಿಜೆಪಿ ಚರ್ಚಿಸಲು ಮುಂದಾದಾಗ ಮುಖ್ಯಮಂತ್ರಿ ಚರ್ಚೆಗೆ ನಿಲ್ಲದೇ ಪಲಾಯನ ಮಾಡಿದರು. ಅಲ್ಲಿ 224 ಶಾಸಕರು, ಮಾಧ್ಯಮದವರು, ಅಧಿಕಾರಿಗಳಿದ್ದರೂ ಉತ್ತರ ನೀಡುವ ಧೈರ್ಯ ತೋರಲಿಲ್ಲ. ವಿರೋಧ ಪಕ್ಷವಾಗಿ ನಾವು ನಮ್ಮ ಕರ್ತವ್ಯ ಮಾಡುತ್ತಿದ್ದೇವೆ. ಜನಜಾಗೃತಿ ಮೂಡಿಸಲು ಪಾದಯಾತ್ರೆ ಮಾಡಿದೆವು. ಆದರೆ, ಕಾಂಗ್ರೆಸ್ ಪಕ್ಷ ಸರ್ಕಾರದ ಅಧಿಕಾರ ಬಳಸಿಕೊಂಡು ಸಮಾವೇಶ ಮಾಡಿದೆ. ಇದನ್ನು ಸರ್ಕಾರ ಎಂದು ಕರೆಯಲು ಸಾಧ್ಯವೇ' ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರದ ಹಗರಣಗಳ ಕುರಿತು ಬಿಜೆಪಿ ಮತ್ತು ಜೆಡಿಎಸ್ ಮಾತ್ರ ಪ್ರತಿಭಟಿಸುತ್ತಿಲ್ಲ. ನಮಗಿಂತಲೂ ಮೊದಲು ಮಾಧ್ಯಮಗಳು ಹಗರಣಗಳನ್ನು ಬೆಳಕಿಗೆ ತಂದಿವೆ. ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಟಿ.ಜೆ.ಅಬ್ರಹಾಂ ಕೋರಿದ್ದಾರೆಯೇ ಹೊರತು ಬಿಜೆಪಿ ಕಾರ್ಯಕರ್ತರು ಕೋರಿಕೆ ಸಲ್ಲಿಸಿಲ್ಲ ಎಂದು ಹೇಳಿದರು.

'ರಾಜ್ಯಪಾಲರ ಚಿತ್ರ ಸುಡುವುದು ಸಂವಿಧಾನಕ್ಕೆ ಮಾಡುವ ಅಪಚಾರ. ಕಳೆದ ವರ್ಷ ಮಾಡಿದ್ದ ಪ್ರತಿಭಟನೆಗೆ ಈಗ ನಮ್ಮ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಇಂತಹ ದ್ವೇಷ ರಾಜಕಾರಣ ಮಾಡುವ ಕಾಂಗ್ರೆಸ್ ನಾಯಕರು ಎಷ್ಟು ದಿನ ಅಧಿಕಾರದಲ್ಲಿರುತ್ತಾರೆ' ಎಂದು ಅಶೋಕ ಪ್ರಶ್ನಿಸಿದರು.

ಸಿದ್ದರಾಮಯ್ಯ ತಾವು ಸತ್ಯ ಹರಿಶ್ಚಂದ್ರ ಆಗಬೇಕಿದ್ದರೆ ಗೌರವದಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಸಾರ್ವಜನಿಕರಿಗೆ ತಪ್ಪು ಮಾಹಿತಿ ಕೊಡುವ ಅಗತ್ಯವಿಲ್ಲ
ಡಿ.ವಿ.ಸದಾನಂದಗೌಡ, ಮಾಜಿ ಮುಖ್ಯಮಂತ್ರಿ

ಹಗರಣ ಮಾಡಿ ದಾಖಲೆ ಸಮೇತ ಸಿಕ್ಕಿಬಿದ್ದಿದ್ದೀರಿ. ನಗರಾಭಿವೃದ್ಧಿ ಸಚಿವರು ಮೈಸೂರಿಗೆ ಹೋಗಿ ಕಡತಗಳನ್ನು ತಮ್ಮೊಂದಿಗೆ ಹೊತ್ತೊಯ್ದಿದ್ದಾರೆ. ದಾಖಲೆಗಳನ್ನು ನಾಶ ಮಾಡಿರುವ ಸಾಧ್ಯತೆ ಇದೆ
ಆರಗ ಜ್ಞಾನೇಂದ್ರ, ಶಾಸಕ

ಮುಖ್ಯಮಂತ್ರಿಗಳೇ ಬ್ಲ್ಯಾಕ್‌ಮೇಲ್ ರಾಜಕಾರಣ ಬಿಡಿ. ಕೂಡಲೇ ರಾಜೀನಾಮೆ ಕೊಡಿ. ತನಿಖೆ ಎದುರಿಸಿ, ತಪ್ಪೇ ಮಾಡಿಲ್ಲ ಎಂಬುದು ಸಾಬೀತಾದರೆ ಮತ್ತೆ ಮುಖ್ಯಮಂತ್ರಿ ಆಗಬಹುದು
ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ

ಮುಖ್ಯಮಂತ್ರಿ ರಾಜೀನಾಮೆ ಕೊಡುವವರೆಗೆ ನಾವು ಹೋರಾಟ ಮಾಡಲಿದ್ದೇವೆ. ಅಹಿಂದದಲ್ಲಿ 'ದ' ಅಕ್ಷರವನ್ನು ನುಂಗಿ ಹಾಕಿದ್ದಾರೆ. ಇನ್ನೆರಡು ಅಕ್ಷರಗಳನ್ನು ಯಾವತ್ತು ನುಂಗುತ್ತಾರೋ ಗೊತ್ತಿಲ್ಲ
ಕೃಷ್ಣಾರೆಡ್ಡಿ, ಜೆಡಿಎಸ್ ಮುಖಂಡ

ಜೆಡಿಎಸ್ ಪ್ರಾಡಕ್ಟ್ ಆಗಿದ್ದ ಸಿದ್ದರಾಮಯ್ಯ ನಮ್ಮ ಪಕ್ಷದಲ್ಲಿ ಇದ್ದಾಗ ಭ್ರಷ್ಟಾಚಾರ ಮಾಡಲು ಅವಕಾಶ ಕೊಟ್ಟಿರಲಿಲ್ಲ. ಆತ್ಮಸಾಕ್ಷಿ ಇದ್ದರೆ ರಾಜೀನಾಮೆ ಕೊಟ್ಟು ತನಿಖೆ ಎದುರಿಸಬೇಕು
ಟಿ.ಎ.ಶರವಣ, ವಿಧಾನಪರಿಷತ್ ಸದಸ್ಯ

'ಸಮಾಜವಾದಿಯ ಮುಖವಾಡ ಕಳಚಿದೆ'

'ಸಮಾಜವಾದಿ ಸಿದ್ದರಾಮಯ್ಯ ಅವರ ಮುಖವಾಡ ಕಳಚಿ ಬಿದ್ದಿದೆ. ಅವರು ತಕ್ಷಣವೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ತೊಲಗಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಭ್ರಷ್ಟ ಕಾಂಗ್ರೆಸ್ ಮತ್ತು ಭ್ರಷ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ. ಈ ಹೋರಾಟ ಇದೀಗ ತಾರ್ಕಿಕ ಅಂತ್ಯಕ್ಕೆ ಬಂದಿದೆ. ಮೈಸೂರಿನ ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣಗಳು ಪ್ರಮುಖವಾದವು. ಮುಡಾದಲ್ಲಿ ಸುಮಾರು ₹5 ಸಾವಿರ ಕೋಟಿಯ ನಿವೇಶನಗಳನ್ನು ನುಂಗಿ ಹಾಕಿದ್ದಾರೆ ಎಂದರು.

ಭಂಡತನ ಬಿಟ್ಟು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಿತ್ತು. ಸಿದ್ದರಾಮಯ್ಯನವರು ಗೂಂಡಾಗಿರಿಗೆ ಇಳಿದಿದ್ದಾರೆ ಎಂದು ದೂರಿದರು.

ಸುದ್ದಿ 2 ನಿಮಿಷ

'ಸಿದ್ದರಾಮಯ್ಯ ರಾಜೀನಾಮೆ ಕೊಡುವ ಅಗತ್ಯವಿಲ್ಲ'

ದಾವಣಗೆರೆ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಅವರು ರಾಜೀನಾಮೆ ಕೊಡುವ ಅಗತ್ಯವಿಲ್ಲ. ಕಾಂಗ್ರೆಸ್ ಪಕ್ಷ ಅವರ ಬೆನ್ನಿಗೆ ಇದೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

'ಅಧಿಕಾರದಲ್ಲಿದ್ದ ಅವಧಿಯಲ್ಲಿ ಬಿಜೆಪಿ ನಾಯಕರು ರಾಜ್ಯವನ್ನು ಕೊಳ್ಳೆ ಹೊಡೆದು ಹಣ, ಆಸ್ತಿ ಮಾಡಿಕೊಂಡಿದ್ದಾರೆ. ಗಂಟಲವರೆಗೂ ತಿಂದು ಜೀರ್ಣಿಸಿಕೊಳ್ಳಲು ಒದ್ದಾಡುತ್ತಿದ್ದಾರೆ. ಇಂಥವರಿಂದ ರಾಜ್ಯ ಸರ್ಕಾರ ಕೆಡವಲು ಸಾಧ್ಯವಿಲ್ಲ. ಬಿಜೆಪಿ ನಾಯಕರ ಹಗರಣಗಳು ಒಂದೊಂದಾಗಿ ಬೆಳಕಿಗೆ ಬರಲಿವೆ' ಎಂದು ಸೋಮವಾರ ನಗರದಲ್ಲಿ ಕಾಂಗ್ರೆಸ್ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಸಂದರ್ಭ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಕೇಂದ್ರದ ನಡೆ ಖಂಡನೀಯ: ಸಾಹಿತಿಗಳ ಆಕ್ರೋಶ

ಗದಗ: 'ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು ರಾಜಕೀಯ ಕುತಂತ್ರದಿಂದ ಅಸ್ಥಿರಗೊಳಿಸುವುದು ಅಲ್ಲದೇ ರಾಜ್ಯಪಾಲರ ಹುದ್ದೆಯನ್ನು ದುರ್ಬಳಕೆ ಮಾಡಿಕೊಂಡು ಪ್ರಜಾಪ್ರಭುತ್ವದ ಕಗ್ಗೊಲೆಗೆ ಮುಂದಾದ ಕೇಂದ್ರ ಸರ್ಕಾರದ ನಡೆ ಖಂಡನೀಯ' ಎಂದು ನಾಡಿನ ಸಾಹಿತಿಗಳು ತಿಳಿಸಿದ್ದಾರೆ.

'ಸಂವಿಧಾನ ವಿರೋಧಿ ಬಿಜೆಪಿ ಮತ್ತು ರಾಜ್ಯಪಾಲರ ಕುತಂತ್ರಗಳನ್ನು ನಾವು ಬಲವಾಗಿ ವಿರೋಧಿಸುತ್ತೇವೆ' ಎಂದು ಜಂಟಿ ಪತ್ರಿಕಾ ಹೇಳಿಕೆ ನೀಡಿರುವ ಸಾಹಿತಿಗಳು, 'ತಪ್ಪು ಮಾಡಿದವರಿಗೆ ನೆಲದ ಕಾನೂನಿನ ರೀತಿ ಶಿಕ್ಷೆ ಆಗುವುದನ್ನು ಒಪ್ಪುತ್ತಲೇ, ಅದನ್ನು ರಾಜಕೀಯವಾಗಿ ಬಳಸಿಕೊಂಡು ವಾಮಮಾರ್ಗದಿಂದ ಚುನಾಯಿತ ಸರ್ಕಾರಗಳನ್ನು ಬೀಳಿಸುವ ಎಲ್ಲ ಬಗೆಯ ಹುನ್ನಾರಗಳನ್ನು ಬಹಿರಂಗಗೊಳಿಸಬೇಕಿದೆ' ಎಂದು ಆಗ್ರಹಿಸಿದ್ದಾರೆ.

'ಕಾಂಗ್ರೆಸ್ ಭ್ರಷ್ಟಾಚಾರ ಮುಕ್ತ ಜನಪರ ಆಡಳಿತ ನಡೆಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದು ಇಂದಿನ ತುರ್ತು ಅಗತ್ಯವಾಗಿದೆ. ಸಂವಿಧಾನ ಉಳಿಸಿ ಪ್ರಜಾಪ್ರಭುತ್ವ ಗಟ್ಟಿಗೊಳಿಸುವ ಏಕೈಕ ಮಾರ್ಗವಾಗಿದೆ' ಎಂದು ಪ್ರತಿಪಾದಿಸಿದ್ದಾರೆ.

ಜಂಟಿ ಪತ್ರಿಕಾ ಹೇಳಿಕೆಗೆ ನಿರಂಜನಾರಾಧ್ಯ ವಿ.ಪಿ., ಬಸವರಾಜ ಸೂಳಿಭಾವಿ, ರಂಜಾನ್ ದರ್ಗಾ, ಡಾ. ಎಚ್.ಎಸ್. ಅನುಪಮಾ ಕವಲಕ್ಕಿ, ನಾ. ದಿವಾಕರ, ಕೆ.ಶ್ರೀನಾಥ್, ಡಿ.ಉಮಾಪತಿ, ಡಾ. ವಿಜಯಾ, ಎಂ.ಅಬ್ದುಲ್ ರೆಹಮಾನ್ ಪಾಷ, ಜಿ.ಪಿ.ಬಸವರಾಜು, ಬಿ.ಸುರೇಶ, ಕೆ.ಪಿ.ಸುರೇಶ್, ಎನ್.ಎಸ್ ವೇಣುಗೋಪಾಲ ಸೇರಿದಂತೆ ನಾಡಿನ ನೂರಕ್ಕೂ ಹೆಚ್ಚು ಮಂದಿ ಸಾಹಿತಿಗಳು ಸಹಿ ಹಾಕಿದ್ದಾರೆ.

'ಬಾಂಗ್ಲಾ ಪ್ರಧಾನಿ ರೀತಿ ರಾಜ್ಯಪಾಲರಿಗೂ ಓಡಿಹೋಗುವ ಸ್ಥಿತಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ರಾಜ್ಯಪಾಲರನ್ನು ರಾಷ್ಟ್ರಪತಿಯವರು ಹಿಂದಕ್ಕೆ ಕರೆಸಿಕೊಳ್ಳಬೇಕು. ಇಲ್ಲದಿದ್ದರೆ, ಬಾಂಗ್ಲಾ ದೇಶದ ಪ್ರಧಾನಿ ರಾತ್ರೋ ರಾತ್ರಿ ಓಡಿಹೋದಂತಹ ಪರಿಸ್ಥಿತಿ ರಾಜ್ಯಪಾಲರಿಗೂ ಬರುತ್ತದೆ. ನಮ್ಮ ಮುಂದಿನ ಹೋರಾಟ ರಾಜಭವನ ಚಲೋ' ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಹೇಳಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, 'ಬಾಂಗ್ಲಾ ದೇಶದಲ್ಲಿ ನಡೆದಂತೆಯೇ ರಾಜ್ಯಪಾಲರ ಕಚೇರಿಗೆ ಹಾಗೂ ಅವರ ಮನೆಗೆ ನುಗ್ಗುವ ಕೆಲಸವನ್ನು ಕಾಂಗ್ರೆಸ್ ಕಾರ್ಯಕರ್ತರಾದ ನಾವು ಮಾಡಿಯೇ ತೀರುತ್ತೇವೆ' ಎಂದರು.

ಪ್ರತಿಭಟನಾ ಜಾಥಾ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ವಾಹನ ಸಂಚಾರಕ್ಕೆ ಅಡ್ಡಿಪಡಿಸಿ, ಟೈರ್ ಸುಟ್ಟರು. ಖಾಸಗಿ ಸಿಟಿಬಸ್‌ಗೆ ಕಿಡಿಗೇಡಿಗಳು ಕಲ್ಲು ತೂರಿದ್ದು, ಬಸ್ ಒಳಗಿದ್ದ ಮಹಿಳಾ ಪ್ರಯಾಣಿಕರೊಬ್ಬರು ಗಾಯಗೊಂಡರು.

ಮೂವರ ಬಂಧನ: ' ಕಲ್ಲು ತೂರಾಟ ಸಂಬಂಧ ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳಾದ ಶಾಹುಲ್ ಹಮೀದ್, ಅನ್ವರ್ ಹಾಗೂ ಕಿಶೋರ್ ಶೆಟ್ಟಿ ಅವರನ್ನು ಬಂಧಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದರು.

' ಐವನ್ ಡಿಸೋಜ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಒತ್ತಾಯಿಸಿ ಬಿಜೆಪಿಯ ನಿಯೋಗ ಪೊಲೀಸ್ ಕಮಿಷನರ್‌ಗೆ ಮನವಿ ಸಲ್ಲಿಸಿದೆ. ಪ್ರತಿಭಟನೆ ವೇಳೆ ಪೊಲೀಸರು ಸಾರ್ವಜನಿಕರಿಗೆ ರಕ್ಷಣೆ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಬರ್ಕೆ ಠಾಣೆ ಬಳಿ ಪ್ರತಿಭಟಿಸಿದರು.

ತಿ.ನರಸೀಪುರ, ಚಾಮುಂಡಿಬೆಟ್ಟ ಬಂದ್ ಯಶಸ್ವಿ

ರಾಜ್ಯಪಾಲರ ನಡೆ ಖಂಡಿಸಿ ರಾಜ್ಯದಾದ್ಯಂತ ಕಾಂಗ್ರೆಸ್ ಪ್ರತಿಭಟನೆ; ಮಂಗಳೂರಿನಲ್ಲಿ ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಮೈಸೂರು: ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ನಡೆಗೆ ಮುಖ್ಯಮಂತ್ರಿ ತವರೂರಿನಲ್ಲಿ ಸೋಮವಾರ ಭಾರಿ ಆಕ್ರೋಶ ವ್ಯಕ್ತವಾಯಿತು.

ವರುಣ ಮತ್ತು ತಿ.ನರಸೀಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಸೋಮವಾರ ಕರೆದಿದ್ದ ತಿ.ನರಸೀಪುರ ಪಟ್ಟಣ ಹಾಗೂ ಜಿಲ್ಲಾ ಕೇಂದ್ರದ ಚಾಮುಂಡಿ ಬೆಟ್ಟದಲ್ಲಿ ಬಂದ್ ಯಶಸ್ವಿಯಾಯಿತು. ರಾಜ್ಯಪಾಲರ ವಜಾಕ್ಕೆ ಒತ್ತಾಯಿಸಿ ಪ್ರತಿಭಟನಾ ಧರಣಿ ನಡೆಯಿತು. ಅಂಗಡಿಗಳು ಮುಚ್ಚಿದ್ದವು. ಕೆಲ ಶಾಲೆಗಳಿಗೆ ರಜೆ ನೀಡಲಾಗಿತ್ತು. ದೇವಾಲಯ ತೆರೆದಿತ್ತು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಜೊತೆಗೆ ಕಾಂಗ್ರೆಸ್ ನಾಯಕರ ದಂಡೇ ಪಾಲ್ಗೊಂಡಿತ್ತು.

ಬೆಂಕಿ ತಗುಲಿ ಇಬ್ಬರಿಗೆ ಗಾಯ: (ಬಾಗಲಕೋಟೆ ವರದಿ): ನಗರದಲ್ಲಿ ಸೋಮವಾರ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ರಾಜ್ಯಪಾಲರ ಪ್ರತಿಕೃತಿ ದಹಿಸುವಾಗ, ಬೆಂಕಿ ವ್ಯಾಪಿಸಿ ಪಕ್ಷದ ಇಬ್ಬರು ಕಾರ್ಯಕರ್ತರಿಗೆ ಸುಟ್ಟ ಗಾಯಗಳಾದವು.

'ಟಯರ್ ಮೇಲೆ ನಿಲ್ಲಿಸಲಾಗಿದ್ದ ಪ್ರತಿಕೃತಿಯ ಮೇಲೆ ಬಾಟಲಿಗಳಲ್ಲಿ ಮೇಲಿಂದ ಪೆಟ್ರೋಲ್ ಸುರಿಯುವಾಗ, ದಿಢೀರ್ ಬೆಂಕಿ ವ್ಯಾಪಿಸಿತು. ಅಲ್ಲಿಯೇ ಇದ್ದ ನಾಗರಾಳ ಎಸ್‌ಪಿ ಗ್ರಾಮದ ದೇವಪ್ಪ ಮಾಗಿ ಅವರ ಮುಖ, ಕುತ್ತಿಗೆ ಮತ್ತು ಕೈಗೆ ಗಾಯವಾಯಿತು. ಗಿರಿಸಾಗರ ಗ್ರಾಮದ ಹನಮಂತ ಅವರ ಕೈಗೆ ಸ್ವಲ್ಪ ಗಾಯವಾಯಿತು.

'ಜಿಲ್ಲಾ ಆಸ್ಪತ್ರೆಯಲ್ಲಿ ಇಬ್ಬರಿಗೂ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿದೆ. ಯಾವುದೇ ದೂರು ದಾಖಲಾಗಿಲ್ಲ. ಪರಿಶೀಲನೆ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ತಿಳಿಸಿದರು

ಪ್ರತಿಭಟನೆ ವೇಳೆ ಸಚಿವ ಆರ್.ಬಿ.ತಿಮ್ಮಾಪುರ ಮಾತನಾಡಿಸಿ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರೆಯುವರು' ಎಂದರು.

ಮೈಸೂರಿನಲ್ಲಿ ಸೋಮವಾರ ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡ ಜನಸ್ತೋಮ —ಪ್ರಜಾವಾಣಿ ಚಿತ್ರ

ಕಾನೂನು ಹೋರಾಟ: ಯತೀಂದ್ರ

ಮೈಸೂರು: 'ನನ್ನ ತಾಯಿ ಎಂದೂ ಸಾರ್ವಜನಿಕವಾಗಿ ಕಾಣಿಸಿಕೊಂಡವರಲ್ಲ. ಪತಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದರ ವಿರುದ್ಧ ಅವರೂ ಕಾನೂನು ಹೋರಾಟ ಮಾಡಲಿದ್ದಾರೆ' ಎಂದು ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಪ್ರಕರಣದಲ್ಲಿ ತಮ್ಮ ಹೆಸರನ್ನು ಅನಗತ್ಯವಾಗಿ ತಂದಿರುವುದರಿಂದ ಅವರಿಗೂ ಬೇಸರವಾಗಿದೆ' ಎಂದರು.

'ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಅಸಾಂವಿಧಾನಿಕವಾಗಿದ್ದು, ಮುಖ್ಯಮಂತ್ರಿ ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ. ಅವರ ವಿರುದ್ಧ ವರ್ತಿಸಿದಂತೆ ಮುಂದಿನ ಮುಖ್ಯಮಂತ್ರಿ ವಿರುದ್ಧವೂ ವರ್ತಿಸುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? ಬಿಜೆಪಿ ಅಧಿಕಾರ ದುರುಪಯೋಗಪಡಿಸಿಕೊಂಡು ಏಕಚಕ್ರಾಧಿಪತ್ಯ ಸ್ಥಾಪಿಸಲು ಹೊರಟಿದೆ' ಎಂದು ಆರೋಪಿಸಿದರು.

'ಕರ್ನಾಟಕದಲ್ಲಿ ಕಾಂಗ್ರೆಸ್‌ನ ದೊಡ್ಡ ನಾಯಕರಾಗಿರುವ ಸಿದ್ದರಾಮಯ್ಯ ಅವರನ್ನು ಕುರ್ಚಿಯಿಂದ ಇಳಿಸಿದರೆ ಪಕ್ಷವನ್ನು ದುರ್ಬಲಗೊಳಿಸಬಹುದು. ಮುಂದೆ ಬರುವ ಮುಖ್ಯಮಂತ್ರಿಗಳನ್ನೂ ಬೀಳಿಸಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರ. ಅವರ ಗುರಿ ಇರುವುದೇ ಬಿಜೆಪಿಯೇತರ ಸರ್ಕಾರಗಳ ಮೇಲೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯಪಾಲರ ಆದೇಶ ತಿರಸ್ಕರಿಸಿ: ಮನವಿ

ಬೆಂಗಳೂರು: 'ರಾಜ್ಯಪಾಲರು ನನಗೆ ನೀಡಿದ್ದ ಷೋಕಾಸ್ ನೋಟಿಸ್‌ಗೆ ಸಂಬಂಧಿಸಿದಂತೆ ರಾಜ್ಯ ಸಚಿವ ಸಂಪುಟ 2024ರ ಆಗಸ್ಟ್ 1ರಂದು ಸಲಹೆಯನ್ನು ಧಿಕ್ಕರಿಸಿ ರಾಜ್ಯಪಾಲರು ನನ್ನ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದು, ಈ ನಿರ್ಧಾರ ಅಸಾಂವಿಧಾನಿಕವಾಗಿದೆ. ಕಾನೂನಿನ ಎಲ್ಲಾ ಅಂಶಗಳನ್ನೂ ಗಾಳಿಗೆ ತೂರಿರುವ ಇಂತಹ ಆದೇಶವನ್ನು ವಜಾ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ರಿಟ್ ಅರ್ಜಿಯಲ್ಲಿ ಕೋರಿದ್ದಾರೆ.

ಈ ಸಂಬಂಧ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

ಅರ್ಜಿಯಲ್ಲಿ ಏನಿದೆ?: 'ಸಂಪುಟ ಸಭೆ ತೀರ್ಮಾನದ ಜೊತೆಗೆ ಸಲ್ಲಿಸಲಾಗಿದ್ದ ಅಪಾರ ದಾಖಲೆಗಳನ್ನು ಪರಿಶೀಲಿಸದೆ ರಾಜ್ಯಪಾಲರು ತನಿಖೆಗೆ ಮಂಜೂರಾತಿ ನೀಡಿದ್ದಾರೆ. ಸ್ವತಂತ್ರವಾಗಿ ತೀರ್ಮಾನಿಸದೇ ಪೂರ್ವ ನಿರ್ಧರಿತವಾಗಿ ಹೊರಡಿಸಿರುವ ಈ ಆದೇಶ ಸುಪ್ರೀಂ ಕೋರ್ಟ್ ರೂಪಿಸಿರುವ ತತ್ವಗಳಿಗೆ ವಿರುದ್ಧವಾಗಿದೆ. ಇದನ್ನು ಅವರು ಕಾನೂನಿನ ವ್ಯಾಪ್ತಿಯಲ್ಲಿ ನಿರ್ಧರಿಸಿಲ್ಲ. ಶರವೇಗದಲ್ಲಿ ನೀಡಿರುವ ಈ ಆದೇಶವನ್ನು ಗಮನಿಸಿದರೆ ಇದೊಂದು ಯಾಂತ್ರಿಕ ಕ್ರಮ ಎಂದು ಕಂಡು ಬರುತ್ತದೆ' ಎಂದು ವಿವರಿಸಲಾಗಿದೆ' ಎಂದು ದೂರಿದ್ದಾರೆ.

ಸುದ್ದಿಗೋಷ್ಠಿಯಲ್ಲೇ ಕಾಂಗ್ರೆಸ್ ಕಾರ್ಯಕರ್ತ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡಿದ್ದನ್ನು ವಿರೋಧಿಸಿ ಸುದ್ದಿಗೋಷ್ಠಿ ನಡೆಸುವ ವೇಳೆ ಹೃದಯಸ್ತಂಭನದಿಂದ ಕಾಂಗ್ರೆಸ್ ಕಾರ್ಯಕರ್ತ ಸಿ.ಕೆ.ರವಿಚಂದ್ರನ್ ಮೃತಪಟ್ಟಿದ್ದಾರೆ.

ಸಿ.ಕೆ. ರವಿಚಂದ್ರನ್

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಂಘ ಸೋಮವಾರ ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ಆಯೋಜಿಸಿತ್ತು. ಈ ವೇಳೆ ವೇದಿಕೆಯಲ್ಲಿದ್ದವರನ್ನು ಪರಿಚಯಿಸುತ್ತಿದ್ದ ರವಿಚಂದ್ರನ್ ಅವರು ಏಕಾಏಕಿ ಕುರ್ಚಿಯಿಂದ ಕೆಳಗೆ ಬಿದ್ದರು. ಅವರ ಮೂಗಿನಿಂದ ರಕ್ತಸ್ರಾವವಾಯಿತು. ಪತ್ರಕರ್ತರು ಅವರನ್ನು ಮೇಲಕ್ಕೆ ಎತ್ತಿದರು. ಪ್ರಜ್ಞೆ ತಪ್ಪಿದ್ದ ಅವರನ್ನು ಆಂಬುಲೆನ್ಸ್‌ನಲ್ಲಿ ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆಸ್ಪತ್ರೆ ತಲುಪುವ ಮುನ್ನವೇ ಅವರು ಮೃತಪಟ್ಟಿದ್ದರು ಎಂದು ವೈದ್ಯರು ಘೋಷಿಸಿದರು.

ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಮೃತದೇಹವನ್ನು ಹಸ್ತಾಂತರಿಸಲಾಯಿತು. ಉತ್ತರ ಹಳ್ಳಿಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಕೋಲಾರ ಜಿಲ್ಲೆಯವರಾದ ರವಿಚಂದ್ರನ್ ಅವರು ನಗರದ ಉತ್ತರಹಳ್ಳಿಯಲ್ಲಿ ವಾಸವಾಗಿದ್ದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

'ಸಂವಿಧಾನ, ಪ್ರಜಾಪ್ರಭುತ್ವದ ಉಳಿವಿನ ಈ ಹೋರಾಟದಲ್ಲಿ ನಮ್ಮ ಜೊತೆಯಾಗಿದ್ದ ರವಿಚಂದ್ರನ್ ಅವರ ನಿಧನ ನೋವುಂಟು ಮಾಡಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಂಬನಿ ಮಿಡಿದಿದ್ದಾರೆ.

'ಬಿಎಸ್‌ವೈ ರಾಜೀನಾಮೆ ನೀಡಿರಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಪಾಲರಾಗಿದ್ದ ಹಂಸರಾಜ ಭಾರದ್ವಾಜ ಅವರು ರಾಚೇನಹಳ್ಳಿ ಡಿನೋಟಿಫಿಕೇಷನ್ ಹಗರಣಕ್ಕೆ ಸಂಬಂಧಿಸಿದಂತೆ ಯಡಿಯೂರಪ್ಪ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಅರ್ಜಿದಾರರು ಸಲ್ಲಿಸಿದ್ದ ಪ್ರಬಲ ದಾಖಲೆಗಳು ಕಾರಣ. ಆದರೂ ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರಲಿಲ್ಲ. ಯಡಿಯೂರಪ್ಪನವರು ಯಾಕೆ ರಾಜೀನಾಮೆ ನೀಡಬೇಕು ಎಂದು ಅಂದು ಪ್ರಶ್ನಿಸಿದ್ದ ನೀವು, ಈಗ ಯಾವ ನಾಲಗೆಯಲ್ಲಿ ನನ್ನ ರಾಜೀನಾಮೆ ಕೇಳುತ್ತಿದ್ದೀರಿ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಹಂಸರಾಜ ಭಾರದ್ವಾಜ ಅವರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದಾಗ ಯಡಿಯೂರಪ್ಪ ರಾಜೀನಾಮೆ ನೀಡಿರಲಿಲ್ಲವೇ? ಈಗ ಸಿದ್ದರಾಮಯ್ಯನವರು ಯಾಕೆ ರಾಜೀನಾಮೆ ನೀಡುತ್ತಿಲ್ಲ' ಎಂದು ಆರ್. ಅಶೋಕ ಪ್ರಶ್ನಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, 'ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು 2011ರ ಆಗಸ್ಟ್ 4ರಂದು. ಅದೂ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರ ನೇತೃತ್ವದ ಲೋಕಾಯುಕ್ತವು ಅಕ್ರಮ ಗಣಿಗಾರಿಕೆಯ ತನಿಖಾ ವರದಿಯನ್ನು ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರಿಗೆ ಸಲ್ಲಿಸಿದ ನಂತರ. ಈ ರೀತಿ ಬೇಕಾಬಿಟ್ಟಿ ಹೇಳಿಕೆ ನೀಡುವ ಮೊದಲು ವಾಸ್ತವಾಂಶ ಪರಿಶೀಲಿಸಿಕೊಂಡು ಮಾತನಾಡಿ' ಎಂದು ಕುಟುಕಿದ್ದಾರೆ.

' ಹಳೆಯದ್ದನ್ನೆಲ್ಲವನ್ನೂ ನೆನಪಿಸಿಕೊಳ್ಳಿ, ಆಗ ನೀವೆಲ್ಲರೂ ಸೇರಿ ಯಡಿಯೂರಪ್ಪ ವಿರುದ್ಧವೇ ಏನೆಲ್ಲ ಕುತಂತ್ರ ಮಾಡಿದ್ದೀರಿ ಎನ್ನುವುದೂ ನೆನಪಾಗಬಹುದು' ಎಂದೂ ಹೇಳಿದ್ದಾರೆ.

'ರಾಚೇನಹಳ್ಳಿ ಡಿನೋಟಿಫಿಕೇಷನ್ ಹಗರಣದ ತನಿಖೆ ನಡೆಸಿದ್ದ ಸಂತೋಷ್ ಹೆಗ್ಡೆ ನೇತೃತ್ವದ ಲೋಕಾಯುಕ್ತವೇ ಯಡಿಯೂರಪ್ಪ ವಿರುದ್ಧದ ಎಲ್ಲ ಆರೋಪಗಳನ್ನು ಸಾಬೀತುಪಡಿಸಿ ಆರೋಪ ಪಟ್ಟಿ ಸಲ್ಲಿಸಿತ್ತು. ಹೀಗಾಗಿ, ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ನೀಡಿದ್ದ ಅನುಮತಿ ನ್ಯಾಯಯುತವಾಗಿತ್ತು. ಹೆಚ್ಚಿನ ಮಾಹಿತಿಗೆ ಸಂತೋಷ್ ಹೆಗ್ಡೆ ಅವರು ನೀಡಿದ್ದ ಅಕ್ರಮ ಗಣಿಗಾರಿಕೆಯ ತನಿಖಾ ವರದಿಯನ್ನು ಮತ್ತೊಮ್ಮೆ ಓದಿಕೊಳ್ಳಿ' ಎಂದೂ ಹೇಳಿದ್ದಾರೆ.

'ದಲಿತರಾಗಿದ್ದಕ್ಕೆ ರಾಜ್ಯಪಾಲರ ಗುರಿ'

ಒಂದನೇ ಪುಟದಿಂದ...

'ಪ್ರತಿಭಟನೆಯ ವೇಳೆ ರಾಜ್ಯಪಾಲರ ಪ್ರತಿಕೃತಿಯನ್ನು ಕಾಂಗ್ರೆಸ್‌ನವರು ಸುಟ್ಟು ಹಾಕಿದ್ದಾರೆ. ಅವಾಚ್ಯ ಪದಗಳಿಂದ ಬೆದರಿಕೆ ಹಾಕಿದ್ದಾರೆ. ಹಂಸರಾಜ್ ಭಾರದ್ವಾಜ್ ರಾಜ್ಯಪಾಲರಾಗಿದ್ದಾಗ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಇದೇ ರೀತಿ ಅನುಮತಿ ನೀಡಿದ್ದರು. ಆಗ ಕಾಂಗ್ರೆಸ್‌ನವರು ರಾಜ್ಯಪಾಲರನ್ನು ಹಾಡಿ ಹೊಗಳಿದ್ದರು. ಭಾರದ್ವಾಜ್‌ಗೊಂದು ನೀತಿ, ದಲಿತ ಗೆಹಲೋತ್ ಅವರಿಗೆ ಮತ್ತೊಂದು ನೀತಿಯೇ' ಎಂದು ಅವರು ಪ್ರಶ್ನಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜಭವನಕ್ಕೆ ನುಗ್ಗಿ ರಾಜ್ಯಪಾಲರನ್ನು ಕೆಳಗಿಳಿಸುವುದಾಗಿ ಬೆದರಿಕೆ ಒಡ್ಡಿರುವುದನ್ನು ವಿರೋಧಿಸಿ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಲಾವುದು. ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯ ಐವನ್ ಡಿಸೋಜ ವಿರುದ್ಧ ಮಂಗಳೂರಿನಲ್ಲಿ ದಾಖಲಿಸಿರುವ ದೂರನ್ನು ಆಧರಿಸಿ, ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಕರ್ನಾಟಕದ ಕಾಂಗ್ರೆಸ್ಸಿಗರಿಗೆ ಪಶ್ಚಿಮ ಬಂಗಾಳ, ಬಾಂಗ್ಲಾದೇಶ ಮಾದರಿಯಾಗಿರುವುದು ನೋಡಿದರೆ 'ಕರುನಾಡು' ಇವರ ಕೈಲಿರುವುದು ಎಷ್ಟು ಅಪಾಯಕಾರಿ ಎಂಬುದನ್ನು ಸೂಚಿಸುತ್ತಿದೆ ಎಂದರು.

ವಿರೋಧಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ ಮಾಜಿ ಸಚಿವ ಗೋವಿಂದ ಕಾರಜೋಳ ಮೊದಲಾದ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

ಎಚ್‌ಡಿಕೆ ವಿರುದ್ಧ ಚಾರ್ಜ್‌ಶೀಟ್: ಮತ್ತೆ ಪ್ರಸ್ತಾವ

ಒಂದನೇ ಪುಟದಿಂದ...

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ 2023ರ ನ. 21ರಂದು ಪ್ರಸ್ತಾವ ಸಲ್ಲಿಸಿದ್ದ ಲೋಕಾಯುಕ್ತದ ಎಸ್‌ಐಟಿ ಮುಖ್ಯಸ್ಥರಾಗಿರುವ ಐಜಿಪಿ ಎಂ. ಚಂದ್ರಶೇಖರ್, ಕುಮಾರಸ್ವಾಮಿ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ, ಭಾರತೀಯ ದಂಡ ಸಂಹಿತೆ ಹಾಗೂ ಗಣಿ ಮತ್ತು ಖನಿಜ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಕೋರಿದ್ದರು.

'ಪ್ರಸ್ತಾವವು ದೀರ್ಘ ಕಾಲದಿಂದ ರಾಜ್ಯಪಾಲರ ಬಳಿಯಲ್ಲೇ ಇದೆ. ಜುಲೈ 29ರ ದಿನಾಂಕ ಉಲ್ಲೇಖಿಸಿ ರಾಜ್ಯಪಾಲರು ಬರೆದಿದ್ದ ಪತ್ರವೊಂದು ಆಗಸ್ಟ್ 8ರಂದು ಎಸ್‌ಐಟಿಗೆ ತಲುಪಿತ್ತು. ಕುಮಾರಸ್ವಾಮಿ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಕೆಲವು ಸ್ಪಷ್ಟನೆಗಳನ್ನು ನೀಡುವಂತೆ ಸೂಚಿಸಲಾಗಿತ್ತು. ಎಸ್‌ಐಟಿ ಮುಖ್ಯಸ್ಥರು ರಾಜ್ಯಪಾಲರು ಕೋರಿದ್ದ ಸ್ಪಷ್ಟನೆಗಳಿಗೆ ಉತ್ತರಗಳೊಂದಿಗೆ ಸೋಮವಾರ ಸಂಜೆ ಪತ್ರವೊಂದನ್ನು ರಾಜಭವನಕ್ಕೆ ರವಾನಿಸಿದ್ದಾರೆ. ಕುಮಾರಸ್ವಾಮಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಮತ್ತೆ ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ' ಎಂದು ಲೋಕಾಯುಕ್ತದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಅನುಮತಿ ಏಕೆ ಅಗತ್ಯ?: ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ಕ್ಕೆ 2018ರಲ್ಲಿ ತಿದ್ದುಪಡಿ ತರಲಾಗಿದೆ. ಅಲ್ಲಿಯವರೆಗೂ, ಹುದ್ದೆಯಿಂದ ನಿರ್ಗಮಿಸಿದ ಚುನಾಯಿತ ಪ್ರತಿನಿಧಿಗಳು ಅಥವಾ ನಿವೃತ್ತ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಆರೋಪಪಟ್ಟಿ ಸಲ್ಲಿಸಲು ಪೂರ್ವಾನುಮತಿ ಅಗತ್ಯವಿರಲಿಲ್ಲ. 2018ರ ತಿದ್ದುಪಡಿಯ ಪ್ರಕಾರ, ಅಪರಾಧ ಹಿಂದೆಯೇ ನಡೆದಿದ್ದರೂ ತಿದ್ದುಪಡಿಯ ಬಳಿಕ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಸಕ್ಷಮ ಪ್ರಾಧಿಕಾರದ ಅನುಮತಿ ಅಗತ್ಯ. ಈ ಕಾರಣಕ್ಕಾಗಿಯೇ ರಾಜ್ಯಪಾಲರಿಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ರಾಜಭವನದಲ್ಲಿ ಅರ್ಜಿ ಬಾಕಿ ಇಲ್ಲ'

ರಾಜ್ಯಪಾಲರ ಕಚೇರಿಯ ಪರವಾಗಿ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಸಾಲಿಸಿಟರ್ ಜನರಲ್ (ಎಸ್‌ಜಿ) ಎಸ್.ತುಷಾರ್ ಮೆಹ್ತಾ ಅವರು, 'ರಾಜ್ಯಪಾಲರ ಮುಂದೆ ಪ್ರಾಸಿಕ್ಯೂಷನ್ ಅನುಮತಿಗೆ ಕಾಯುತ್ತಿರುವ ಯಾವುದೇ ಅರ್ಜಿಗಳಿಲ್ಲ' ಎಂದು ಸ್ಪಷ್ಟಪಡಿಸಿದರು. ಅರ್ಜಿಗೆ ಸಂಬಂಧಿಸಿದಂತೆ ವಿವರವಾದ ಆಕ್ಷೇಪಣೆ ಸಲ್ಲಿಸಲು ಸಮಯ ಕೋರಿದ ಅವರು, 'ರಾಜ್ಯಪಾಲರ ಆದೇಶಕ್ಕೆ ತಡೆ ನೀಡಬಾರದು' ಎಂದು ಮನವಿ ಮಾಡಿದರು.

ಸಿಂಘ್ವಿ ಅವರು ತಮ್ಮ ವಾದದ ಮಧ್ಯೆ 'ಫ್ರೆಂಡ್ಲಿ ಗವರ್ನರ್' ಎಂದು ಸಂಬೋಧಿಸಿದ ಪದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ತುಷಾರ್ ಮೆಹ್ತಾ, 'ಸಿಂಘ್ವಿ, ಮಾಧ್ಯಮಗಳ ಚಪಲಕ್ಕೆ ಈಡಾಗಿ ಇಂತಹ ಮಸಾಲೆ ಮಾತು ಆಡಬಾರದು. ರಾಜ್ಯಪಾಲರು ಸಾಂವಿಧಾನಿಕವಾದ ಗೌರವಾನ್ವಿತ ಹುದ್ದೆಯಲ್ಲಿರುವವರು. ಇದು ಕೋರ್ಟ್ ಎಂಬುದನ್ನು ನೆನಪಿನಲ್ಲಿರಿಸಿಕೊಳ್ಳಬೇಕು' ಎಂದರು.

ರಾಜ್ಯಪಾಲರ ವಿರುದ್ಧ 'ಕೈ' ಕೆಂಡ

ಒಂದನೇ ಪುಟದಿಂದ...

ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ವೃತ್ತದಲ್ಲಿ ಟೈರ್‌ಗೆ ಬೆಂಕಿ ಹಚ್ಚಲು ಪೆಟ್ರೋಲ್ ಸುರಿಯುವಾಗ ಕಾಂಗ್ರೆಸ್ ಕಾರ್ಯಕರ್ತರೊಬ್ಬರಿಗೆ ಬೆಂಕಿ ತಗಲಿತು. ತಕ್ಷಣ ಸುತ್ತಲಿನ ಜನರು ಬೆಂಕಿ ನಂದಿಸಿದರು. ದಾವಣಗೆರೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಾಜ್ಯಪಾಲರ ಅಣಕು ಶವಯಾತ್ರೆ ನಡೆಸಿದರು. ಅಣಕು ಶವ ಸುಡಲು ಮುಂದಾದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ವಾಗ್ವಾದ ನಡೆಯಿತು.

ಕೆಲವೆಡೆ 'ರಾಜ್ಯಪಾಲರು ಬಿಜೆಪಿ-ಜೆಡಿಎಸ್ ಏಜೆಂಟರಾಗಿದ್ದಾರೆ', ಎಂಬ ಬರಹಗಳಿದ್ದ ಫಲಕಗಳು, ಪ್ರಧಾನಿ ಮೋದಿಯೊಂದಿಗೆ ರಾಜ್ಯಪಾಲ ಗೆಹಲೋತ್ ಇರುವ ಚಿತ್ರಗಳನ್ನು ಕಾರ್ಯಕರ್ತರು ಪ್ರದರ್ಶಿಸಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಡಿ.ಕೆ. ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಸತೀಶ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಕೃಷ್ಣ ಬೈರೇಗೌಡ, ಈಶ್ವರ್ ಖಂಡ್ರೆ, ರಹೀಂ ಖಾನ್ ಮತ್ತು ಕೆಲವು ಶಾಸಕರು ಭಾಗವಹಿಸಿದರು. ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಬಹುತೇಕ ಸಚಿವರು, ರಾಜ್ಯಪಾಲರ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ಮುಡಾ ಪ್ರಕರಣ: ಸಿ.ಎಂ 10 ದಿನ ನಿರಾಳ

ಒಂದನೇ ಪುಟದಿಂದ...

ಸಿಂಘ್ವಿ ಸುದೀರ್ಘ ವಾದ: ಸಿದ್ದರಾಮಯ್ಯ ಪರ ವಾದ ಮಂಡಿಸಿದ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ರಾಜ್ಯಪಾಲರು ತನಿಖೆಗೆ ಅನುಮತಿ ನೀಡಿರುವುದು ಸಾಂವಿಧಾನಿಕ ತತ್ವಗಳಿಗೆ ವಿರುದ್ಧವಾಗಿದೆ ಮತ್ತು ಇದರ ಹಿಂದೆ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಉದ್ದೇಶವಿದೆ. ರಾಜ್ಯಪಾಲರು ಸಚಿವ ಸಂಪುಟದ ಶಿಫಾರಸನ್ನು ನಿರಾಕರಿಸಿದ್ದಾರೆ. ಆದರೆ, ಯಾವ ಕಾರಣಕ್ಕೆ ಅನುಮತಿ ನೀಡಲಾಗಿದೆ ಎಂಬುದನ್ನು ವಿವರಿಸಿಲ್ಲ' ಎಂದು ಆಕ್ಷೇಪಿಸಿದರು.

'ಸಚಿವ ಸಂಪುಟದ ನಿರ್ಧಾರಕ್ಕೆ ನಾನು ಬದ್ಧವಾಗಿರಬೇಕಿಲ್ಲ. ಆದ್ದರಿಂದ, ಅನುಮತಿ ನೀಡಲಾಗುತ್ತಿದೆ ಎಂದು ರಾಜ್ಯಪಾಲರು ತಿಳಿಸಿದ್ದಾರೆ. ಸಚಿವ ಸಂಪುಟದ ನಿರ್ಧಾರ ತಿರಸ್ಕರಿಸಿದರೂ ಯಾವ ಆಧಾರದಲ್ಲಿ ಅನುಮತಿ ನೀಡಲಾಗುತ್ತಿದೆ ಎಂಬ ಬಗ್ಗೆ ಅವರು ವಿವರಣೆ ಕೊಡಬೇಕಿತ್ತು. ಆದರೆ, ಅವರ ಆದೇಶದಲ್ಲಿ ಆ ಕುರಿತು ಒಂದೇ ಒಂದು ಸಾಲೂ ಇಲ್ಲ. ಇದೊಂದು ವಿವೇಚನಾರಹಿತ ಅನುಮತಿ' ಎಂದು ದೂರಿದರು.

'ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ್ದ ಟಿ.ಜೆ.ಅಬ್ರಹಾಂ ಅರ್ಜಿಯ ಆಧಾರದಡಿ ದೂರು ಸಲ್ಲಿಸಿದ ದಿನವೇ ರಾಜ್ಯಪಾಲರು, ಸಿದ್ದರಾಮಯ್ಯ ಅವರಿಗೆ ಷೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ. ಮಾಜಿ ಸಚಿವರಾದ ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ, ಜನಾರ್ದನ ರೆಡ್ಡಿ ಸೇರಿದಂತೆ ಇತರರ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ ಕೋರಿದ ಅರ್ಜಿಗಳು ದೀರ್ಘ ಸಮಯದಿಂದ ಬಾಕಿ ಇವೆ. ಆದರೆ, ಸಿದ್ದರಾಮಯ್ಯನವರ ಪ್ರಕರಣದಲ್ಲಿ ಮಾತ್ರ ರಾಜ್ಯಪಾಲರು ಇನ್ನಿಲ್ಲದ ಉತ್ಸಾಹ ತೋರಿ ಅನುಮತಿ ನೀಡಿದ್ದಾರೆ' ಎಂದರು.

'ಷೋಕಾಸ್ ನೋಟಿಸ್‌ಗೆ ಮುಖ್ಯಮಂತ್ರಿ ಉತ್ತರಿಸಿದ್ದಾರೆ. ಪ್ರಕರಣದಲ್ಲಿ ಸಿದ್ದರಾಮಯ್ಯನವರ ಪಾತ್ರವೇ ಇಲ್ಲ. ಅವರು ಯಾವುದೇ ಶಿಫಾರಸನ್ನೂ ಮಾಡಿಲ್ಲ. ನಿವೇಶನಗಳ ಮರು ಹಂಚಿಕೆ ಪ್ರಕ್ರಿಯೆ ಈ ಹಿಂದಿನ ಸರ್ಕಾರಗಳ ಅವಧಿಯಲ್ಲಿ ನಡೆದಿದೆ. ಆದಾಗ್ಯೂ, ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ–2023ರ (ಬಿಎನ್‌ಎಸ್‌ಎಸ್) ಕಲಂ 218ರ ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿದೆ' ಎಂದು ಆಕ್ಷೇಪಿಸಿದರು.

'ಕಲಂ 218ರ ಅಡಿಯಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬೇಕಾದರೆ ನಿರ್ದಿಷ್ಟ ಅಪರಾಧ ಅಡಗಿರಬೇಕು. ಆ ಅಪರಾಧವು ಆ ವ್ಯಕ್ತಿಯು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಾಗ ನಡೆದಿರಬೇಕು. ಆದರೆ, ಈ ಪ್ರಕರಣದಲ್ಲಿನ ನಿವೇಶನ ಹಂಚಿಕೆ 1992ರಲ್ಲಿ ಆಗಿದೆ. 2010ರಂದು ಸಿದ್ದರಾಮಯ್ಯ ಪತ್ನಿಗೆ ಅವರ ಸಹೋದರ ದಾನಪತ್ರ ನೀಡಿದ್ದಾರೆ. ಇಷ್ಟು ವರ್ಷಗಳಲ್ಲಿನ ಬಹುತೇಕ ಸಂದರ್ಭಗಳಲ್ಲಿ ಸಿದ್ದರಾಮಯ್ಯ ಅಧಿಕಾರದಲ್ಲಿ ಇರಲಿಲ್ಲ' ಎಂದು ವಿವರಿಸಿದರು.

'ಜನರಿಂದ ಆಯ್ಕೆ ಆಗದ ರಾಜ್ಯಪಾಲರು, ಜನಾದೇಶ ಪಡೆದ ಮುಖ್ಯಮಂತ್ರಿಯೊಬ್ಬರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದು ಅಸಮಂಜಸ. ಇದೊಂದು ರೀತಿ ಮಹಾಭಾರತದಲ್ಲಿನ ಅಶ್ವತ್ಥಾಮನ ಅರ್ಧ ಸತ್ಯದ ಕತೆಯಂತಾಗಿದೆ. ಅರ್ಧಸತ್ಯವು ಸುಳ್ಳು ಹೇಳುವುದಕ್ಕಿಂತಲೂ ಹೆಚ್ಚು ಅಪಾಯಕಾರಿ. ರಾಜ್ಯಪಾಲರು ಜನರಿಂದ ಆಯ್ಕೆಯಾಗಬೇಕು. ಅವರಿಗೆ ಹೆಚ್ಚಿನ ಅಧಿಕಾರ ನೀಡಬೇಕೆಂದು ಅಂಬೇಡ್ಕರ್ ಆಶಿಸಿದ್ದರು' ಎಂಬ ಅಂಶವನ್ನು ನ್ಯಾಯಪೀಠಕ್ಕೆ ವಿವರಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಹಾಗೂ ಮೂವರು ಫಿರ್ಯಾದುದಾರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ, ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಜನಪ್ರತಿನಿಧಿಗಳ ಸೆಷನ್ಸ್ ಕೋರ್ಟ್‌ನಲ್ಲಿ ಸಲ್ಲಿಸಲಾಗಿದ್ದ ಖಾಸಗಿ ದೂರುಗಳಿಗೆ ಸಂಬಂಧಿಸಿದಂತೆ ಸಿಸಿಎಚ್– 82ನೇ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಇದೇ 20ಕ್ಕೆ ಆದೇಶ ಕಾಯ್ದಿರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಪ್ರತಿವಾದಿಗಳಾದ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪರ, ಕೇಂದ್ರ ಸರ್ಕಾರದ ಸಾಲಿಸಿಟರ್ ಜನರಲ್ ಎಸ್. ತುಷಾರ್ ಮೆಹ್ತಾ, ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಫಿರ್ಯಾದುದಾರರಾದ ಎಸ್. ಪಿ.ಪ್ರದೀಪ್ ಕುಮಾರ್ ಪರ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ ಮತ್ತು ಎಂ.ಎಚ್.ಪ್ರಕಾಶ್, ಸ್ನೇಹಪ್ರಿಯ ಕೃಷ್ಣ ಪರ ಹಿರಿಯ ವಕೀಲರಾದ ಲಕ್ಷ್ಮಿ ಅಯ್ಯಂಗಾರ್, ಕೆ.ಜಿ.ರಾಘವನ್, ಸಿ.ವಿ. ನಾಗೇಶ್ ಮತ್ತು ವಸಂತ ಕುಮಾರ್, ಟಿ.ಜೆ.ಅಬ್ರಹಾಂ ಪರ ಆರ್.ಆರ್. ರಂಗನಾಥ ರೆಡ್ಡಿ ಹಾಜರಿದ್ದರು.

ವಿಚಾರಣೆಯನ್ನು ಆಲಿಸಲು ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಕರ್ನಾಟಕ ಸರ್ಕಾರದ ದೆಹಲಿಯ ಪ್ರತಿನಿಧಿ ಟಿ.ಬಿ.ಜಯಚಂದ್ರ, ಆಡಳಿತ ಪಕ್ಷದ ಮುಖ್ಯಸಚೇತಕ ಅಶೋಕ ಪಟ್ಟಣ ಹಾಜರಿದ್ದರು. ಮುಖ್ಯಮಂತ್ರಿಯವರ ಪರವಾಗಿ ಅವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಹಿರಿಯ ವಕೀಲ ರವಿವರ್ಮ ಕುಮಾರ್, ಹಿರಿಯ ವಕೀಲ ಎಚ್.ಎಸ್.ಚಂದ್ರಮೌಳಿ, ವಕಾಲತ್ತು ವಹಿಸಿರುವ ಶತಭಿಷ ಶಿವಣ್ಣ, ಲೀಲಾ ಪಿ.ದೇವಾಡಿಗ, ಸೂರ್ಯ ಮುಕುಂದರಾಜ್ ಇತರರು ಇದ್ದರು.

ನವರಂಗಿ ನಕಲಿ ಸ್ವಾಮಿ ವಿರುದ್ಧ ಕ್ರಮ ಏಕಿಲ್ಲ?

'ಜೆಡಿಎಸ್ ಅಗ್ರಗಣ್ಯ ನಾಯಕ, ನವರಂಗಿ ನಕಲಿ ಸ್ವಾಮಿ, ಬರೀ ಬುರುಡೆ ಬಿಡುವ ಕುಮಾರಸ್ವಾಮಿ ವಿರುದ್ಧ ಇಲ್ಲದ ಕ್ರಮ ನಮ್ಮ ವಿರುದ್ಧವೇಕೆ ರಾಜ್ಯಪಾಲರೇ? ಮುಂದಿನ 10 ವರ್ಷ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುತ್ತದೆ. ನಿಮ್ಮ ಯಾವ ಹುನ್ನಾರಗಳಿಗೂ ನಮ್ಮ ಸರ್ಕಾರ ಜಗ್ಗುವುದಿಲ್ಲ, ಬಗ್ಗುವುದಿಲ್ಲ, ಹೆದರುವುದಿಲ್ಲ' ಎಂದು ಡಿ.ಕೆ. ಶಿವಕುಮಾರ್ ಗುಡುಗಿದರು.

ಮಾತಿನುದ್ದಕ್ಕೂ ಬಿಜೆಪಿ, ಜೆಡಿಎಸ್ ಮತ್ತು ರಾಜ್ಯಪಾಲರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, 'ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಶಶಿಕಲಾ ಜೊಲ್ಲೆ, ಮುರುಗೇಶ ನಿರಾಣಿ, ಜನಾರ್ದನ ರೆಡ್ಡಿ ಅವರ ಮೇಲೂ ಲೋಕಾಯುಕ್ತ ಸಂಸ್ಥೆ ತನಿಖೆ ನಡೆಸಿದೆ. ಈ ಕಳಂಕಿತರ ವಿರುದ್ಧ ವಿಚಾರಣೆಗೆ ಅನುಮತಿ ನೀಡುವಂತೆ ಮನವಿ ಮಾಡಿದ್ದರೂ ಏಕೆ ಪುರಸ್ಕರಿಸಿಲ್ಲ ರಾಜ್ಯಪಾಲರೇ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಿದ್ದರಾಮಯ್ಯ ಪರವಾಗಿ ಡಿ.ಕೆ. ಶಿವಕುಮಾರ್ ಒಬ್ಬನೇ ಅಲ್ಲ, 'ಇಂಡಿಯಾ' ಒಕ್ಕೂಟ ಹಾಗೂ ರಾಜ್ಯದ ಎಲ್ಲ ಕಾಂಗ್ರೆಸ್ ಕಾರ್ಯಕರ್ತರು, ಕಟ್ಟಕಡೆಯ ಮತದಾರರು ಆಶೀರ್ವಾದ ಮಾಡಿ ಬೆನ್ನಲುಬಾಗಿ ನಿಂತಿದ್ದಾರೆ' ಎಂದರು.

ಅಪಘಾತ: ಯುವಕ, ಮಹಿಳೆ ಸಾವು

ಚಿಕ್ಕಬಾಣಾವರ, ಹಲಸೂರು ಗೇಟ್ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಾವರ ಹಾಗೂ ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಯುವಕ ಹಾಗೂ ಮಹಿಳೆ ಮೃತಪಟ್ಟಿದ್ದಾರೆ.

ಚಿಕ್ಕಬಾಣಾವರದ ಕೆರೆಗುಡ್ಡದಹಳ್ಳಿ ರಸ್ತೆಯಲ್ಲಿ ಕ್ರೇನ್ ಹಾಗೂ ಆಟೊ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಆಟೊದಲ್ಲಿ ಪ್ರಯಾಣಿಸುತ್ತಿದ್ದ ಆದರ್ಶ್ ಸಿಂಗ್(17) ಎಂಬುವವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

‘ಆದರ್ಶ್ ಅವರ ಪೋಷಕರೂ ಅದೇ ಆಟೊದಲ್ಲಿ ಇದ್ದರು. ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ. ಆಟೊ ಚಾಲಕನ ಎರಡೂ ಕೈಗಳಿಗೆ ಗಂಭೀರ ಗಾಯಗಳಾಗಿವೆ. ಕ್ರೇನ್ ಚಾಲಕ ಪರಾರಿಯಾಗಿದ್ದು, ವಾಹನ ಜಪ್ತಿ ಮಾಡಲಾಗಿದೆ. ಆರೋಪಿ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಮಹಿಳೆ ಸಾವು: ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕ್ಯಾಂಟರ್ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ಅಪರಾಧ ಸುದ್ದಿ

ಹೆಬ್ಬಾಳದ ದಾಸರಹಳ್ಳಿ ನಿವಾಸಿ ಸತ್ಯಪ್ರೇಮಾ(46) ಮೃತ ಮಹಿಳೆ. ಇವರ ಪತಿ ಬಿ.ಎಲ್.ಮೋಹನ್ ಗಾಯಗೊಂಡಿದ್ದಾರೆ.

ಪಾಲಿಕೆ ವೃತ್ತದ ಬಸ್ ನಿಲ್ದಾಣದ ಬಳಿ ಅಪಘಾತ ಸಂಭವಿಸಿದೆ. ಕ್ಯಾಂಟರ್ ವಾಹನ ಚಾಲಕ ಸೈಯದ್ ಬಾಬು ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸತ್ಯಪ್ರೇಮಾ- ಮೋಹನ್ ದಂಪತಿ ತಮ್ಮ ಪುತ್ರಿಯ ಹುಟ್ಟುಹಬ್ಬದ ಪ್ರಯುಕ್ತ ಖರೀದಿಗಾಗಿ ಮನೆಯಿಂದ ಕೆ.ಆರ್. ಮಾರುಕಟ್ಟೆ ಕಡೆಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಮಾರ್ಗ ಮಧ್ಯೆ ಪಾಲಿಕೆ ವೃತ್ತದ ಬಸ್ ನಿಲ್ದಾಣದ ಬಳಿ ಹಿಂದಿನಿಂದ ವೇಗವಾಗಿ ಬಂದ ಕ್ಯಾಂಟರ್ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ದಂಪತಿ ದ್ವಿಚಕ್ರ ವಾಹನ ಸಮೇತ ರಸ್ತೆಗೆ ಬಿದ್ದಿದ್ದು, ಈ ವೇಳೆ ಸತ್ಯಪ್ರೇಮಾ ತಲೆಗೆ ಗಂಭೀರ ಪೆಟ್ಟಾಗಿತ್ತು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದರು ಎಂದು ಪೊಲೀಸರು ಹೇಳಿದರು.

ಹಾಸ್ಟೆಲ್ ಸಿಬ್ಬಂದಿ ವಿರುದ್ಧ ಎಫ್ಐಆರ್

ಬೆಂಗಳೂರು: ಇಲಿ ಪಾಷಾಣದಿಂದ ಉಸಿರಾಟದ ಸಮಸ್ಯೆ ಉಂಟಾಗಿ 19 ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದ ಪ್ರಕರಣದ ಸಂಬಂಧ ಖಾಸಗಿ ನರ್ಸಿಂಗ್ ಕಾಲೇಜೊಂದರ ಹಾಸ್ಟೆಲ್‌ನ ಸಿಬ್ಬಂದಿ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಇಲಿ ಪಾಷಾಣ ಸಿಂಪಡಿಸಿದ್ದ ಮಂಜೇಗೌಡ ಮತ್ತು ಹಾಸ್ಟೆಲ್ ವ್ಯವಸ್ಥಾಪಕ ಸಿಬ್ಬಂದಿ ವಿರುದ್ಧ ಎಫ್ಐಆರ್ ದಾಖಲಾಗಿದೆ.

ಅಸ್ವಸ್ಥಗೊಂಡ ವಿದ್ಯಾರ್ಥಿಗಳ ಪೈಕಿ ನೋಯಲ್ ಎಂಬುವವರ ಹೇಳಿಕೆ ಆಧರಿಸಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್ಎಸ್) ಕಲಂ 286ರ ಪ್ರಕಾರ (ವಿಷಕಾರಿ ಪದಾರ್ಥಕ್ಕೆ ಸಂಬಂಧಪಡುವ ನಿರ್ಲಕ್ಷ್ಯ ವರ್ತನೆ) ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಮೂವರಿಗೆ ಐಸಿಯುನಲ್ಲಿ ಚಿಕಿತ್ಸೆ: ಜ್ಞಾನಭಾರತಿ ಅಮ್ಮ ಆಶ್ರಮದ ಸಮೀಪದ ಆದರ್ಶ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಇಲಿಗಳ ಕಾಟ ಹೆಚ್ಚಾಗಿತ್ತು. ನೆಲಮಹಡಿಯ ಜನರೇಟರ್‌ಗಳಿಗೆ ಇಲಿಗಳಿಂದ ತೊಂದರೆ ಆಗುತ್ತಿತ್ತು. ಅವುಗಳು ವೈರ್ ಕತ್ತರಿಸಿ ವಿದ್ಯುತ್ ಸಂಪರ್ಕಕ್ಕೆ ಅಡಚಣೆ ಉಂಟು ಮಾಡುತ್ತಿದ್ದವು. ಭಾನುವಾರ ರಾತ್ರಿ ಮಂಜೇಗೌಡ ಅವರು ಇಲಿ ಪಾಷಾಣ ಸಿಂಪಡಿಸಿದ್ದರು. ಈ ವೇಳೆ ವಿದ್ಯಾರ್ಥಿನಿಲಯದಲ್ಲಿದ್ದ ವಿದ್ಯಾರ್ಥಿಗಳ ಪೈಕಿ, 19 ಮಂದಿಗೆ ಉಸಿರಾಟದ ಮೂಲಕ ವಿಷಕಾರಿ ವಸ್ತು ದೇಹ ಸೇರಿ ಅಸ್ವಸ್ಥಗೊಂಡಿದ್ದರು. ತಕ್ಷಣವೇ ಎಚ್ಚೆತ್ತ ಸಿಬ್ಬಂದಿ ಅಸ್ವಸ್ಥ ವಿದ್ಯಾರ್ಥಿಗಳನ್ನು ಸಮೀಪದ ಮೂರು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಜಯಾನ್ ವರ್ಗಿಸ್, ದಿಲೇಶ್ ಹಾಗೂ ಜೊಮೋನ್ ಎಂಬ ವಿದ್ಯಾರ್ಥಿಗಳ ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ(ಐಸಿಯು) ಚಿಕಿತ್ಸೆ ಮುಂದುವರೆದಿದೆ. 16 ವಿದ್ಯಾರ್ಥಿಗಳ ಆರೋಗ್ಯದಲ್ಲಿ ಚೇತರಿಕೆಯಾಗಿದೆ.

ಪ್ರಕರಣ ದಾಖಲಿಸಿಕೊಂಡು ಹಾಸ್ಟೆಲ್ ಸಿಬ್ಬಂದಿ ಹಾಗೂ ವಿಷಕಾರಿ ವಸ್ತು ಸಿಂಪಡಿಸಿದ ಮಂಜೇಗೌಡ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅಲ್ಲದೇ ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿ ಅಪಹರಿಸಿ ಹಣಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಯುವ ಘಟಕದ ಮುಖಂಡರೊಬ್ಬರ ಹೆಸರನ್ನು ಹೇಳಿಕೊಂಡು ವಿದ್ಯಾರ್ಥಿಯನ್ನು ಅಪಹರಿಸಿ, ಕಿರುಕುಳ ನೀಡಿ ಹಣ ನೀಡುವಂತೆ ಬೇಡಿಕೆ ಇಟ್ಟಿದ್ದ ಆರೋಪದ ಮೇಲೆ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಎಂಟು ಮಂದಿಯ ವಿರುದ್ಧ ಎಫ್ಐಆರ್ ದಾಖಲಾಗಿದೆ.

‘ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಿದ ಬಳಿಕ ಯಾರ ಹೆಸರು ಹೇಳಿಕೊಂಡು ಹಣ ವಸೂಲಿಗಾಗಿ ಕಿರುಕುಳ ನೀಡಿದ್ದರು ಎಂಬುದು ಗೊತ್ತಾಗಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾಲೇಜೊಂದರಲ್ಲಿ ಜೀವನ್ ಜೈನ್ ಎಂಬ ವಿದ್ಯಾರ್ಥಿ ಕಳೆದ ವರ್ಷ ಆಯುಷ್ ಶ್ರೀನಿವಾಸ್ ಎಂಬಾತನಿಂದ ₹3 ಲಕ್ಷ ಸಾಲ ಪಡೆದಿದ್ದರು. ಹೇಳಿದ ಸಮಯಕ್ಕೆ ಜೀವನ್‌ಗೆ ಸಾಲ ಮರುಪಾವತಿಸಲು ಸಾಧ್ಯವಾಗಿರ ಲಿಲ್ಲ. ಬಳಿಕ ತಡವಾಗಿ ಸಾಲ ಮರಳಿಸಿದ್ದರು.

‘ಪಡೆದಷ್ಟು ಸಾಲ ಮರಳಿಸಿದ್ದರೂ ಮತ್ತಷ್ಟು ಹಣ ನೀಡುವಂತೆ ಗುಂಪೊಂದು ಒತ್ತಾಯಿಸಿತ್ತು. ಅಲ್ಲದೇ ಜೀವನ್ ಅವರನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ವಿದ್ಯಾರ್ಥಿಯನ್ನು ಬೆತ್ತಲೆಗೊಳಿಸಿ ಹಣಕ್ಕಾಗಿ ಕಿರುಕುಳ ನೀಡಲಾಗಿದೆ ಎಂಬ ಆರೋಪವಿದೆ’ ಎಂದು ಮೂಲಗಳು ತಿಳಿಸಿವೆ.

ವಿಡಿಯೊ ಹರಿಯಬಿಡುವ ಬೆದರಿಕೆ: ಬೆತ್ತಲೆ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕಲಾಗುವುದು ಎಂದು ಬೆದರಿಸಿ ₹6 ಲಕ್ಷವನ್ನು ಕಿಡಿಗೇಡಿಗಳು ಪಡೆದುಕೊಂಡಿದ್ದರು.

ಅದಾದ ಮೇಲೂ ಹೆಚ್ಚಿನ ಹಣಕ್ಕೆ ಬೇಡಿಕೆ ಸಲ್ಲಿಸಿದ್ದರು. ಪದೇ ಪದೇ ಹೋಟೆಲ್‌ಗೆ ಕರೆಸಿಕೊಂಡು ಹಲ್ಲೆ ನಡೆಸಲಾಗಿದೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ನಗರದಲ್ಲಿ ಸೋಮವಾರ ಎಐಡಿಎಸ್‌ಒ ನೇತೃತ್ವದಲ್ಲಿ ಮೋಂಬತ್ತಿ ಮೆರವಣಿಗೆ ನಡೆಸಲಾಯಿತು

ಕೊಲೆ ಖಂಡಿಸಿ ಮೋಂಬತ್ತಿ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತದ ಆರ್. ಜಿ. ಕರ್ ಆಸ್ಪತ್ರೆಯಲ್ಲಿ ನಡೆದ ವೈದ್ಯಕೀಯ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ಖಂಡಿಸಿ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಎಐಡಿಎಸ್‌ಒ ನೇತೃತ್ವದಲ್ಲಿ ಮೋಂಬತ್ತಿ ಮೆರವಣಿಗೆ ನಡೆಸಲಾಯಿತು.

ದಿನದಿಂದ ದಿನಕ್ಕೆ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿವೆ. ಕಳೆದ ತಿಂಗಳು ಆಂಧ್ರಪ್ರದೇಶದಲ್ಲಿ ಬಾಲಕಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಲಾಗಿದೆ. ಆರ್.ಜಿ.ಕರ್ ಆಸ್ಪತ್ರೆಯಲ್ಲಿ ನಡೆದ ಘಟನೆ ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ ಎಂದು ಎಐಡಿಎಸ್‌ಒ ಕಾರ್ಯದರ್ಶಿ ಅಜಯ್ ಕಾಮತ್ ಆಕ್ರೋಶ ವ್ಯಕ್ತಪಡಿಸಿದರು.

ವೈದ್ಯಕೀಯ, ಎಂಜಿನಿಯರಿಂಗ್, ಪದವಿ ವಿದ್ಯಾರ್ಥಿಗಳು ಹಾಗೂ ಇಎಸ್ಐ ನಿವೃತ್ತ ಸರ್ಜನ್ ಡಾ. ಸುಧಾ ಕಾಮತ್, ಚಲನಚಿತ್ರ ನಿರ್ದೇಶಕ ಬಿ. ಸುರೇಶ, ಐಎಂಎ ಡಾ. ಜ್ಯೋತಿ, ಡಾ. ಗಂಗಾಧರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ

ಕೆ.ಆರ್.ಪುರ: ಕೋಲ್ಕತ್ತದಲ್ಲಿ ವೈದ್ಯೆ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವುದನ್ನು ಖಂಡಿಸಿ ಬಳಗೆರೆಯ ಶೋಭಾ ಅಪಾರ್ಟ್‌ಮೆಂಟ್ ಬಳಿ ಸ್ಥಳೀಯ ನಿವಾಸಿಗಳು, ವೈದ್ಯರು, ಟೆಕಿಗಳು ಸೇರಿ ಮೇಣದ ಬತ್ತಿ ಜೊತೆಗೆ ಕಪ್ಪುಬಟ್ಟೆ ಧರಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ವೈದ್ಯೆ ಮೇಲಿನ ಅತ್ಯಾಚಾರ, ಕೊಲೆ ಖಂಡನೀಯ. ಜೀವ ರಕ್ಷಿಸುವ ವೈದ್ಯರ ಮೇಲಿನ ಕೃತ್ಯ ಅಮಾನವೀಯ. ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸುವಂತೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಕೃತ್ಯದಿಂದ ಇಡೀ ದೇಶವೇ ತಲೆ ತಗ್ಗಿಸುವಂತಾಗಿದೆ. ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಉಗ್ರ ಶಿಕ್ಷೆ ನೀಡಬೇಕು. ಆರೋಪಿಗೆ ನೀಡುವ ಶಿಕ್ಷೆ ತಪ್ಪು ಮಾಡುವ ಪ್ರತಿಯೊಬ್ಬರಿಗೂ ಪಾಠವಾಗುವಂತಿರಬೇಕು’ ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಮೆರವಣಿಗೆ ಯಲ್ಲಿ ಡಾ.ಭಾರತಿ, ಗೀತಾ, ಶಾರದಾ, ಐಶ್ವರ್ಯ, ಚೇತನ್, ಬೃಂದಾ, ಅನಿತಾ ಇದ್ದರು.

ಮಂಕಿಪಾಕ್ಸ್: ವಿಮಾನ ನಿಲ್ದಾಣಗಳಲ್ಲಿ ನಿಗಾ ವಹಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಮಂಕಿಪಾಕ್ಸ್ ಪ್ರಕರಣ ಪತ್ತೆಯಾಗಿಲ್ಲ. ಒಂದು ವೇಳೆ ಪತ್ತೆಯಾದರೆ ಅದಕ್ಕೆ ಸೂಕ್ತ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾಸ್ಪತ್ರೆಗಳು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಆಸ್ಪತ್ರೆಗಳಲ್ಲಿ ವೈದ್ಯರಿಗೆ ತರಬೇತಿ ನೀಡಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಹೊರದೇಶಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳು ಪತ್ತೆಯಾದ ಕಾರಣದಿಂದ ಆರೋಗ್ಯ ಅಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿ, ಮುಂಜಾಗೃತಾ ಕ್ರಮಗಳ ಕುರಿತು ಚರ್ಚೆ ನಡೆಸಿದರು.

ದೇಶದಲ್ಲಿ ಆರೋಗ್ಯ ತುರ್ತುಸ್ಥಿತಿ ಘೋಷಿಸುವ ಪರಿಸ್ಥಿತಿ ಇಲ್ಲ. ಆದರೆ, ಹೊರ ದೇಶಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣದಿಂದ ವಿಶ್ವ ಆರೋಗ್ಯ ಸಂಸ್ಥೆ ಆರೋಗ್ಯ ತುರ್ತುಸ್ಥಿತಿ ಘೋಷಿಸಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯದಲ್ಲೂ ಈಗಿನಿಂದಲೇ ಮುಂಜಾಗ್ರತೆ ವಹಿಸಬೇಕು ಎಂದು ತಿಳಿಸಿದರು.

ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರ ಮೇಲೆ ನಿಗಾ ಇರಿಸಬೇಕು. ಮಂಕಿಪಾಕ್ಸ್ ವೈರಾಣು ಗುಣಲಕ್ಷಣಗಳು ಕಂಡು ಬಂದರೆ ಎಚ್ಚರಿಕೆ ವಹಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜ್ಯದಲ್ಲಿ ಒಂಬತ್ತು ಝೀಕಾ ಪ್ರಕರಣಗಳು ಪತ್ತೆಯಾಗಿದ್ದು, ಶಿವಮೊಗ್ಗದಲ್ಲಿ ಮೂರು ಹಾಗೂ ಬೆಂಗಳೂರಿನ ಜಿಗಣಿ ಪ್ರದೇಶದಲ್ಲಿ ಆರು ಮಂದಿಗೆ ಝೀಕಾ ವೈರಾಣು ಸೋಂಕು ದೃಢಪಟ್ಟಿದೆ. ಈ ಪೈಕಿ ಐವರು ಮಹಿಳೆಯರಿಗೆ ಸೋಂಕು ತಗುಲಿದ್ದು, ಇವರ ಸಂಪರ್ಕಕ್ಕೆ ಬಂದವರ ತಪಾಸಣೆ ನಡೆಸಬೇಕು ಎಂದು ದಿನೇಶ್ ಗುಂಡೂರಾವ್ ಅವರು ನಿರ್ದೇಶನ ನೀಡಿದರು.

ನಗರದಲ್ಲಿ ಇಂದು

ಸದ್ಭಾವನಾ ದಿನಾಚರಣೆ, ರಾಜೀವ್ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ: ಅತಿಥಿ: ಡಿ.ಕೆ. ಶಿವಕುಮಾರ್, ಸ್ಥಳ: ರಾಜೀವ್ ಗಾಂಧಿ ಜಂಕ್ಷನ್, ಮಲ್ಲೇಶ್ವರ ಮೆಟ್ರೊ ರೈಲು ನಿಲ್ದಾಣ ಹತ್ತಿರ, ಬೆಳಿಗ್ಗೆ 8

ರಾಷ್ಟ್ರೀಯ ಮಾನಸಿಕ ಆರೋಗ್ಯ ವಿಚಾರ ಸಂಕಿರಣ, 31ನೇ ಸಂಸ್ಥಾಪನಾ ದಿನಾಚರಣೆ: ಅತಿಥಿಗಳು: ಡಾ. ಜಾನ್ಸನ್ ಪ್ರದೀಪ್, ಡಾ. ಕಿರಣ್, ಡಾ.ಮಮತಾ ಶೆಟ್ಟಿ, ಡಾ.ಲಿಂಗರಾಜು, ಆಯೋಜನೆ: ಟ್ರೇಡಾ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಆ್ಯಂಡ್ ವೆಲ್‌ನೆಸ್, ಸ್ಥಳ: ಕಾರ್ಮೆಲಾರಾಂ ಥಿಯಾಲಜಿ ಕಾಲೇಜು ಆಡಿಟೋರಿಯಂ, ಸರ್ಜಾಪುರ ರಸ್ತೆ ಬೆಳಿಗ್ಗೆ 9

ಕನ್ನಡೇತರರಿಗೆ ಕನ್ನಡ ಕಲಿಸುವ ಶಿಕ್ಷಕರ ಎರಡು ದಿನದ ತರಬೇತಿ ಶಿಬಿರ: ಉದ್ಘಾಟನೆ: ಹಂಪ ನಾಗರಾಜಯ್ಯ, ಅತಿಥಿಗಳು: ಎಲ್.ಎನ್.ಮುಕುಂದರಾಜ್, ಪುರುಷೋತ್ತಮ ಬಿಳಿಮಲೆ, ಅಬ್ದುಲ್ ರೆಹಮಾನ್ ಪಾಷ, ಸಂತೋಷ ಹಾನಗಲ್ಲ, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: 4ನೇ ಮಹಡಿ, ವಿಕಾಸಸೌಧ, ಬೆಳಿಗ್ಗೆ 10

ರಾಷ್ಟ್ರೀಯ ವೈಜ್ಞಾನಿಕ ಮನೋವೃತ್ತಿ ದಿನಾಚರಣೆ: ಉದ್ಘಾಟನೆ: ಎನ್. ಎಸ್. ಬೋಸರಾಜು, ಅಧ್ಯಕ್ಷತೆ: ಸತೀಶ್ ಜಾರಕಿಹೊಳಿ, ಅತಿಥಿಗಳು: ಎಲ್. ಹನುಮಂತಯ್ಯ, ಸುಧಾಕರ್ ಎಸ್ತೂರಿ, ಪ್ರಜ್ವಲ್ ಶಾಸ್ತ್ರಿ, ಕೆ.ಬಿ. ಮಹದೇವಪ್ಪ, ಕೆ. ಮಹಾಂತೇಶ್, ಹಮೀದುಲ್ಲಾ ಖಾನ್, ಈ. ಬಸವರಾಜು, ಆಯೋಜನೆ: ಕರ್ನಾಟಕ ವೈಜ್ಞಾನಿಕ ಮನೋವೃತ್ತಿ ವೇದಿಕೆ, ಸ್ಥಳ: ಎಚ್.ನರಸಿಂಹಯ್ಯ ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ಡಿ. ದೇವರಾಜ ಅರಸು ಅವರ 109ನೇ ಜನ್ಮದಿನಾಚರಣೆ, ಅರಸು ಪ್ರಶಸ್ತಿ ಪ್ರದಾನ: ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ರಿಜ್ವಾನ್ ಅರ್ಷದ್, ಶೋಭಾ ಕರಂದ್ಲಾಜೆ, ಆಯೋಜನೆ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸ್ಥಳ: ವಿಧಾನಸೌಧದ ಪಶ್ಚಿಮದ್ವಾರದಲ್ಲಿ ಮಾಲಾರ್ಪಣೆ, ಬೆಳಿಗ್ಗೆ 10.30, ಬ್ಯಾಂಕ್ವೆಟ್ ಹಾಲ್, 11

ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿ ಪ್ರದಾನ: ಅತಿಥಿಗಳು: ಹಿ.ಚಿ. ಬೋರಲಿಂಗಯ್ಯ, ಚಿದಾನಂದ ಗೌಡ, ಶುಭದ ಪುರುಷೋತ್ತಮರಾಜು, ರಾ.ನಂ. ಚಂದ್ರಶೇಖರ್, ವ.ಚ. ಚನ್ನೇಗೌಡ, ಪ್ರಶಸ್ತಿ ಸ್ವೀಕರಿಸುವವರು: ಸುಶೀಲಾ ಸೋಮಶೇಖರ್, ಆಯೋಜನೆ: ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಗುತ್ತಿಗೆ ಶಿಕ್ಷಕರ, ಗುತ್ತಿಗೆ ಉಪನ್ಯಾಸಕರ, ಮುಖ್ಯಶಿಕ್ಷಕರ, ಪ್ರಾಂಶುಪಾಲರ ಸಭೆ: ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಆಯೋಜನೆ: ರಾಜ್ಯ ಸರ್ಕಾರಿ ನೌಕರರ ಸಂಘ, ಸ್ಥಳ: ಕಬ್ಬನ್ ಪಾರ್ಕ್, ಬೆಳಿಗ್ಗೆ 11

ಮಹಾಲಕ್ಷ್ಮೀ ಬಡಾವಣೆಯ ಜ್ಞಾನ ವಿಜ್ಞಾನ ಸಮಿತಿ ಉದ್ಘಾಟನೆ: ಚಾಲನೆ: ಎಸ್. ಷಡಕ್ಷರಿ, ಪ್ರತಿಭಾ ಪುರಸ್ಕಾರ: ಎಚ್.ಎಸ್. ಗಣೇಶ ಭಟ್ಟ, ಅಧ್ಯಕ್ಷತೆ: ನಾ. ಶ್ರೀಧರ್, ಅತಿಥಿಗಳು: ಭಾಗ್ಯಲಕ್ಷ್ಮೀ ಮಗ್ಗೆ, ವಿಜಯಲಕ್ಷ್ಮೀ ಸತ್ಯಮೂರ್ತಿ, ಉಷಾದೇವಿ ಕೆ., ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು ನಗರ ಜಿಲ್ಲೆ, ಸ್ಥಳ: ಹಿರಿಯ ನಾಗರಿಕರ ಕೇಂದ್ರ, ಕಿರ್ಲೋಸ್ಕರ್ ಕಾಲೊನಿ, ಬಸವೇಶ್ವರನಗರ, ಸಂಜೆ 4

ಡಿ. ದೇವರಾಜ ಅರಸು ಜನ್ಮದಿನಾಚರಣೆ, ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ: ಅತಿಥಿಗಳು: ಎನ್. ದೇವದಾಸ್, ಕೆಂಪಣ್ಣ, ಐ. ತಾರಾನಾಥ ಪೂಜಾರಿ, ಆರ್. ನಾಗೇಂದ್ರ ನಾಯ್ಕ್, ಗಣಪತಿ ನಾಯ್ಕ್, ಅನಿಲ್ ಲಕ್ಷ್ಮೀನಾರಾಯಣ ಯಾದವ್, ಆಯೋಜನೆ: ಅಖಿಲ ಭಾರತ ಹಿಂದುಳಿದ ವರ್ಗಗಳ ವಕೀಲರ ಪ್ರತಿಷ್ಠಾನ, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿಭವನ, ಕುಮಾರಪಾರ್ಕ್ ರಸ್ತೆ, ಸಂಜೆ 4

ಬೆಂಗಳೂರು ಪೌರಾಣಿಕ ಯಕ್ಷ ಹಬ್ಬ: ‘ಭಕ್ತಿ ಪಾರಮ್ಯ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ ನಿಡ್ಲೆ, ಸ್ಥಳ: ಗಣಪತಿ ದೇವಸ್ಥಾನ, ತಿಲಕನಗರ, ಸಂಜೆ 5.30

ದಾಸವಾಣಿ ಕಾರ್ಯಕ್ರಮ: ಗಾಯನ: ಸುಷ್ಮಾ ಶ್ರೇಯಸ್, ಸಹಕಾರ ಎಂ.ಎಸ್. ಗೋವಿಂದಸ್ವಾಮಿ, ಬಿ.ಎಸ್. ವರದರಾಜ್, ಆಯೋಜನೆ ಮತ್ತು ಸ್ಥಳ : ವಿಠಲ ಮಂದಿರ, 45ನೇ ಅಡ್ಡರಸ್ತೆ, ಸಿಂಡಿಕೇಟ್ ಬ್ಯಾಂಕ್ ಹತ್ತಿರ, 3ನೇ ಬ್ಲಾಕ್, ರಾಜಾಜಿನಗರ, ಸಂಜೆ 5.30

ಕಲಿಯುಗ ಕಲ್ಪತರು ರಾಘವೇಂದ್ರತೀರ್ಥರು- ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 6.30

ಸಿಎಸ್‌ಆರ್ ಶೈಕ್ಷಣಿಕ ಸಮಾವೇಶದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್

‘ಗ್ರಾಮೀಣ ಶಾಲೆ ಅಭಿವೃದ್ಧಿಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಶೈಕ್ಷಣಿಕ ಅಂತರ ತಗ್ಗಿಸಲು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಗ್ರಾಮೀಣ ಪ್ರದೇಶದಲ್ಲಿನ ಶಾಲೆಗಳನ್ನು ಅಭಿವೃದ್ಧಿಪಡಿಸಲು ಖಾಸಗಿ ಕಂಪನಿಗಳು ಸಹಕಾರ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೋಮವಾರ ಆಯೋಜಿಸಿದ್ದ ‘ಸಿಎಸ್‌ಆರ್ ಶೈಕ್ಷಣಿಕ ಸಮಾವೇಶ – 2024’ ಉದ್ಘಾಟಿಸಿ ಮಾತನಾಡಿದ ಅವರು, ‘ನಗರದಲ್ಲಿ ದೊರೆಯುವ ಗುಣಮಟ್ಟದ ಶಿಕ್ಷಣ ಮತ್ತು ಸೌಲಭ್ಯ ಗ್ರಾಮೀಣ ಶಾಲೆಗಳಲ್ಲೂ ದೊರೆಯಬೇಕು. ಮಕ್ಕಳು ಶಿಕ್ಷಣಕ್ಕಾಗಿ ಹಳ್ಳಿಯಿಂದ ನಗರಕ್ಕೆ ಬರುವುದು ತಪ್ಪಬೇಕು. ಗ್ರಾಮೀಣ ಶೈಕ್ಷಣಿಕ ವ್ಯವಸ್ಥೆಯ ಕುರಿತ ಕೀಳರಿಮೆ ಹೋಗಲಾಡಿಸಬೇಕು’ ಎಂದು ಹೇಳಿದರು.

‘ಕರ್ನಾಟಕ ಪಬ್ಲಿಕ್ ಶಾಲೆಗಳು (ಕೆಪಿಎಸ್) ಸೇರಿದಂತೆ ರಾಜ್ಯದಾದ್ಯಂತ ಎರಡು ಸಾವಿರ ಸರ್ಕಾರಿ ಶಾಲೆಗಳನ್ನು ‘ಸಮತ್ವ’ ಯೋಜನೆಯಡಿ ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ.

ಬೆಂಗಳೂರಿನಲ್ಲಿ ಸೋಮವಾರ ನಡೆದ ‘ಸಿಎಸ್‌ಆರ್ ಶಿಕ್ಷಣ ಸಮಾವೇಶ–2024’ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಸಚಿವ ಮಧುಬಂಗಾರಪ್ಪ(ಎಡದಿಂದ ಮೂರನೆಯವರು) ವೋಲ್ವೊ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಕಮಲ್ ಬಾಲಿ (ಎಡದಿಂದ ನಾಲ್ಕನೆಯವರು) ಅವರೊಂದಿಗೆ ಚರ್ಚಿಸಿದರು. ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಮತ್ತು ಯುನೈಟೆಡ್ ವೇ ಕಂಪನಿಯ ಪ್ರಶಾಂತ್ ಪ್ರಕಾಶ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಯಾವುದೇ ಜಿಲ್ಲೆಯ, ಯಾವುದೇ ಹಳ್ಳಿಯ ಶಾಲೆಯನ್ನಾದರೂ ಅಭಿವೃದ್ಧಿಗೆ ಆಯ್ಕೆ ಮಾಡಿಕೊಳ್ಳಬಹುದು. ನಿಮ್ಮ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಶಾಲೆಗಳಲ್ಲಿ ಮೂಲ ಸೌಕರ್ಯ, ತಂತ್ರಜ್ಞಾನ ಸೇರಿದಂತೆ ಯಾವುದೇ ರೀತಿಯ ಅಭಿವೃದ್ಧಿಯನ್ನು, ಹಂತ ಹಂತವಾಗಿ ಕೈಗೊಳ್ಳಬಹುದು. ಸರ್ಕಾರ ನಿಮಗೆ ಅಗತ್ಯ ನೆರವು ನೀಡಲಿದೆ. ಯಾವುದೇ ತೊಡಕುಗಳು ಎದುರಾದರೂ, ಅದನ್ನು ಪರಿಹರಿಸಲಿದೆ’ ಎಂದು ಸಮಾವೇಶದಲ್ಲಿ ಭಾಗವಹಿಸಿದ್ದ ಕಂಪನಿಗಳಿಗೆ ಅವರು ಭರವಸೆ ನೀಡಿದರು.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ‘ರಾಜ್ಯದಲ್ಲಿ 50 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. 12,500 ಶಿಕ್ಷಕರನ್ನು ಕಾಯಂ ನೇಮಕಾತಿ ಮಾಡಿಕೊಳ್ಳಲಾಗಿದೆ. ಇನ್ನೂ ಐದು ಸಾವಿರ ಶಿಕ್ಷಕರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಅನುದಾನಿತ ಶಾಲೆಗಳ ಶಿಕ್ಷಕರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಮಾದರಿ ಶಾಲೆಗಳ ಅಭಿವೃದ್ಧಿ ಯೋಜನೆ ‘ಸಮತ್ವ’ ಕಾರ್ಯಕ್ರಮದ ಲಾಂಛನವನ್ನು ಶಿವಕುಮಾರ್ ಅನಾವರಣಗೊಳಿಸಿದರು. ಈ ಯೋಜನೆಯ ಭಾಗವಾಗಿ ಮೊದಲ ಹಂತದಲ್ಲಿ 500 ಶಾಲೆಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಒಡಂಬಡಿಕೆಗೆ ಸಹಿ

ಮೈಸೂರು, ಕೋಲಾರ, ಬೆಳಗಾವಿ ಸೇರಿದಂತೆ ಆರು ಜಿಲ್ಲೆಗಳ, ಏಳಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಒಟ್ಟು ₹68 ಕೋಟಿ ವೆಚ್ಚದಲ್ಲಿ ಮಾದರಿ ಶಾಲೆಗಳನ್ನಾಗಿ ಅಭಿವೃದ್ಧಿ ಪಡಿಸಲು ಆರು ಕಂಪನಿಗಳು, ಎರಡು ಚಾರಿಟಬಲ್ ಟ್ರಸ್ಟ್‌ಗಳು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಯೊಂದಿಗೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದವು.

ಇವಿ ಚಾರ್ಜಿಂಗ್ ಸ್ಟೇಷನ್: ಕರ್ನಾಟಕ ಮೊದಲ ಸ್ಥಾನ

ಬೆಂಗಳೂರು: ದೇಶದಲ್ಲೇ ಅತಿ ಹೆಚ್ಚು ಸಾರ್ವಜನಿಕ ಎಲೆಕ್ಟ್ರಿಕ್ ವಾಹನಗಳ (ಇವಿ) ಜಾರ್ಜಿಂಗ್ ಸ್ಟೇಷನ್‌ಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದು ಕೇಂದ್ರ ಇಂಧನ ಸಚಿವಾಲಯದ ಬ್ಯೂರೊ ಆಫ್ ಎನರ್ಜಿ ಎಫಿಷಿಯನ್ಸಿ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ.

ವರದಿ ಪ್ರಕಾರ, 5,765 ಇವಿ ಚಾರ್ಜಿಂಗ್ ಸ್ಟೇಷನ್‌ಗಳೊಂದಿಗೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರ (3,728) ಎರಡನೇ ಸ್ಥಾನ, ಉತ್ತರ ಪ್ರದೇಶ (1,989) ಮತ್ತು ದೆಹಲಿ (1,941) ನಂತರದ ಸ್ಥಾನದಲ್ಲಿವೆ.

ತಮಿಳುನಾಡಿನಲ್ಲಿ 1,413, ಕೇರಳ 1,212 ಮತ್ತು ರಾಜಸ್ಥಾನ 1,129, ಗುಜರಾತ್ 992, ತೆಲಂಗಾಣ 956, ಪಶ್ಚಿಮ ಬಂಗಾಳ 763, ಹರಿಯಾಣ 709, ಮತ್ತು ಆಂಧ್ರಪ್ರದೇಶದಲ್ಲಿ 601 ಚಾರ್ಜಿಂಗ್ ಸ್ಟೇಷನ್‌ಗಳಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 4,462 ಇವಿ ಚಾರ್ಜಿಂಗ್ ಸ್ಟೇಷನ್‌ಗಳಿದ್ದು, ರಾಜ್ಯದಲ್ಲಿ ಅತಿ ಹೆಚ್ಚು ಸ್ಟೇಷನ್‌ಗಳನ್ನು ಹೊಂದಿರುವ ಜಿಲ್ಲೆಯಾಗಿದೆ.

ಹಳಿಗೆ ಬಿದ್ದ ಅಂಧ ಪ್ರಯಾಣಿಕರು: ರಕ್ಷಿಸಿದ ಮೆಟ್ರೊ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಸೋಮವಾರ ಅಂಧ ಪ್ರಯಾಣಿಕರಿಬ್ಬರು ಆಕಸ್ಮಿಕವಾಗಿ ಹಳಿ ಮೇಲೆ ಬಿದ್ದಿದ್ದು, ‘ನಮ್ಮ ಮೆಟ್ರೊ’ ಸಿಬ್ಬಂದಿ ಅವರನ್ನು ರಕ್ಷಿಸಿದ್ದಾರೆ.

ಅತ್ತಿಗುಪ್ಪೆ ಮೆಟ್ರೊ ನಿಲ್ದಾಣಕ್ಕೆ ಪ್ರಯಾಣಿಸಲು ಸೋಮವಾರ ಮಧ್ಯಾಹ್ನ 1.13ಕ್ಕೆ ಮೂವರು ಅಂಧ ಪ್ರಯಾಣಿಕರು ಮೆಜೆಸ್ಟಿಕ್‌ನ ಹಸಿರು ಮಾರ್ಗದ ನಿಲ್ದಾಣಕ್ಕೆ ಬಂದಿದ್ದರು. ಅದರಲ್ಲಿ ಇಬ್ಬರು ಆಯ ತಪ್ಪಿ ಕೆಳಗೆ ಬಿದ್ದರು. ‘ನಮ್ಮ ಮೆಟ್ರೊ’ ಭದ್ರತಾ ಸಿಬ್ಬಂದಿ ಕೂಡಲೇ ವಿದ್ಯುತ್ ಸರಬರಾಜು ಕಡಿತಗೊಳಿಸಿ, ‘ತುರ್ತು ಟ್ರಿಪ್ ಸಿಸ್ಟಂ’ ಕಾರ್ಯಾಚರಣೆ ನಡೆಸಿ ಸಹ ಪ್ರಯಾಣಿಕರ ನೆರವಿನಿಂದ ಅವರನ್ನು ಮೇಲಕ್ಕೆತ್ತಿದರು.

ಅವರಿಗೆ ಯಾವುದೇ ಗಾಯಗಳಾಗಿಲ್ಲ. ಈ ಘಟನೆಯಿಂದ ಹಸಿರು ಮಾರ್ಗದಲ್ಲಿ ಮಧ್ಯಾಹ್ನ 1.13ರಿಂದ 1.26ರವರೆಗೆ ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡಿತ್ತು. ಬಳಿಕ ಸಂಚಾರ ಪುನರಾರಂಭಗೊಂಡಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಆಗಸ್ಟ್‌ನಲ್ಲಿ ಆಯತಪ್ಪಿ ಹಳಿಗೆ ಬಿದ್ದ ಎರಡನೇ ಪ್ರಕರಣ ಇದಾಗಿದೆ. ಆ.3ರಂದು ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ನಾಲ್ಕು ವರ್ಷದ ಬಾಲಕ ಆಯ ತಪ್ಪಿ ಕೆಳಗೆ ಬಿದ್ದಿದ್ದ. ಆತನನ್ನೂ ಸುರಕ್ಷಿತವಾಗಿ ಮೇಲಕ್ಕೆತ್ತಲಾಗಿತ್ತು.

ಪೀಣ್ಯ ಇಂಡಸ್ಟ್ರಿ– ನಾಗಸಂದ್ರ ನಡುವೆ ಇಂದಿನಿಂದ ಮೆಟ್ರೊ ಸಂಚಾರ ವ್ಯತ್ಯಯ

ಬೆಂಗಳೂರು: ‘ನಮ್ಮ ಮೆಟ್ರೊ’ ಹಸಿರು ಮಾರ್ಗದ ವಿಸ್ತರಿತ ಪ್ರದೇಶ ನಾಗಸಂದ್ರ–ಮಾದಾವರ ಮಧ್ಯೆ ಸಿಗ್ನಲಿಂಗ್ ಸಂಬಂಧಿಸಿದಂತೆ ವಿವಿಧ ಪರೀಕ್ಷೆಗಳನ್ನು ನಡೆಸುತ್ತಿರುವುದರಿಂದ ಪೀಣ್ಯ ಇಂಡಸ್ಟ್ರಿಯಿಂದ ನಾಗಸಂದ್ರವರೆಗೆ ಮಂಗಳವಾರದಿಂದ (ಆ.20) ಬೇರೆ ಬೇರೆ ಐದು ದಿನಗಳಲ್ಲಿ ಮೆಟ್ರೊ ಸಂಚಾರ ಸ್ಥಗಿತಗೊಳ್ಳಲಿದೆ.

ಆ.20, 23, 30, ಸೆಪ್ಟೆಂಬರ್ 6 ಮತ್ತು 11ರಂದು ಪೀಣ್ಯ ಇಂಡಸ್ಟ್ರಿ– ನಾಗಸಂದ್ರ ಮಧ್ಯೆ ಮೆಟ್ರೊ ರೈಲು ಸಂಚಾರ ಇರುವುದಿಲ್ಲ. ಆ.24ರಂದು ಪೀಣ್ಯ ಇಂಡಸ್ಟ್ರಿ–ನಾಗಸಂದ್ರ ನಡುವೆ ರಾತ್ರಿ 11.05ರ ಬದಲು ರಾತ್ರಿ 10ಕ್ಕೆ ಕೊನೆಯ ರೈಲು ಸಂಚರಿಸಲಿದೆ. ಪೀಣ್ಯ ಇಂಡಸ್ಟ್ರಿಯಿಂದ ರೇಷ್ಮೆ ಸಂಸ್ಥೆ ಕಡೆಗೆ ಯಾವುದೇ ಬದಲಾವಣೆಗಳು ಇರುವುದಿಲ್ಲ. ನೇರಳೆ ಮಾರ್ಗದಲ್ಲಿಯೂ ವ್ಯತ್ಯಾಸಗಳಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸತೀಶ ಜಾರಕಿಹೊಳಿ– ಡಿಕೆಶಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕುಮಾರಪಾರ್ಕ್ ಸರ್ಕಾರಿ ಗೃಹ ಕಚೇರಿಯಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸೋಮವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿರುವ ವಿಷಯ ರಾಜ್ಯ ರಾಜಕೀಯದಲ್ಲಿ ಕೋಲಾಹಲ ಎಬ್ಬಿಸಿರುವ ಮಧ್ಯೆಯೇ ಈ ಇಬ್ಬರು ಸುಮಾರು ಒಂದು ತಾಸು ರಹಸ್ಯವಾಗಿ ಮಾತುಕತೆ ನಡೆಸಿರುವುದು ಕುತೂಹಲ ಮೂಡಿಸಿದೆ.

ಈ ಹಿಂದೆ ಜಾರಕಿಹೊಳಿ ತಮ್ಮ ತವರು ಜಿಲ್ಲೆ ಬೆಳಗಾವಿಯಲ್ಲಿ ಶಿವಕುಮಾರ್ ಹಸ್ತಕ್ಷೇಪದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಜಿಲ್ಲೆಯಲ್ಲಿ ಜಾರಕಿಹೊಳಿ ಕುಟುಂಬದ ಪ್ರಾಬಲ್ಯಕ್ಕೆ ಸವಾಲು ಹಾಕಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಶಿವಕುಮಾರ್ ಪ್ರಾಮುಖ್ಯತೆ ನೀಡಿರುವುದಕ್ಕೆ ಜಾರಕಿಹೊಳಿ ಅಸಮಾಧಾನಗೊಂಡಿದ್ದರು.

ಇತ್ತೀಚೆಗೆ ನಡೆದ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ನಿರ್ದೇಶಕರು, ನಿರ್ಮಾಪಕರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಜಾರಕಿಹೊಳಿ ಹೇಳಿಕೆ ನೀಡಿದ್ದರು. ಈ ವಿಷಯವನ್ನು ಸುದ್ದಿಗಾರರು ಗಮನಕ್ಕೆ ತಂದಾಗ, ಆ ರೀತಿ ಹೇಳಿಕೆ ನೀಡಿದವರನ್ನು ಹುಚ್ಚಾಸ್ಪತ್ರೆಗೆ ಕಳುಹಿಸಿಕೊಡೋಣ ಎಂದು ಶಿವಕುಮಾರ್ ತಿರುಗೇಟು ನೀಡಿದ್ದರು. ಈ ಹಿನ್ನೆಲೆಯಲ್ಲಿಯೂ ಇವರಿಬ್ಬರ ಭೇಟಿ ಚರ್ಚೆಗೆ ಗ್ರಾಸವಾಗಿದೆ.

ಡಿ.ಕೆ. ಶಿವಕುಮಾರ್ ಅವರನ್ನು ಸತೀಶ ಜಾರಕಿಹೊಳಿ ಭೇಟಿ ಮಾಡಿ ಮಾತುಕತೆ ನಡೆಸಿದರು

ವಿಶೇಷ ತನಿಖಾ ತಂಡದಿಂದ ಪರಿಶೀಲನೆ

ಮಳವಳ್ಳಿ: ಸರ್ಕಾರಿ ಜಮೀನುಗಳನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಪರಭಾರೆ ಮಾಡಿರುವ ಆರೋಪದ ತನಿಖೆಗೆ ಸರ್ಕಾರ ನೇಮಿಸಿರುವ ತಂಡದ ಅಧಿಕಾರಿಗಳು ಪಟ್ಟಣದ ತಾಲ್ಲೂಕು ಕಚೇರಿಗೆ ಸೋಮವಾರ ಭೇಟಿ ನೀಡಿ ದಾಖಲಾತಿಗಳ ಪರಿಶೀಲನೆ ನಡೆಸಿದರು.

ಕಂದಾಯ ಆಯುಕ್ತಾಲಯದ ವಿಶೇಷ ಜಿಲ್ಲಾಧಿಕಾರಿ ಸಂಗಪ್ಪ ನೇತೃತ್ವದ ತಂಡವು ಭೂಮಿ ಶಾಖೆ, ಆರ್‌ಆರ್‌ಟಿ ಶಾಖೆ ಮತ್ತು ಸರ್ವೆ ಶಾಖೆಗೆ ಭೇಟಿ ನೀಡಿದ ವೇಳೆ, ಉಪ ವಿಭಾಗಾಧಿಕಾರಿ ಎಂ.ಶಿವಮೂರ್ತಿ ಹಾಗೂ ತಹಶೀಲ್ದಾರ್ ಕೆ.ಎನ್. ಲೋಕೇಶ್ ಮಾಹಿತಿ ನೀಡಿದರು. ಸರ್ಕಾರಿ ಭೂಮಿಯ ಅಕ್ರಮವಾಗಿ ಪರಭಾರೆ ಕುರಿತು ಜಿಲ್ಲಾಧಿಕಾರಿ ಮಧ್ಯಂತರ ವರದಿ ಸಲ್ಲಿಸಿದ ಬಳಿಕ, ಸರ್ಕಾರ ತನಿಖೆಗೆ ತಂಡವನ್ನು ನೇಮಿಸಿತ್ತು.

ನೋವು ನಿವಾರಕ ಔಷಧಗಳ ದುರ್ಬಳಕೆ ತಡೆಯಲು ಮುಂದಾಗಿರುವ ರಾಜ್ಯ ಔಷಧ ನಿಯಂತ್ರಕ ಡಾ. ಉಮೇಶ್ ನೇತೃತ್ವದ ತಂಡ, ನಗರದ ಕತ್ರಿಗುಪ್ಪೆ ರಸ್ತೆಯಲ್ಲಿರುವ ಅಭಿನವ್ ಮೆಡಿಕಲ್ಸ್‌ಗೆ ದಾಳಿ ನಡೆಸಿ ಅಪಾರ ಪ್ರಮಾಣದ ಟಾಪೆಂಟಾಡಾಲ್ ಮತ್ತು ಇತರ ನೋವು ನಿವಾರಕ ಔಷಧಗಳ ಖರೀದಿ ಮತ್ತು ಬಿಲ್ ನೀಡದೆ ಮಾರಾಟ ಮಾಡಿರುವುದನ್ನು ಪತ್ತೆ ಮಾಡಿದೆ. ಉಪ ಔಷಧ ನಿಯಂತ್ರಕರಾದ ಖಾಲಿದ್ ಅಹಮದ್ ಖಾನ್, ಡಾ. ಕೆಂಪಯ್ಯ ಸುರೇಶ್ ಇದ್ದರು

ನೆಲಮಂಗಲ: ಮುಖ್ಯರಸ್ತೆ ಮೇಲ್ದರ್ಜೆಗೆ

ನೆಲಮಂಗಲ: ‘ಪಟ್ಟಣದ ಮುಖ್ಯರಸ್ಥೆಯನ್ನು ₹13 ಕೋಟಿ ವಿಶೇಷ ಅನುದಾನದಲ್ಲಿ ಮೇಲ್ದರ್ಜೆಗೇರಿಸಿ ಚತುಷ್ಪಥ ರಸ್ತೆಯನ್ನಾಗಿಸಲಾಗುವುದು‘ ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಪವಾಡ ಬಸವಣ್ಣದೇವರ ಮಠದಲ್ಲಿ ತಾಲ್ಲೂಕು ವಿರಶೈವ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ, ವೀರಶೈವ ಮಹಾಸಭಾ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಗರಸಭೆ ನೂತನ ಅಧ್ಯಕ್ಷೆ ಪೂರ್ಣಿಮಾ ಸುಗ್ಗರಾಜು ಅವರನ್ನು ಅಭಿನಂದಿಸಿ ಮಾತನಾಡಿದರು.

ನಗರದ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವುದಾಗಿ ಭರವಸೆ ನೀಡಿದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಪೂರ್ಣಿಮಾ ಸುಗ್ಗರಾಜು, ‘ನಗರಸಭೆಯ ಸರ್ವ ಸದಸ್ಯರ ಸಹಕಾರದೊಂದಿಗೆ ಸಮರ್ಪಣಾ ಭಾವದಿಂದ ಕಾರ್ಯನಿರ್ವಹಿಸುತ್ತೇನೆ’ ಎಂದು ತಿಳಿಸಿದರು.

ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ಮಹಾಸಭಾ ಅಧ್ಯಕ್ಷ ಎನ್.ರಾಜಶೇಖರ್, ನೌಕರರ ಸಂಘದ ಅಧ್ಯಕ್ಷ ಪರಮೇಶ್ ಅದರಂಗಿ, ನಿವೃತ್ತರ ಸಂಘದ ಅಧ್ಯಕ್ಷ ನಾಗರಾಜು, ತ್ಯಾಮಗೊಂಡ್ಲು ಕಾಲುವೆ ಮಠ, ಗುಡೆಮಾರನಹಳ್ಳಿ, ಜಗ್ಗಣ್ಣಯ್ಯಮಠ, ಮಾಗಡಿ ಬಂಡೆಮಠದ ಶ್ರೀಗಳು, ಪುರಸಭೆ ಮಾಜಿ ಅಧ್ಯಕ್ಷ ಆರ್.ಉಮಾಶಂಕರ್, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಪ್ರದೀಪ್, ಮುಖಂಡರಾದ ಎನ್.ಎಸ್.ನಟರಾಜು, ಎನ್.ಬಿ.ದಯಾಶಂಕರ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನೈರುತ್ಯ ರೈಲ್ವೆ ಬಜೆಟ್: ಹೊಸ ಮಾರ್ಗಕ್ಕೆ ₹1,448.89 ಕೋಟಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೇಂದ್ರ ಬಜೆಟ್‌ನಲ್ಲಿ ನೈರುತ್ಯ ರೈಲ್ವೆಗೆ ₹6,493.87 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಹೊಸ ಮಾರ್ಗ ನಿರ್ಮಾಣಕ್ಕೆ ₹1,448.89 ಕೋಟಿ ನಿಗದಿಪಡಿಸಲಾಗಿದೆ.

ರೈಲು ಹಳಿ ದ್ವಿಪಥವಾಗಿ ಮೇಲ್ದರ್ಜೆಗೇರಿಸಲು ₹1,241 ಕೋಟಿ ಹಾಗೂ ಪ್ರಯಾಣಿಕರ ಸೌಲಭ್ಯಗಳ ಅಭಿವೃದ್ಧಿಗೆ ₹961.22 ಕೋಟಿ ನಿಗದಿಪಡಿಸಲಾಗಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ರೈಲ್ವೆ ಮೇಲ್ಸೇತುವೆ, ಕೆಳಸೇತುವೆ ಕಾಮಗಾರಿಗೆ ₹349.40 ಕೋಟಿ ಮತ್ತು ಸಂಚಾರ ಸೌಲಭ್ಯಕ್ಕೆ ₹145.84 ಕೋಟಿ ಮೀಸಲಿಡಲಾಗಿದೆ. ಅಮೃತ ಭಾರತ ಯೋಜನೆಯಡಿ 51 ನಿಲ್ದಾಣಗಳ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದೆ. ಬೆಂಗಳೂರಿನ ಕಂಟೋನ್ಮೆಂಟ್ ಮತ್ತು ಯಶವಂತಪುರ ನಿಲ್ದಾಣಗಳ ಅಭಿವೃದ್ಧಿ ಕಾರ್ಯ ಈಗಾಗಲೇ ಆರಂಭವಾಗಿವೆ. ರೈಲ್ವೆ ಸಚಿವಾಲಯದ ಅನುಮತಿ ಮೇರೆಗೆ ಬೆಂಗಳೂರು ವಿಭಾಗದ ಗುಬ್ಬಿ ಮತ್ತು ಶ್ರವಣಬೆಳಗೊಳ ನಿಲ್ದಾಣವನ್ನು ಈಚೆಗಷ್ಟೇ ಯೋಜನೆಗೆ ಸೇರಿಸಲಾಗಿದೆ.

ಹೊಸ ಮಾರ್ಗಗಳು: ಹಾಸನ–ಬೆಂಗಳೂರು (ಶ್ರವಣಬೆಳಗೊಳ ಮಾರ್ಗವಾಗಿ), ಹುಬ್ಬಳ್ಳಿ–ಅಂಕೋಲಾ ಹಾಗೂ ಬೆಳಗಾವಿ–ಧಾರವಾಡ (ಕಿತ್ತೂರು ಮಾರ್ಗವಾಗಿ) ನೂತನ ಮಾರ್ಗ ನಿರ್ಮಾಣಕ್ಕಾಗಿ ತಲಾ ₹20 ಕೋಟಿ, ಗದಗ (ತಳಕಲ್) –ವಾಡಿ ಮಾರ್ಗಕ್ಕಾಗಿ ₹200 ಕೋಟಿ, ತುಮಕೂರು–ದಾವಣಗೆರೆ (ಚಿತ್ರದುರ್ಗ ಮಾರ್ಗವಾಗಿ), ಬಾಗಲಕೋಟೆ–ಕುಡಚಿ, ಗದಗ–ಯಲವಿಗಿ, ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ಮಾರ್ಗಗಳಿಗೆ ತಲಾ (₹150 ಕೋಟಿ), ಕಡೂರು–ಚಿಕ್ಕಮಗಳೂರು–ಹಾಸನ (₹70 ಕೋಟಿ), ತುಮಕೂರು–ರಾಯದುರ್ಗ (ಕಲ್ಯಾಣದುರ್ಗ ಮಾರ್ಗವಾಗಿ) ₹250 ಕೋಟಿ, ಮಾರಿಕುಪ್ಪಮ್–ಕುಪ್ಪಮ್ (₹60 ಕೋಟಿ), ಮಲಗೂರು–ಪಾಲಸಮುದ್ರಮ್ (₹21 ಕೋಟಿ), ಮುನಿರಾಬಾದ್–ಮಹಬೂಬನಗರ (₹100 ಕೋಟಿ) ಮೀಸಲಿಡಲಾಗಿದೆ.

ದ್ವಿಪಥ ಮಾರ್ಗ: ಬೈಯಪ್ಪನಹಳ್ಳಿ–ಹೊಸೂರು ಹಾಗೂ ಬೆಂಗಳೂರು ಕಂಟೋನ್ಮೆಂಟ್–ವೈಟ್‌ಫೀಲ್ಡ್ (ನಾಲ್ಕು ಮಾರ್ಗಕ್ಕಾಗಿ) ತಲಾ (₹200 ಕೋಟಿ), ಯಲಹಂಕ–ಪೆನುಕೊಂಡ ಮಾರ್ಗಕ್ಕೆ ತಲಾ ₹20 ಕೋಟಿ, ಯಶವಂತಪುರ–ಚನ್ನಸಂದ್ರ ಹಾಗೂ ಪೆನುಕೊಂಡ–ಧರ್ಮಾವರಮ್ ಮಾರ್ಗ ದ್ವಿಪಥಕ್ಕಾಗಿ ₹100 ಕೋಟಿ ಮೀಸಲಿರಿಸಲಾಗಿದೆ’ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಕೊರಿಯೊಗ್ರಾಫರ್ ಬಂಧನ

ಅತ್ಯಾಚಾರ ಯತ್ನ: ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜು ವಿದ್ಯಾರ್ಥಿನಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಎಚ್.ಎಸ್.ಆರ್. ಲೇಔಟ್ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಎಸ್.ಆರ್.ನಗರದ ನಿವಾಸಿ ಮುಕೇಶ್ವರನ್ (24) ಬಂಧಿತ.

'ಹೊಸೂರು ಸರ್ವೀಸ್ ರಸ್ತೆಯ ಬಳಿ ಶನಿವಾರ ರಾತ್ರಿ 1ರಿಂದ 1.30ರ ಅವಧಿಯಲ್ಲಿ ಕೃತ್ಯ ಎಸಗಿದ್ದ ಆರೋಪಿ, ಆಡುಗೋಡಿಯ ಮನೆಯೊಂದರಲ್ಲಿ ಅವಿತಿದ್ದ. ಆರೋಪಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ಸುಳಿವು ಆಧರಿಸಿ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ತಮಿಳುನಾಡಿನವನಾದ ಆರೋಪಿ ಚಿಕ್ಕ ವಯಸ್ಸಿನಲ್ಲೇ ನಗರಕ್ಕೆ ಬಂದು ಕುಟುಂಬದ ಸದಸ್ಯರ ಜತೆಗೆ ಇಲ್ಲಿಯೇ ನೆಲಸಿದ್ದ. ನಗರದ ಸಂಸ್ಥೆಯೊಂದರಲ್ಲಿ ನೃತ್ಯ ತರಬೇತಿ ಪಡೆದುಕೊಂಡಿದ್ದ. ಕೊರಿಯೊಗ್ರಫಿಯನ್ನು ವೃತ್ತಿ ಮಾಡಿಕೊಂಡಿದ್ದ. ಶಾಲೆಯೊಂದರಲ್ಲಿ ವಿದ್ಯಾರ್ಥಿಗಳಿಗೆ ಸ್ಕೇಟಿಂಗ್ ಹಾಗೂ ನೃತ್ಯ ತರಬೇತಿ ಸಹ ನೀಡುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹೊರವಲಯದಲ್ಲಿ ಇರುವ ಖಾಸಗಿ ಕಾಲೇಜಿನಲ್ಲಿ ಸಂತ್ರಸ್ತ ವಿದ್ಯಾರ್ಥಿನಿ ಓದುತ್ತಿದ್ದಾರೆ. ಶನಿವಾರ ಸಂಜೆ ಸ್ನೇಹಿತರ ಜತೆಗೆ ಪಾರ್ಟಿಗೆ ತೆರಳಿದ್ದರು. ತಡರಾತ್ರಿವರೆಗೂ ಕೋರಮಂಗಲ ಪಬ್‌ನಲ್ಲಿ ಸ್ನೇಹಿತರ ಜತೆಗೆ ಪಾರ್ಟಿ ಮಾಡಿದ್ದರು. ಬಳಿಕ ಸ್ನೇಹಿತರೊಂದಿಗೆ ಕಾರು ಚಾಲನೆ ಮಾಡಿಕೊಂಡು ಮನೆಗೆ ಹೋಗುವಾಗ ಮಾರ್ಗಮಧ್ಯೆ ಎರಡು ಆಟೊಗಳಿಗೆ ಕಾರು ಡಿಕ್ಕಿಯಾಗಿದೆ. ಅಲ್ಲಿ ಆಟೊ ಚಾಲಕರು ಹಾಗೂ ಯುವತಿಯ ಸ್ನೇಹಿತರ ಮಧ್ಯೆ ವಾಗ್ವಾದ ನಡೆಯುತ್ತಿತ್ತು. ಗಲಾಟೆಯ ಮಾಹಿತಿ ಸಿಕ್ಕಿದ್ದರಿಂದ ಸ್ಥಳಕ್ಕೆ ಹೊಯ್ಸಳ ಸಿಬ್ಬಂದಿ ಬಂದಿದ್ದರು. ಎಲ್ಲರನ್ನೂ ಪೊಲೀಸರು ಸಮಾಧಾನಪಡಿಸಿದ್ದರು' ಎಂದು ಮೂಲಗಳು ಹೇಳಿವೆ.

'ಬಳಿಕ ಸಂತ್ರಸ್ತ ಯುವತಿ ಕಾರು ಹಾಗೂ ಸ್ನೇಹಿತರನ್ನು ಅಲ್ಲೇ ಬಿಟ್ಟು ಆಟೊದಲ್ಲಿ ತೆರಳಿದ್ದರು. ಸ್ವಲ್ಪ ದೂರ ಪ್ರಯಾಣಿಸಿದ ಮೇಲೆ ಆಟೊ ಇಳಿದು ನಡೆದು ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ತೆರಳುತ್ತಿದ್ದ ದ್ವಿಚಕ್ರ ವಾಹನ ಸವಾರನ ಬಳಿ ಡ್ರಾಪ್ ಕೇಳಿ, ಆತನೊಂದಿಗೆ ಹೊರಟಿದ್ದರು. ಆತ ಆಕೆಯನ್ನು ಬೇರೊಂದು ಮಾರ್ಗದಲ್ಲಿ ಬೊಮ್ಮನಹಳ್ಳಿ ಸಮೀಪದ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದ' ಎಂದು ಮೂಲಗಳು ತಿಳಿಸಿವೆ.

'ಯುವತಿ ತನ್ನ ಮೊಬೈಲ್‌ನಲ್ಲಿದ್ದ ಎಸ್‌ಒಎಸ್ ಬಟನ್ ಒತ್ತಿದ್ದರು. ಆಕೆಯ ತಂದೆ ಮತ್ತು ಸ್ನೇಹಿತರ ಮೊಬೈಲ್‌ಗೆ ತುರ್ತು ಸಂದೇಶ ಮತ್ತು ಲೋಕೇಶನ್ ಹೋಗಿತ್ತು. ಲೋಕೇಶನ್ ಆಧರಿಸಿ ಸ್ನೇಹಿತರು ಸ್ಥಳಕ್ಕೆ ಬಂದಾಗ ಗಿರಿಯಾಸ್ ಶೋರೂಮ್ ಹಿಂಭಾಗದ ಲಾರಿ ನಿಲ್ಲಿಸುವ ಜಾಗದಲ್ಲಿ ಬೆತ್ತಲೆ ಸ್ಥಿತಿಯಲ್ಲಿ ಸಂತ್ರಸ್ತೆ ಇದ್ದರು. ಆರೋಪಿ ಓಡಿಹೋಗಿದ್ದ' ಎಂದು ಮೂಲಗಳು ಹೇಳಿವೆ.

ಸಂತ್ರಸ್ತೆ ಚೇತರಿಕೆ

ಸದ್ಯ ಸಂತ್ರಸ್ತ ಯುವತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

'ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಇದುವರೆಗೆ ನಡೆದ ತನಿಖೆಯಿಂದ ಆರೋಪಿ ವಿರುದ್ಧ ಈ ಹಿಂದೆ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂಬುದು ಗೊತ್ತಾಗಿದೆ' ಎಂದು ತಿಳಿಸಿದರು.

ಯುವತಿಯ ಬಟ್ಟೆ ಹರಿದಿದ್ದ ಆರೋಪಿ

'ಆರೋಪಿ ಸಹ ತನ್ನ ಸ್ನೇಹಿತರ ಜತೆಗೆ ಪಾರ್ಟಿ ನಡೆಸಿದ್ದ. ಪಾರ್ಟಿಯಲ್ಲಿ ಮದ್ಯ ಸೇವಿಸಿದ್ದ. ಮದ್ಯದ ಅಮಲಿನಲ್ಲೇ ದ್ವಿಚಕ್ರ ವಾಹನ ಸವಾರಿ ಮಾಡಿಕೊಂಡು ಬರುತ್ತಿದ್ದ. ಅದೇ ಮಾರ್ಗದಲ್ಲಿ ಬರುತ್ತಿದ್ದ ವಿದ್ಯಾರ್ಥಿನಿಯನ್ನು ಕರೆದೊಯ್ದು ಅತ್ಯಾಚಾರಕ್ಕೆ ಪ್ರಯತ್ನಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯು ಯುವತಿಯ ಬಟ್ಟೆ ಹರಿದು ದುಷ್ಕೃತ್ಯಕ್ಕೆ ಯತ್ನಿಸಿದ್ದ. ಯುವತಿಯೂ ಪ್ರತಿರೋಧ ಒಡ್ಡಿದ್ದರು. ಆತನ ಬಟ್ಟೆ ಹರಿದು, ಮುಖಕ್ಕೆ ಪರಚಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸರ್ಕಾರಿ ಜಮೀನು ಕಬಳಿಕೆ; ವರದಿ ನೀಡುವಂತೆ ಡಿಸಿ ಆದೇಶ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಚಿತ್ತಾಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮರಗೋಳ, ಯರಗಲ್, ಮೊಗಲಾ, ಇಟಗಾ ಹಾಗೂ ದಿಗ್ಗಾಂವ್ ಗ್ರಾಮಗಳಲ್ಲಿನ ಸರ್ಕಾರಿ ಜಮೀನು ಅಕ್ರಮ ಕಬಳಿಕೆ ಕುರಿತು ದಾಖಲೆ ಪರಿಶೀಲನೆ ನಡೆಸಿ, ವಿಸ್ತೃತ ವರದಿ ನೀಡುವಂತೆ ಸೂಚಿಸಿ ಐವರು ಅಧಿಕಾರಿಗಳ ಸಮಿತಿ ರಚಿಸಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಆದೇಶಿಸಿದ್ದಾರೆ.

'ಜಮೀನು ಮಂಜೂರಾತಿ ಕಡತ ತಹಶೀಲ್ದಾರ್ ಕಚೇರಿಯಲ್ಲಿಲ್ಲ, ಸಾವಿರ ಎಕರೆ ಸರ್ಕಾರಿ ಜಮೀನು ಕಬಳಿಕೆ' ಶೀರ್ಷಿಕೆಯಡಿ 'ಪ್ರಜಾವಾಣಿ' ಆ.14ರ ಸಂಚಿಕೆಯಲ್ಲಿ ವಿಸ್ತೃತ ವರದಿ ಪ್ರಕಟಿಸಿ ಜಿಲ್ಲಾಡಳಿತ ಮತ್ತು ಸರ್ಕಾರದ ಗಮನ ಸೆಳೆದಿತ್ತು. ವರದಿ ಪ್ರಕಟವಾದ ದಿನವೇ ಜಿಲ್ಲಾಧಿಕಾರಿಯು ಸಮಿತಿ ರಚಿಸಿ ಆದೇಶಿಸಿದ್ದಾರೆ.

ಹೆಚ್ಚುವರಿ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸೇಡಂ ಎ.ಸಿ ಪ್ರಭು ರೆಡ್ಡಿ, ರಾಷ್ಟ್ರೀಯ ಹೆದ್ದಾರಿ ಭೂಸ್ವಾಧೀನಾಧಿಕಾರಿ ರಾಮಚಂದ್ರ ಗಡಾದೆ, ಚಿತ್ತಾಪುರ ತಹಶೀಲ್ದಾರ್ ಅಮರೇಶ ಬಿರಾದಾರ, ಸೇಡಂ ಎ.ಸಿ ಕಚೇರಿಯ ಗ್ರೇಡ್-2 ತಹಶೀಲ್ದಾರ್ ನಾಗನಾಥ ತರಗೆ ಒಳಗೊಂಡ ಸಮಿತಿ ರಚಿಸಿದ್ದಾರೆ.

'ಶವ ಹಸ್ತಾಂತರಿಸುವಾಗ ಅಗೌರವ ಸಲ್ಲ'

ಬೆಳಗಾವಿ: 'ಶವಕ್ಕೆ ಅಗೌರವ ತೋರಿದರೆ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು. ಮೃತರ ಕುಟುಂಬಕ್ಕೆ ಆಂಬುಲೆನ್ಸ್ ಮೂಲಕ ಮೃತ ದೇಹ ಹಸ್ತಾಂತರಿಸಬೇಕು. ಕರ್ತವ್ಯ ನಿರ್ವಹಣೆ ಜೊತೆಗೆ ಮಾನವೀಯತೆ ಮರೆಯಬಾರದು' ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯ ಎಸ್.ಕೆ.ವಂಟಿಗೋಡಿ ಅವರು ಜಿಲ್ಲಾ ಆಡಳಿತಕ್ಕೆ ತಾಕೀತು ಮಾಡಿದರು.

'ನಾವಗೆಯ ಸ್ನೇಹಂ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿದುರಂತದಲ್ಲಿ ಮೃತಪಟ್ಟ ಯಲಗೊಂಡ ಸಣ್ಣಯಲ್ಲಪ್ಪ(20) ಅವರ ದೇಹದ ಅವಶೇಷಗಳನ್ನು ಮಡಕೆಯಲ್ಲಿಟ್ಟು ಕೈಚೀಲದಲ್ಲಿ ಹಾಕಿ ಮೃತನ ಹೆತ್ತವರ ಕೈಗೆ ಕೊಡಲಾಗಿತ್ತು. ಇಂಥ ತಪ್ಪು ಮರುಕಳಿಸದಂತೆ ಎಚ್ಚರ ವಹಿಸಬೇಕು' ಎಂದರು.

ತುಂಗಭದ್ರಾ: ಆಂಧ್ರಪ್ರದೇಶ ಶಾಸಕ ಭೇಟಿ, ಹೊಸ ಯೋಜನೆ ಬಗ್ಗೆ ಪ್ರಸ್ತಾಪ

ಜಲಾಶಯ ಸೋರಿಕೆ ಸಂಪೂರ್ಣ ಬಂದ್

ಪ್ರಜಾವಾಣಿ ವಾರ್ತೆ

ಕೊಪ್ಪಳ/ ಹೊಸಪೇಟೆ: ತುಂಗಭದ್ರಾ ಜಲಾಶಯದ 19ನೇ ಸ್ಟಾಪ್‌ಲಾಗ್ ಗೇಟ್ ಮರಳಿ ಅಳವಡಿಸಿದ್ದರೂ ಆಗುತ್ತಿದ್ದ ಸಣ್ಣ ಪ್ರಮಾಣದಲ್ಲಿನ ಸೋರಿಕೆಯನ್ನು ಈಗ ಸಂಪೂರ್ಣ ತಡೆಗಟ್ಟಲಾಗಿದೆ.

ಗೇಟ್‌ಗೆ ಐದು ಎಲಿಮೆಂಟ್‌ಗಳನ್ನು ಅಳವಡಿಸಿ ವ್ಯಾಪಕ ಪ್ರಮಾಣದಲ್ಲಿ ಪೋಲಾಗುತ್ತಿದ್ದ ನೀರನ್ನು ತಡೆಗಟ್ಟಲಾಗಿತ್ತು. ಆದರೂ ಸಣ್ಣ ಪ್ರಮಾಣದಲ್ಲಿ ನೀರು ಹರಿದು ಹೋಗುತ್ತಿದ್ದ ಕಾರಣ ತಜ್ಞರ ತಂಡ ಆಕ್ಸಿಜನ್ ಬಳಸಿಕೊಂಡು ನೀರಿನೊಳಗೆ ಕಾರ್ಯಾಚರಣೆ ನಡೆಸಿತು.

'ಅಪಾಯಕಾರಿಯಾದ ಜಲಾಶಯದ ಸ್ಟಾಪ್‌ಲಾಗ್ ಬಳಿ ನೀರಿನೊಳಗೆ ಇಳಿದು ತಜ್ಞರು ಕಾರ್ಯ ನಿರ್ವಹಿಸಿ ಒಂದು ಹನಿ ನೀರು ಕೂಡ ಹೊರಹೋಗದಂತೆ ತಡೆಗಟ್ಟಿದ್ದಾರೆ' ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಸೋಮವಾರ ಮಾಧ್ಯಮದವರಿಗೆ ತಿಳಿಸಿದರು.

ನೀರಿನ ಸಂಗ್ರಹ ಏರಿಕೆ: ಜಲಾಶಯದ ಎಲ್ಲಾ ಗೇಟ್‌ಗಳನ್ನೂ ಬಂದ್ ಮಾಡಿ ನೀರು ಸಂಗ್ರಹಿಸಲಾಗುತ್ತಿದ್ದು, ಎರಡು ದಿನಗಳಲ್ಲಿ ನಾಲ್ಕು ಟಿಎಂಸಿ ಅಡಿಯಷ್ಟು ಹೆಚ್ಚಳವಾಗಿದೆ.



ತುಂಗಭದ್ರಾ ಜಲಾಶಯದ 19ನೇ ಗೇಟ್ ಅಳವಡಿಕೆ ಬಳಿಕ ನೀರಿನ ಸೋರಿಕೆ ಸಂಪೂರ್ಣ ನಿಂತಿದೆ

ಜಲಾಶಯದ ಸದ್ಯದ ಒಳಹರಿವಿನ ಪ್ರಮಾಣ 37,687 ಕ್ಯುಸೆಕ್ ಇದ್ದು, ಹೊರಹರಿವಿನ ಪ್ರಮಾಣ 10,275 ಕ್ಯುಸೆಕ್ ಇದೆ. ಇದೇ ರೀತಿ ಒಳಹರಿವಿನ ಪ್ರಮಾಣ ಮುಂದುವರಿದರೆ 10ರಿಂದ 15 ದಿನದೊಳಗೆ 90 ಟಿಎಂಸಿ ಅಡಿ ನೀರು ಜಲಾಶಯದಲ್ಲಿ ಸಂಗ್ರಹವಾಗಲಿದೆ ಎಂದು ತಜ್ಞರು ಹೇಳಿದ್ದಾರೆ.

ಶಾಸಕ ಭೇಟಿ: ಆಂಧ್ರಪ್ರದೇಶದ ರಾಯದುರ್ಗ ಕ್ಷೇತ್ರದ ಶಾಸಕ ಕಾಳವ ಶ್ರೀನಿವಾಸಲು ಸೋಮವಾರ ಜಲಾಶಯಕ್ಕೆ ಭೇಟಿ ನೀಡಿದರು.

ಬಳಿಕ ಮಾಧ್ಯಮದವರ ಜೊತೆ ಮಾತನಾಡಿ, 'ನವಲಿ ಸೇರಿದಂತೆ ತುಂಗಭದ್ರಾ ಜಲಾಶಯಕ್ಕೆ ಸಮಾನಾಂತರವಾಗಿ ಯಾವುದೇ ಜಲಾಶಯ ನಿರ್ಮಿಸುವುದಿದ್ದರೂ, ಮೂರು ರಾಜ್ಯಗಳ ಹಿತ ಗಮನದಲ್ಲಿಟ್ಟುಕೊಂಡು ಯೋಜನೆ ರೂಪಿಸಬೇಕು' ಎಂದರು.

'ಸಮಾನಾಂತರ ಜಲಾಶಯಗಳನ್ನು ನಿರ್ಮಿಸುವ ಪ್ರಸ್ತಾಪವಿದ್ದು, ಸದ್ಯದ ಅಚ್ಚುಕಟ್ಟು ಪ್ರದೇಶಗಳಿಗೆ ಯೋಜನೆಗಳಿಂದ ಯಾವುದೇ ತೊಂದರೆಯಾಗದಿದ್ದರೆ ಸಹಕಾರ ನೀಡಲಾಗುತ್ತದೆ. 105 ಕಿಲೋಮೀಟರ್‌ಗಳ ಪ್ರವಾಹ ಕಾಲುವೆಯನ್ನು ಕರ್ನಾಟಕ ಸರ್ಕಾರ ನಿರ್ಲಕ್ಷಿಸಿತು' ಎಂದೂ ಅವರು ಇದೇ ವೇಳೆ ಹೇಳಿದರು.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ರಾಮನಗರ ವಿಶೇಷ ವಿಭಾಗ, ರಾಮನಗರ.

ಟೆಂಡರ್ ಪ್ರಕಟಣೆ ಸಂಖ್ಯೆ : 07/2024–25 ದಿನಾಂಕ : 16–08–2024

ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2024–25 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ **05 ಸಂಖ್ಯೆಯ ಅಂದಾಜು ಮೊತ್ತ ರೂ. 250.00 ಲಕ್ಷದಿಂದ 850.00 ಲಕ್ಷಗಳ ಕಾಮಗಾರಿಗಳಿಗೆ** ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 27–08–2024 ರಿಂದ 26–09–2024 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 26–09–2024 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಪೂರ್ವ ಭಾವಿ ಸಭೆಯ ದಿನಾಂಕ : 12–09–2024 ರ ಬೆಳಿಗ್ಗೆ 11.30 ಗಂಟೆಗೆ, 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 27–09–2024 ವೇಳೆ 16.30 ಗಂಟೆ (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ರಾಮನಗರ ವಿಶೇಷ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/246/ಮಣಿಪಾಲ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಬಿಬಿಎಂಪಿ ಕೇಂದ್ರ ಕಚೇರಿ, ನೆಲಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು–560 002.

ಸಂಖ್ಯೆ:ಉಅಸಂ/ಟೆಂಡರ್/03/2024-25 ದಿನಾಂಕ: 19-08-2024

ಟೆಂಡರ್ ಪ್ರಕಟಣೆ: 2ನೇ ಕರೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ https://kppp.karnataka.gov.in

ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಬೃಬೆಂಮಪಾ, ಬೆಂಗಳೂರು ಇವರು ಕೆಳಕಂಡ ಕಾಮಗಾರಿಗಳಿಗೆ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಪ್ಯಾಕೇಜ್ ಟೆಂಡರ್‌ಗಳನ್ನು ಬಿ.ಬಿ.ಎಂ.ಪಿ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ಅರಣ್ಯ/ಎಂಇಎಸ್/ರೈಲ್ವೇಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ವರ್ಗ
1.	ಹಸಿರು ಹೊದಿಕೆಯನ್ನು ಹೆಚ್ಚಿಸಲು ಬೆಂಗಳೂರಿನಾದ್ಯಂತ ಹೊಸ ತೋಟವನ್ನು ಕೈಗೊಳ್ಳಲು ಬಿಬಿಎಂಪಿಯ ಅರಣ್ಯ ಇಲಾಖೆಯಿಂದ ಬಿಬಿಎಂಪಿ ಬಡಾವಣೆಯಲ್ಲಿ ವಿವಿಧ ಸ್ಥಳಗಳಲ್ಲಿ ನರ್ಸರಿಗಳನ್ನು ರಚಿಸುವುದು. (ಇತರೆ). ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: **870.06**. ಇಎಂಡಿ ಮೊತ್ತ (ರೂ. ಗಳಲ್ಲಿ): **13,06,000/-**

ಟೆಂಡರ್‌ನ ಕಾರ್ಯಸೂಚಿ: (1) ಕೆಪಿಪಿ ಪೋರ್ಟಲ್ ನಿಂದ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಪ್ರಾರಂಭದ **ದಿನಾಂಕ: 21.08.2024 ರಿಂದ.** (2) ಆನ್‌ಲೈನ್‌ನಲ್ಲಿ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ ಮತ್ತು ಸಮಯ: 26.08.2024ರ ಸಂಜೆ 3:00 ಗಂಟೆಯವರೆಗೆ.** (3) ಪೂರ್ವ ಬಿಡ್ ಸಭೆಯು **ದಿನಾಂಕ ಮತ್ತು ಸಮಯ : 26.08.2024 ರ ಸಂಜೆ 4:00 ಗಂಟೆಗೆ** ನಡೆಸಲಾಗುವುದು. (4) ಬಿಡ್‌ಗಳನ್ನು ಅಪ್‌ಲೋಡ್ ಮಾಡಲು **ಕೊನೆಯ ದಿನಾಂಕ ಮತ್ತು ಸಮಯ: 31.08.2024ರ ಸಂಜೆ 5:00 ಗಂಟೆಯವರೆಗೆ.** (5) ಆನ್‌ಲೈನ್‌ನಲ್ಲಿ ಟೆಂಡರ್ ತೆರೆಯುವ **ದಿನಾಂಕ ಮತ್ತು ಸಮಯ : 02.09.2024ರ ಸಂಜೆ 4:00 ಗಂಟೆಗೆ.** (6) ಸಂಪರ್ಕಿಸುವ ವಿಳಾಸ: ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಬಿಬಿಎಂಪಿ ಕೇಂದ್ರ ಕಚೇರಿ, ನೆಲಮಹಡಿ, ಅನೆಕ್ಸ್-3 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು-02, ಇ–ಮೇಲ್: **dcfbbmp12@gmail.com.**

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಎನ್.ಆರ್. ಚೌಕ, ಬೃಬೆಂಮಪಾ.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532–225778 & 234747
THESE WORKS ARE GENARAL, SC & ST CONTRACTORS
ಲೋಇ/ರಾವಿ/ತಾಂಶಾ–4/ಟೆಂಪ್ರ/2024–25/1896 ದಿನಾಂಕ:09–08–2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2, 3 & 4)

1) ಕಾಮಗಾರಿ ಹೆಸರು: ರಾಯಚೂರು ಜಿಲ್ಲೆಯ ಒಟ್ಟು 85 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. **2) ಕಾಮಗಾರಿಯ ಮೊತ್ತ:** ಕನಿಷ್ಠ ರೂ. 298271.96, ಗರಿಷ್ಠ ರೂ. 16943767.15 **3) ಮುಂಗಡ ಠೇವಣಿ ಮೊತ್ತ:** ಕನಿಷ್ಠ ರೂ. 3800.00 ಗರಿಷ್ಠ ರೂ. 254200.00 **4) ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 1 (ಒಂದು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು **5) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:**22–08–2024 ಸಂಜೆ 4.00 ಗಂಟೆಯವರೆಗೆ **6) ಟೆಂಡರ್ ತೆರೆಯುವ ದಿನಾಂಕ:**23–08–2024 ಸಂಜೆ 4.30 ಗಂಟೆಯವರೆಗೆ.

ಹೆಚ್ಚಿನ ವಿವರಗಳು ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.
DIP/RCR/230/KSMCA/229/2024-25

ಕರ್ನಾಟಕ ಸರ್ಕಾರ
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15–03–2013
Website : www.kimskoppal.com
email :directorkimskoppal@gmail.com
Office : 08539 225522 Office : 08539-225523

ಸಂ.ಕಿಮ್ಸ್/ಕೊಪ್ಪಳ/ಸರಬರಾಜು/ಮರು–ಟೆಂಡರ್/02&04/2024–25/482
ದಿನಾಂಕ:17/08/2024

ಮರು ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸರಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ.

ಮರು ಟೆಂಡರ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: 01.ಕಿಮ್ಸ್/ಕೊಪ್ಪಳ/ಮರು–ಟೆಂಡರ್/ಎಸ್‌ಸಿಪಿ–ಟಿಎಸ್‌ಪಿ/ಲ್ಯಾಪ್‌ಟಾಪ್,ಪ್ರಿಂಟರ್, ಟ್ಯಾಬ್/02/2024–25. ದಿನಾಂಕ:19.08.2024. **ವಿವರ:** ಕಿಮ್ಸ್ ಕೊಪ್ಪಳ ಸಂಸ್ಥೆಗೆ ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಲ್ಯಾಪ್‌ಟಾಪ್,ಪ್ರಿಂಟರ್, ಟ್ಯಾಬ್‌ಗಳನ್ನು ಖರೀದಿಸುವ ಕುರಿತು. **ಟೆಂಡರ್‌ನ ಅಂದಾಜು ಮೊತ್ತ ರೂ.(ಲಕ್ಷಗಳಲ್ಲಿ):** 101.10. **ಇ.ಎಂ.ಡಿ:** As per KPP Portal

ಟೆಂಡರ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: 02.ಕಿಮ್ಸ್/ಕೊಪ್ಪಳ/ಮರು–ಟೆಂಡರ್/ಎಸ್‌ಸಿಪಿ–ಟಿಎಸ್‌ಪಿ/ಪುಸ್ತಕ/04/2024–25. ದಿನಾಂಕ:19.08.2024. **ವಿವರ:** ಕಿಮ್ಸ್ ಕೊಪ್ಪಳ ಸಂಸ್ಥೆಗೆ ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪುಸ್ತಕಗಳನ್ನು ಖರೀದಿಸುವ ಕುರಿತು. **ಟೆಂಡರ್‌ನ ಅಂದಾಜು ಮೊತ್ತ ರೂ.(ಲಕ್ಷಗಳಲ್ಲಿ):** 51.69. **ಇ.ಎಂ.ಡಿ:** As per KPP Portal

1.ಟೆಂಡರ್‌ಗಳನ್ನು ದಿನಾಂಕ: **20/08/2024** ಬೆಳಿಗ್ಗೆ 11.30 ಗಂಟೆಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2.ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **03/09/2024** ಸಾಯಂಕಾಲ 05:30 ಗಂಟೆ ವರೆಗೆ. 3.ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ : **05/09/2024** ಬೆಳಿಗ್ಗೆ 11:30 ಗಂಟೆಗೆ

ಟಿಪ್ಪಣಿ: ಸದರಿ ಟೆಂಡರ್‌ಗಳಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ **http://kppp.karnataka.gov.in** ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ **www.kimskoppal.kar.nic.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/260/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ – ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಭದ್ರಾವತಿ–577301.
ಸಿ.ಎನ್.ರಸ್ತೆ, ಸೀಗೆಬಾಗಿ, ಭದ್ರಾವತಿ. ದೂರವಾಣಿ: 08282–266443
Email ID : apmcbhadravathi@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ:ಕೃಮಾಇ/ಕೃಉಮಾಸ(ಭ)/ಅಭಿವೃದ್ಧಿ/476/2024–25
ದಿನಾಂಕ:07–08–2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಈ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ರ ನಿಯಮದಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/876/ಇಎಕ್ಸ್‌ಪಿ–12/2017–18 ಬೆಂಗಳೂರು ದಿ: 10–10–2017 ರನ್ವಯ Standard Tender Document - KW-4 ಪ್ರಕಾರ ಈ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಈ–ಪ್ರೋಕ್ಯೂರ್‌ಮೆಂಟ್–ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಪೂರ್ವಭಾವಿ ಸಭೆ ದಿನಾಂಕ: 17–08–2024 @11.00 2. ಟೆಂಡರ್‌ನ್ನು ವೆಬ್‌ಸೈಟಿನ ಮೂಲಕ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 29–08–2024 @16.00 3. ತಾಂತ್ರಿಕ ಬಿಡ್‌ನ್ನು ವೆಬ್‌ಸೈಟ್‌ನಲ್ಲಿ ತೆರೆಯುವ ದಿನಾಂಕ: 05–09–2024 @11.00 4. ಆರ್ಥಿಕ ಬಿಡ್‌ನ್ನು ವೆಬ್‌ಸೈಟ್‌ನಲ್ಲಿ ತೆರೆಯುವ ದಿನಾಂಕ(ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರು): 09–09–2024 @11.00 (ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ) 5. ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಭದ್ರಾವತಿ.

ಕ್ರ.ಸಂ. 1. ಕಾಮಗಾರಿಯ ಹೆಸರು: ಮುಖ್ಯ ಮಾರುಕಟ್ಟೆ ಪ್ರಾಂಗಣ ದಲ್ಲಿರುವ 10 ಸಂಖ್ಯೆ ಅವಳಿ ಮಳಿಗೆ ಕಟ್ಟಡಕ್ಕೆ ಮೇಲ್ಚಾವಣೆಗೆ ಗ್ಯಾಲ್‌ವ್ಯಾಲ್ಯೂಮ್ ಶೀಟ್ ಅಳವಡಿಸುವುದು ಹಾಗೂ ಬಣ್ಣ ಬಳಿಯುವುವ ಕಾಮಗಾರಿ. **ಟೆಂಡರ್ ಮಾದರಿ:** ಐಟಂ ವಾರು ಟೆಂಡರ್ (Kw-4) **ಟೆಂಡರ್ ಮೊತ್ತ (ರೂ.ಗಳಲ್ಲಿ):** 108,55,000=00 **ಇಎಂಡಿ (ರೂ.ಗಳಲ್ಲಿ):** 1,63,000=00 **ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):** 04 ತಿಂಗಳು **ಗುತ್ತಿಗೆದಾರರ ಅರ್ಹತೆ:** ಲೋಕೋಪಯೋಗಿ ಇಲಾಖೆ ನೊಂದಾಯಿತ ಕೆ.ಡಬ್ಲೂ–4 ಅರ್ಹ ಸಿವಿಲ್ ಗುತ್ತಿಗೆದಾರರು **ಟೆಂಡರ್ ಫಾರಂ ಬೆಲೆ:** ಈ–ಗೌರನ್ಸ್ ನಂತೆ

ಟೆಂಡರ್ ಅಪ್ ಲೋಡಿಂಗ್‌ಗೆ ಸಂಬಂಧಿಸಿದಂತೆ ಈ ಪೋರ್ಟಲ್ ಸಹಾಯಕ ದೂರವಾಣಿ 08282–266443 ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗೆ https://kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಾರ್ಯದರ್ಶಿ ಕೃ.ಉ.ಮಾ.ಸ, ಭದ್ರಾವತಿ / ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಂ. 3, ಉಪ ವಿಭಾಗ, ಮಾ.ಅ.ಯೋ, ಶಿವಮೊಗ್ಗ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/– (ಉಷಾರಾಣಿ.ಎಸ್.ಆರ್) ಕಾರ್ಯದರ್ಶಿ ಕೃ.ಉ.ಮಾ.ಸ, ಭದ್ರಾವತಿ
ಸಹಿ/– (ನಾಗರಾಜು ಕೆ.ಆರ್) ಆಡಳಿತಾಧಿಕಾರಿಗಳು ಕೃ.ಉ.ಮಾ.ಸ, ಭದ್ರಾವತಿ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/112/08/510

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ: ಮೈನಪ್ರಾ/ಲೆಶಾ/ನಗದು/ನಿಶ್ಚಿತ ಠೇವಣಿ/4/2024–25 ದಿನಾಂಕ : 17.08.2024

E-Bidding ಪ್ರಕಟಣೆ

ವಿಷಯ: ನಿಶ್ಚಿತ ಠೇವಣಿಗಾಗಿ ಸಾರ್ವಜನಿಕ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಹಾಗೂ ಖಾಸಗಿ ವಲಯದ ಷಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ ಇ–ಟೆಂಡರ್ ಮುಖಾಂತರ ಸ್ಪರ್ಧಾತ್ಮಕ ಬಡ್ಡಿದರ ಕೋರಿ ಪ್ರಕಟಣೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದಿಂದ ರಚಿಸಲ್ಪಟ್ಟ ಸಂಸ್ಥೆಯಾಗಿರುತ್ತದೆ. ಸಂಸ್ಥೆಯಲ್ಲಿ ಅಲ್ಪಾವಧಿಗಾಗಿ ಲಭ್ಯವಿರುವ ಮೊತ್ತವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. FD.91TAR2022 ದಿನಾಂಕ 02.07.2022 ರ ಸುತ್ತೋಲೆಯನ್ವಯ ಪ್ರಾಧಿಕಾರದ ಖಾತೆಯಲ್ಲಿ ಲಭ್ಯವಿರುವ ರೂ. 300.00 ಕೋಟಿಗಳ ನಿಧಿಯನ್ನು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಸೇರಿದಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಶೇ. 60 ರಷ್ಟು ಹಾಗೂ ಶೇ.40 ರಷ್ಟನ್ನು ಖಾಸಗಿ ವಲಯ ಬ್ಯಾಂಕ್‌ಗಳಲ್ಲಿ ಸ್ಪರ್ಧಾತ್ಮಕ ಬಡ್ಡಿದರದಲ್ಲಿ ತಾತ್ಕಾಲಿಕವಾಗಿ ಅಲ್ಪಾವಧಿಯ ನಿಶ್ಚಿತ ಠೇವಣಿಯಾಗಿ ತೊಡಗಿಸಲು ಉದ್ದೇಶಿಸಲಾಗಿದ್ದು, ಠೇವಣಿ ಸ್ವೀಕರಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಹಾಗೂ ಖಾಸಗಿ ವಲಯದ ಷಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಇ–**Portal(www.kppp.Karnataka.gov.in)** ಮುಖಾಂತರ ಆಹ್ವಾನಿಸಲಾಗಿದೆ.

ಅರ್ಹತೆಗಳು:–

1. ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳು ಅನುಕ್ರಮವಾಗಿ ರೂ. 5000 ಕೋಟಿ ರೂ. 1000 ಕೋಟಿ ಹಾಗೂ 5000 ಕೋಟಿ ನಿವ್ವಳ (Net Worth) ಬಂಡಾವಾಳವನ್ನು ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
2. ಸಾರ್ವಜನಿಕ ವಲಯಗಳ ಬ್ಯಾಂಕ್‌ಗಳ ಹಾಗೂ ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳಿಗೆ ಕನಿಷ್ಠ ಶೇ. 12 ಕ್ಕೆ ಕಡಿಮೆ ಇಲ್ಲದಂತೆ ಕ್ಯಾಪಿಟಲ್ ಅಡಿಕ್ವೆಸಿ ರೇಷಿಯೋ ಹೊಂದಿರಬೇಕು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಕನಿಷ್ಠ ಶೇ. 10 ಕ್ಕೆ ಕಡಿಮೆ ಇಲ್ಲದಂತೆ ಕ್ಯಾಪಿಟಲ್ ಅಡಿಕ್ವೆಸಿ ರೇಷಿಯೋ ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
3. ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಹಿಂದಿನ 5 ವರ್ಷಗಳಲ್ಲಿ ಕನಿಷ್ಠ 2 ವರ್ಷಗಳು ಲಾಭದ (Profitablity Track Record) ದಾಖಲೆ ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
4. ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕಳೆದ 3 ವರ್ಷಗಳಲ್ಲಿಯೂ ಲಾಭದ (Profitability Track Record) ದಾಖಲೆ ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
5. ದಿನಾಂಕ: 01.08.2023 ರಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರ ನಿಗಧಿಪಡಿಸಿರುವಂತೆ ನಿವ್ವಳ N.P.A. ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ 2% ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಶೇ. 7.34% ದಾಟಿರಬಾರದು. (N.P.A. ದಿನಾಂಕ: 31.07.2024 ಕ್ಕೆ ಮುಕ್ತಾಯವಾಗಿದ್ದು, ದಿನಾಂಕ: 01.08.2024 ರಿಂದ ಎನ್.ಪಿ.ಎ ಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯಿಂದ ಹೊರಡಿಸುವ ಆದೇಶದಲ್ಲಿನ ಷರತ್ತುಗಳು ಅನ್ವಯಿಸುತ್ತದೆ). (ದೃಢೀಕೃತ ಪ್ರತಿ ಸಲ್ಲಿಸಬೇಕು)
6. ಅವಧಿ ಪೂರ್ವದಲ್ಲಿ ಪ್ರಾಧಿಕಾರ ಅಪೇಕ್ಷಿಸಿದ್ದಲ್ಲಿ ಭಾಗಶ: / ಪೂರ್ಣ ಪ್ರಮಾಣದಲ್ಲಿ ನಿಶ್ಚಿತ ಠೇವಣಿಯನ್ನು ಹಿಂಪಡೆದಲ್ಲಿ ಯಾವುದೇ ದಂಡ ವಿಧಿಸತಕ್ಕದಲ್ಲ (Pre Maturity Penalty). ಅವಧಿ ಪೂರ್ವ ನಿಶ್ಚಿತ ಠೇವಣಿಗಳ ಹಿಂಪಡತಕ್ಕೆ ಸಂಬಂಧಿಸಿದ ಯಾವುದೇ ಕಡಿತಗಳನ್ನು ಮಾಡದಿರುವುದರ ಬಗ್ಗೆ ಒಪ್ಪಿಗೆ ಪತ್ರವನ್ನು ನೀಡಬೇಕು.
7. ಈ ಮೇಲ್ಕಂಡ ವಿವರಗಳನ್ನು ನೀಡಿರುವ "Annexure -1" ರಲ್ಲಿ ದೃಢೀಕರಿಸಿ ಸಲ್ಲಿಸುವುದು.

ಷರತ್ತುಗಳು:

1. ಯಾವುದೇ ಕಾರಣವನ್ನು ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿರುತ್ತದೆ.
2. ಕಾಲಕಾಲಕ್ಕೆ ಕರ್ನಾಟಕ ಸರ್ಕಾರ ಆರ್ಥಿಕ ಇಲಾಖೆಯಿಂದ ಹೊರಡಿಸಲಾಗುವ ಸುತ್ತೋಲೆ/ಆದೇಶ/ ಮಾರ್ಗಸೂಚಿಗಳ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಬ್ಯಾಂಕ್‌ಗಳಿಗೆ ನೀಡಲಾಗುವ ನಿಶ್ಚಿತ ಠೇವಣಿ ಹೂಡಿಕೆಯ ಮೊತ್ತದ ಅನುಪಾತವನ್ನು ನಿರ್ಧರಿಸುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರುತ್ತದೆ.

ಮೇಲಿನ ಅರ್ಹತೆ ಹೊಂದಿರುವ ಬ್ಯಾಂಕುಗಳು ಈ ಕೆಳಗೆ ನಮೂದಿಸಿರುವ ದಿನ/ಅವಧಿಗೆ ನೀಡುವ ಗರಿಷ್ಟ ಬಡ್ಡಿ ದರವನ್ನು ಇ–ಪೋರ್ಟಲ್ http://www.kppp.karnataka.gov.in ಮುಖಾಂತರ **ದಿನಾಂಕ: 17.08.2024 ರಿಂದ 26.08.2024 ರ 16.00 ಗಂಟೆವರೆಗೆ** ಅರ್ಹತೆ ದಾಖಲೆಗಳನ್ನು ಸಲ್ಲಿಸಬಹುದಾಗಿದ್ದು, ತಾಂತ್ರಿಕವಾಗಿ ಅರ್ಹತೆಗೊಳ್ಳುವ ಬಿಡ್ಡುದಾರರು ದಿನಾಂಕ **03.09.2024** ರಂದು ನಡೆಯುವ ನೈಜ ಬಿಡ್‌ನಲ್ಲಿ **ಬೆಳಿಗ್ಗೆ 11.00 ರಿಂದ ಸಂಜೆ 17.00 ಗಂಟೆಯರವರೆಗೆ** ಭಾಗವಹಿಸಬಹುದಾಗಿರುತ್ತದೆ. ಅರ್ಹತೆಯನ್ನು ಕುರಿತಂತೆ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಬ್ಯಾಂಕಿನ ಮೊಹರು ಮತ್ತು ಸಹಿಯೊಂದಿಗೆ Up Load ಮಾಡಬೇಕು.

ಟೆಂಡರ್‌ಗಳು: ಇ–Portal ನಲ್ಲಿ ಮಾತ್ರ ಇರತಕ್ಕದ್ದು.

Period	>= 200 crore
Upto 1 Year	

ಬಡ್ಡಿದರವು ದಿನಾಂಕ: 30.09.2024 ರವರೆಗೆ ಚಾಲ್ತಿಯಲ್ಲಿರಬೇಕು.

ಪ್ರಾಧಿಕಾರದ ಅವಶ್ಯಕತೆ ಹಾಗೂ ಹಿತಾಸಕ್ತಿಯ ಅನುಗುಣವಾಗಿ ಅಥವಾ ಭಾಗಶ: ಠೇವಣಿ ಇರಿಸುವ ಬಗ್ಗೆ ಸಕ್ಷಮ ಪ್ರಾಧಿಕಾರವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ. ಈ ಸಂಬಂಧ ಯಾವುದೇ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿರುವ ಸಮಯದಲ್ಲಿ ಅಥವಾ ಇ-Bidding ನಲ್ಲಿ ಯಾವುದಾದರು ಬದಲಾವಣೆ ಇದ್ದಲ್ಲಿ http://www.kppp.karnataka.gov.in ರಲ್ಲಿ ತಿಳಿಸುವ ಮಾಹಿತಿಯು ಅಂತಿಮವಾಗಿರುತ್ತದೆ.

ಸಹಿ/– ಅಧೀಕ್ಷಕ ಅಭಿಯಂತರರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/KAVITA/428/2024/-25

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 13082024-256320
CG - DL - E -13082024-256320
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 3100] नई दिल्ली, सोमवार, अगस्त 12, 2024 / श्रावण 21, 1946
No. 3100] NEW DELHI, MONDAY, AUGUST 12, 2024 / SHRAVANA 21, 1946

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 12ನೇ ಆಗಸ್ಟ್, 2024

ಎಸ್.ಓ. ನಂ. 3254(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ. 207ರಲ್ಲಿ stretch of land from Km 47.900 to Km 49.280** (ಸರ್ಜಾಪುರ–ದಾಬಸ್‌ಪೇಟೆ ಸೆಕ್ಷನ್) **ರವರೆಗೆ ರಸ್ತೆ ನಿರ್ಮಾಣ, (ಅಗಲೀಕರಣ, ದ್ವಿಪಥ/ನಾಲ್ಕು ಪಥ ಇತ್ಯಾದಿ),** ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–207, ಪಿ.ಡಬ್ಲ್ಯೂ.ಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ.207ರಲ್ಲಿ structures falling within the stretch of land from from Km 47.900 to Km 49.280 (ಸರ್ಜಾಪುರ–ದಾಬಸ್‌ಪೇಟೆ ಸೆಕ್ಷನ್) **ರವರೆಗೆ ರಸ್ತೆ ನಿರ್ಮಾಣ** ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಬೆಂಗಳೂರು ಗ್ರಾಮಾಂತರ

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ.ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು: ಹೊಸಕೋಟೆ					
ಗ್ರಾಮ : ಕೊರಳೂರು					
1	11	ಖಾಸಗಿ	ಖುಷ್ಕಿ	356.18	0.035618
2	12	ಖಾಸಗಿ	ಖುಷ್ಕಿ	143.21	0.014321
3	2	ಖಾಸಗಿ	ಖುಷ್ಕಿ	390.98	0.039098
4	6	ಸರ್ಕಾರಿ	ಖುಷ್ಕಿ	749.09	0.074909
5	88	ಖಾಸಗಿ	ಖುಷ್ಕಿ	23.11	0.002311
6	9	ಖಾಸಗಿ	ಖುಷ್ಕಿ	572.31	0.057231
7	91	ಖಾಸಗಿ	ಬಿಲ್ಟಪ್ ಏರಿಯಾ	37.06	0.003706
8	97	ಖಾಸಗಿ	ಬಿಲ್ಟಪ್ ಏರಿಯಾ	20.87	0.002087
	ಒಟ್ಟು				0.229281

[F.No.RW/NH-12014/KNT(4)LA-17/S&R(B)/3A]
ಅಭಯ್ ಜೈನ್, ನಿರ್ದೇಶಕರು

ಕ್ಷೇಮ ಕುಶಲ

‘ಸ್ಯಾಂಡ್‌ವಿಚ್’ ಮಾತು

ಡಾ. ಕೆ. ಎಸ್. ಶುಭ್ರತಾ

ವಿದ್ವಾಂಸರೇ ಇರುವ ವಾಟ್ಸ್‌ಆ್ಯಪ್ ಗುಂಪದು. ಅಲ್ಲಿ ಒಬ್ಬರು ವರ್ತಮಾನದ ವಿಷಯದ ಬಗ್ಗೆ ಬರೆಹವನ್ನು ಕಳಿಸಿದರು. ಒಬ್ಬರಿಗೆ ಇವರ ಬರೆಹ ಇಷ್ಟವಾಗಲಿಲ್ಲವೇನೋ! ನೇರವಾಗಿ, ‘ನೀವು ಬರೆದದ್ದು ಸರಿಯಾಗಿಲ್ಲ, ಇದು ಹೀಗೆ, ಹಾಗೆ ....’ ಎಂದು ಕಠೋರವಾಗಿ ಮೆಸೇಜ್ ಮಾಡಿದರು. ಗುಂಪಿನ ಇತರ ಸದಸ್ಯರಿಗೂ ಇದು ಸ್ವಲ್ಪ ಜಾಸ್ತಿಯೇ ನಿಷ್ಠುರವಾಗಿದೆ ಎನಿಸಿತು. ಬರೆದ ವ್ಯಕ್ತಿಯಂತೂ ಇದನ್ನು ಅವಮಾನವೆಂದು ಭಾವಿಸಿ ಗುಂಪಿನಿಂದ ಹೊರನಡೆದೇಬಿಟ್ಟರು.

ಪ್ರತಿಕ್ರಿಯಿಸುವವರು ತಮ್ಮ ಅಭಿಪ್ರಾಯ ಹೇಳಿದ್ದೇನೋ ಸರಿ. ಆದರೆ ಹೇಳುವ ರೀತಿಯನ್ನು ಬದಲಿಸಿದರೆ, ಕೇಳುವವರಿಗೆ ಸಹ್ಯವಾಗುತಿತ್ತೇನೋ? ಆದರೆ ಬದಲಿಸುವುದಾದರೂ ಹೇಗೆ?

ಸ್ಯಾಂಡ್‌ವಿಚ್ ವಿಧಾನ

ಬ್ರೆಡ್ ಸ್ಯಾಂಡ್‌ವಿಚ್ ಅನ್ನು ತಿನ್ನದವರಾರು? ಸ್ಯಾಂಡ್‌ವಿಚ್ ಹೇಗಿರುತ್ತದೆ ಎಂದು ಒಮ್ಮೆ ನೆನಪಿಸಿಕೊಳ್ಳಿ. ಮೇಲೆ ಮತ್ತು ಕೆಳಗೆ ಬ್ರೆಡ್ ಸ್ಲೈಸಸ್ ಇದ್ದು, ಮಧ್ಯದಲ್ಲಿ ಚೀಸ್ ಮತ್ತು ವೈವಿಧ್ಯಮಯ ಫಿಲ್ಲಿಂಗ್ ಇರುತ್ತದೆ. ಅಂತೆಯೇ ಪ್ರತಿಕ್ರಿಯಿಸುವಾಗ ಮೊದಲು ಸಕಾರಾತ್ಮಕ ವಿಷಯ, ನಂತರದಲ್ಲಿ ಸರಿಪಡಿಸಬೇಕಾದ ತಪ್ಪುಗಳು ಮತ್ತು ಕಡೆಯಲ್ಲಿ ಮತ್ತೊಂದು ಸಕಾರಾತ್ಮಕ ವಿಷಯವನ್ನು ಹೇಳುವುದೇ ‘ಸ್ಯಾಂಡ್‌ವಿಚ್ ಕ್ರಮ’. ಹೀಗೆ ಹೇಳಿದಾಗ ನಕಾರಾತ್ಮಕ ಟೀಕೆಯೂ ಸಹ್ಯವಾಗುತ್ತದೆ ಎಂದು ಹಲವರ ಅಭಿಪ್ರಾಯ.

ಎಲ್ಲೆಲ್ಲಿ ಬಳಸಬಹುದು?

- ಸಾಮಾನ್ಯವಾಗಿ ಕಾರ್ಪೊರೇಟ್ ಉದ್ಯೋಗಿಗಳಲ್ಲಿ, ನಿಯಮಿತವಾಗಿ, ಅವರ ಸಾಧನೆಯ ಬಗ್ಗೆ ಫೀಡ್‌ಬ್ಯಾಕ್ ನೀಡುವಾಗ ಈ ವಿಧಾನವನ್ನು ಬಳಸುತ್ತಾರೆ. ವ್ಯಕ್ತಿಯು ನಕಾರಾತ್ಮಕ ಟೀಕೆಯಿಂದ ಗಾಸಿಗೊಳ್ಳದೆ, ಮುಂದೆ ತಿದ್ದಿಕೊಂಡು ಚೆನ್ನಾಗಿ ಕೆಲಸ ಮಾಡಲಿ ಎಂಬ ಉದ್ದೇಶ.
- ವೃತ್ತಿಪರ ಕಾಲೇಜುಗಳಲ್ಲಿ ಉದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳು/ ಸೆಮಿನಾರ್‌ಗಳನ್ನು ಮಾಡುವಾಗ ಈ ವಿಧಾನವನ್ನು ಅನುಸರಿಸಬಹುದು.
- ಒಂದು ಸಹೃದಯಿಯಾಗಿ /ಸಭಿಕನಾಗಿ, ಸೆಮಿನಾರ್/ ಸಂವಾದಗಳಲ್ಲಿ ಭಾಗವಹಿಸಿ, ಅಭಿಪ್ರಾಯ ವ್ಯಕ್ತಪಡಿಸುವಾಗ ಕೂಡ ಈ ವಿಧಾನವನ್ನು ಬಳಸಬಹುದು.
- ದಿನನಿತ್ಯದ ಜೀವನದಲ್ಲಿ ಕುಟುಂಬದವರಿಗೆ /ಸಂಬಂಧಿಕರಿಗೆ, ಸ್ನೇಹಿತರಿಗೆ ಅವರಿಗೆ ಇಷ್ಟವಿಲ್ಲದ್ದು ಹೇಳುವಾಗ ಈ ಮಾದರಿ ಉಪಯೋಗವಾಗಬಹುದು.
- ವ್ಯಾಪಾರಿಗಳು ಈ ವಿಧಾನವನ್ನು ಬಳಸಿ, ಗ್ರಾಹಕರನ್ನು ಸೆಳೆದುಕೊಳ್ಳಲು ಕಲಿತಿರುತ್ತಾರೆ, ತಮ್ಮ ಸಿಬ್ಬಂದಿಗಳಿಗೂ ಕಲಿಸಿರುತ್ತಾರೆ.

ಶಾಲಿನಿ ಮೂವತ್ತೈದು ವರ್ಷದ ವೈದ್ಯೆ. ಸುಮಾರು 18 ವರ್ಷಗಳ ನಂತರ, ಅವಳ ಸೀನಿಯರ್ ಪ್ರೊಫೆಸರ್ ಒಬ್ಬರನ್ನು ಭೇಟಿಯಾದಳು. ಶಾಲಿನಿ ಈಗ ಸಾಕಷ್ಟು ಬದಲಾವಣೆಯಾಗಿದ್ದಳು. ಚೆನ್ನಾಗಿ ವರ್ಕೌಟ್ ಮಾಡಿ, ಆರೋಗ್ಯಕರ ಆಹಾರ ತಿಂದು ತೆಳ್ಳಗಾಗಿದ್ದಳು. ಆ ಪ್ರೊಫೆಸರ್ ಇವಳನ್ನು ನೋಡಿದ್ದೇ ಅಚ್ಚರಿಯಾದರು. ಅವರು, ಇವಳ ಕೆನ್ನೆಗಳಲ್ಲಿ ಬೇಬಿ ಫ್ಯಾಟ್ ಇದ್ದಿದ್ದನ್ನು ಯಾವಾಗಲೂ ಮೆಚ್ಚುತ್ತಿದ್ದರು. ಅಚ್ಚರಿಯಾದರೂ, ಅವರು ಇವಳ ಹತ್ತಿರ ಅದನ್ನು ವ್ಯಕ್ತಪಡಿಸಿದ ರೀತಿ, ಶಾಲಿನಿಗೆ ನೋವಾಗಲಿಲ್ಲ. ‘ಶಾಲಿನಿ, ನನಗೆ ಗುರುತು ಸಿಗಲಿಲ್ಲ. ಆಗಿನ ಹಾಗೇ ಈಗಲೂ ಕಾಣುತ್ತಿದ್ದೀಯೆ. ಆದರೂ ನನಗೆ ನಿನ್ನ ಮುಗ್ಧವಾದ ಆ ಬೇಬಿ ಫ್ಯಾಟ್ ಇದ್ದ ಮುಖ ತುಂಬಾ ಇಷ್ಟವಾಗಿತ್ತು. ಹೇಗಿದ್ದರೂ ಸುಂದರವಾಗಿಯೇ ಕಾಣಿಸುತ್ತಿದ್ದೀಯೆ’ ಎಂದರು. ಅವರು ಪ್ರತಿಕ್ರಿಯಿಸಿದ ರೀತಿಯಿಂದ ಶಾಲಿನಿಗೆ ಕಸಿವಿಸಿ ಆಗದೆ, ಅವರ ಬಗೆಗಿನ ಗೌರವ ಹೆಚ್ಚಾಯಿತು.

ಸಮಸ್ಯೆಗಳು

ಇಷ್ಟಾಗಿಯೂ ಫೀಡ್‌ಬ್ಯಾಕ್ ಕೊಡುವಾಗಿನ ಸ್ಯಾಂಡ್‌ವಿಚ್ ವಿಧಾನದ ಬಗ್ಗೆ ಟೀಕಿಸುವವರೂ ಇದ್ದಾರೆ. ಪ್ರಾಯಶಃ ಹೀಗೆ ಹೇಳಿದಾಗ, ನಾವು ಸರಿಪಡಿಸಬೇಕೆಂಬ ತಪ್ಪು, ಆಚೆಯವರಿಗೆ ಸರಿಯಾಗಿ ತಿಳಿಯುವುದೇ ಇಲ್ಲ ಎಂಬುದು ಅವರ ಆಕ್ಷೇಪ. ಅಂದರೆ ಎರಡು ಬ್ರೆಡ್ ಸ್ಲೈಸ್‌ಗಳ ಮಧ್ಯದ ಚೀಸ್ ರುಚಿಗೇ ಸಿಗದೇ, ಕೇವಲ ಬ್ರೆಡ್ ತಿಂದಂತೆ ಆಗುತ್ತದೆ ಎನ್ನಬಹುದು. ಮತ್ತೊಂದು ಸಮಸ್ಯೆ ಎಂದರೆ ಒಳ್ಳೆಯದನ್ನು ಹೇಳಲೇಬೇಕು ಎಂಬ ದೃಷ್ಟಿಯಿಂದ ಹೇಳಲು ಹೋದರೆ, ಒಳ್ಳೆಯದನ್ನು ಕಲ್ಪಿಸಿಕೊಂಡು ಹೇಳಬೇಕಾಗುತ್ತದೆ. ಆಗ ಆ ವ್ಯಕ್ತಿಯಲ್ಲಿ ಇತರರಿಗೆ ನಂಬಿಕೆಯೇ ಹೋದಂತಾಗುತ್ತದೆ. ಅವರ ವಿಮರ್ಶೆಗೆ ಬೆಲೆಯೇ ಇಲ್ಲದಂತಾಗಬಹುದು.

ಜನರು ದೊಡ್ಡ ಕಂಪನಿಯ ತಂಡಗಳ ನಾಯಕರಾಗಿ ತಮ್ಮ ತಂಡದ ಸದಸ್ಯರಿಗೆ ಫೀಡ್‌ಬ್ಯಾಕ್ ಕೊಡುವಾಗ, ಈ ಸ್ಯಾಂಡ್‌ವಿಚ್ ವಿಧಾನವನ್ನು ಬಳಸುತ್ತಾರೋ ಇಲ್ಲವೋ, ಆ ಕಂಪನಿಯ ನಿಯಮಗಳಿಗೆ ಬಿಟ್ಟಿದ್ದು. ಆದರೆ ಸಮಾಜದಲ್ಲಿ ಸ್ನೇಹಿತರೊಂದಿಗೆ, ಸಂಬಂಧಿಕರೊಂದಿಗೆ ಮಾತನಾಡುವಾಗ, ಸಾಮಾಜಿಕ ಜಾಲತಾಣಗಳಲ್ಲಿ ‘ಕಮೆಂಟು’ಗಳನ್ನು ಹಾಕುವಾಗ, ತುಂಬಿದ ಸಭೆಯಲ್ಲಿ ನಮ್ಮ ಅಭಿಪ್ರಾಯವನ್ನು ದಾಖಲಿಸುವಾಗ ನಾವು ಈ ವಿಧಾನಗಳನ್ನು ಬಳಸಿದರೆ ಖಂಡಿತ ಇತರರೊಂದಿಗಿನ ನಮ್ಮ ಬಾಂಧವ್ಯ ಹೆಚ್ಚುತ್ತದೆ. ಎಷ್ಟೋ ಮನಸ್ತಾಪಗಳನ್ನೂ ಈ ವಿಧಾನದಿಂದ ತಡೆಯಬಹುದು. ಯಾರಾದಾರೂ ನಿಮ್ಮನ್ನು ತಮ್ಮ ಕೆಲಸ ಅಥವಾ ಕಾರ್ಯಕ್ರಮಗಳ ಬಗ್ಗೆ ಅಭಿಪ್ರಾಯ ಕೇಳಿದರೆ ಆಗ ‘ಸ್ಯಾಂಡ್‌ವಿಚ್’ ಅನ್ನು ನೆನಪಿಸಿಕೊಳ್ಳುವಿರಿ ತಾನೇ?

❖

ಎಂ–ಪಾಕ್ಸ್ ಆತಂಕ ಬೇಕಿಲ್ಲ

ಡಾ. ಕಿರಣ್ ವಿ. ಎಸ್.

‘ಮಂಕಿ–ಪಾಕ್ಸ್’ (monkeypox) ಬಗ್ಗೆ ಈಗ ಆತಂಕ ಆರಂಭವಾಗಿದೆ. ಹಲವಾರು ದೇಶಗಳಲ್ಲಿ ಕಂಡಿರುವ ಈ ಕಾಯಿಲೆ ಪ್ರಪಂಚದ ಎಲ್ಲೆಡೆ ಹರಡಿ ಮತ್ತೊಂದು ಜಾಗತಿಕ ವಿಪತ್ತಿಗೆ ಕಾರಣವಾಗುತ್ತದೆಯೇ ಎನ್ನುವ ಭೀತಿ ಹಲವರದ್ದು. ‘ಸಿಡುಬು’ ಎನ್ನುವುದು ವೈರಸ್ ಕಾಯಿಲೆ. ಸೀತಾಳೆ ಸಿಡುಬು (ಚಿಕನ್ ಪಾಕ್ಸ್) ನಾವೆಲ್ಲರೂ ಬಲ್ಲ ಒಂದು ಪ್ರಕಾರ. ಯಾವುದೇ ಸಿಡುಬಿನ ವೈರಸ್ ಒಬ್ಬರಿಂದೊಬ್ಬರಿಗೆ ಸಾಂಕ್ರಾಮಿಕವಾಗಿ ಹರಡುತ್ತದೆ. ಅಂದರೆ, ಸಿಡುಬಿನ ರೋಗಿಯ ಸಂಪರ್ಕಕ್ಕೆ ಬಂದ ನಿರೋಗಿ ವ್ಯಕ್ತಿಯ ಶರೀರದಲ್ಲಿ ವೈರಸ್ ಪ್ರವೇಶಿಸಿದರೆ, ಅಂತಹವರಿಗೂ ಸೋಂಕು ತಗುಲುತ್ತದೆ. ‘ಮಂಕಿ–ಪಾಕ್ಸ್’ ಕಾಯಿಲೆಗೂ ಎರಡು ಪ್ರಭೇದಗಳ ವೈರಸ್ ಕಾರಣವಾಗಿವೆ. ‘ಮಂಕಿ–ಪಾಕ್ಸ್’ ರೋಗಿಯ ಶ್ವಾಸ ಸ್ರವಿಕೆಗಳಿಂದ ಎದುರಿನವರಿಗೆ, ಚರ್ಮದಿಂದ ಚರ್ಮಕ್ಕೆ, ಬಾಯಿಂದ ಚರ್ಮಕ್ಕೆ, ಹಾಗೂ ಲೈಂಗಿಕ ಸಂಪರ್ಕದಿಂದ ಹರಡುತ್ತದೆ. ಇದೇ ಅಲ್ಲದೆ, ‘ಮಂಕಿ–ಪಾಕ್ಸ್’ ರೋಗಿಯ ಸ್ರವಿಕೆಗಳು ವಸ್ತುಗಳ ಅಥವಾ ಬಟ್ಟೆಗಳ ಮೂಲಕ ಮತ್ತೊಬ್ಬರ ಸಂಪರ್ಕಕ್ಕೆ ಬಂದರೂ ರೋಗ ಹರಡುವ ಸಾಧ್ಯತೆಗಳು ಇರುತ್ತವೆ. ‘ಮಂಕಿ–ಪಾಕ್ಸ್’ ಕೆಲವು ಪ್ರಾಣಿಗಳ ಮೂಲಕ ಕೂಡ ಹರಡಬಹುದು ಎನ್ನುವ ಸಂಶಯವಿದೆ. ಪ್ರಸ್ತುತ ಹಲವಾರು ದೇಶಗಳಲ್ಲಿ ಕಾಣುತ್ತಿರುವ ‘ಮಂಕಿ–ಪಾಕ್ಸ್’ ಕಾಯಿಲೆಯನ್ನು ವಿಶ್ವ ಆರೋಗ್ಯ ಸಂಸ್ಥೆ ‘ಎಂ–ಪಾಕ್ಸ್’ (mpox) ಎಂದೂ ಕರೆದಿದೆ. ಇದು ಸಿಡುಬಿನ ಒಂದು ವಿಧ. ಯಾವುದೇ ವೈರಸ್ ಕಾಯಿಲೆಯಲ್ಲಿ ಕಾಣಬಹುದಾದ ಜ್ವರ, ಮೈ-ಕೈ ನೋವು, ತಲೆನೋವು, ಸುಸ್ತು, ‘ಮಂಕಿ–ಪಾಕ್ಸ್’ನಲ್ಲೂ ಕಾಣುತ್ತವೆ. ಈ ಹಂತದಲ್ಲಿ ಇದು ಯಾವ ವೈರಸ್ ಸೋಂಕು ಎಂದು ತಿಳಿಯಲು ಸಾಧ್ಯವಿಲ್ಲ. ಇದು ಮುಂದುವರೆದು ಅಂಗೈ ಮತ್ತು ಪಾದಗಳೂ ಸೇರಿದಂತೆ ಚರ್ಮದ ಮೇಲೆ ಬೊಬ್ಬೆಗಳು, ವ್ರಣಗಳು ಉಂಟಾಗುತ್ತವೆ. ಈ ವ್ರಣಗಳು ಲೋಳೆಪದರಕ್ಕೂ ಹರಡಬಹುದು. ನರಗಳ ಸಂವೇದನೆ ಹೆಚ್ಚಾಗಿರುವ ಭಾಗಗಳಲ್ಲಿ ಇವು ವಿಪರೀತ ನೋವು, ಉರಿಗಳಿಗೆ ಕಾರಣವಾಗುತ್ತವೆ. ಈ ವ್ರಣಗಳ ಸಂಖ್ಯೆ ಒಂದೆರಡರಿಂದ ಹಿಡಿದು ನೂರಾರು ಇರಬಹುದು. ಎಲ್ಲಿಯವರೆಗೆ ಈ ವ್ರಣಗಳು ಚರ್ಮಕ್ಕೆ ಮಾತ್ರ ಸೀಮಿತವಾಗಿರುತ್ತವೋ, ಅಲ್ಲಿಯವರೆಗೆ ಪ್ರಾಣಾಪಾಯ ಕಡಿಮೆ. ಈ ಹಂತದಲ್ಲಿ ಚಿಕಿತ್ಸೆಯೂ ಸುಲಭ ಮತ್ತು ಪರಿಣಾಮಕಾರಿ. ಆದರೆ, ಒಮ್ಮೆ ಸೋಂಕು ಚರ್ಮದ ಮಟ್ಟವನ್ನು ಮೀರಿ ಸಿಡುಬಿನ ವ್ರಣಗಳು ಲೋಳೆಪದರಗಳಿಗೆ ಹರಡಿದರೆ, ಕಾಯಿಲೆ ಹೆಚ್ಚುತ್ತಿರುವ ಸೂಚನೆ ಎನ್ನಬಹುದು.

ಈ ಹಂತದಲ್ಲಿ ರೋಗಿಯ ಆರೋಗ್ಯದ ಬಗ್ಗೆ ನಿಗಾ ಇರಬೇಕಾಗುತ್ತದೆ. ಸಿಡುಬಿನ ವ್ರಣಗಳು ಈ ಹಂತದಿಂದ ಮುಂದುವರೆದು ಒಳಗಿನ ಅಂಗಗಳನ್ನು ಪ್ರವೇಶಿಸಿದರೆ, ಕಾಯಿಲೆ ತೀವ್ರ ಸ್ವರೂಪ ಪಡೆದುಕೊಂಡಂತೆ. ಆಗ ಆಸ್ಪತ್ರೆ ಚಿಕಿತ್ಸೆಯ ಅಗತ್ಯ ಬರುತ್ತದೆ. ಈ ಹಂತದಲ್ಲಿ ಶರೀರದ ರಕ್ಷಕ ವ್ಯವಸ್ಥೆಯ ಸಾಮರ್ಥ್ಯ ಕುಗ್ಗಿ, ಹಲವಾರು ಸಮಯಸಾಧಕ ಬ್ಯಾಕ್ಟೀರಿಯಾ

ಮತ್ತು ಫಂಗಸ್ ಸೋಂಕುಗಳೂ ಜೊತೆಗೂಡುತ್ತವೆ. ಮಿದುಳು, ಹೃದಯ, ಶ್ವಾಸಕೋಶಗಳು, ಮತ್ತು ಕಣ್ಣುಗಳನ್ನು ‘ಮಂಕಿ–ಪಾಕ್ಸ್’ ಹೆಚ್ಚು ಬಾಧಿಸುತ್ತದೆ. ರಕ್ಷಕ ವ್ಯವಸ್ಥೆಯ ಸಾಮರ್ಥ್ಯ ಕಡಿಮೆ ಇರುವ ನವಜಾತಶಿಶುಗಳು, ಗರ್ಭಿಣಿಯರು, ಮಧುಮೇಹಿಗಳು, ಯಾವುದಾದರೂ ಚಿಕಿತ್ಸೆಯ ಅಂಗವಾಗಿ ಸ್ಟೀರಾಯ್ಡ್ ಔಷಧ ಸೇವಿಸುವವರು, ಅಂಗ-ಕಸಿಯ ಕಾರಣದಿಂದ ರಕ್ಷಕ ವ್ಯವಸ್ಥೆಯ ಶಕ್ತಿಯನ್ನು ಕುಗ್ಗಿಸುವ ಔಷಧ ಪಡೆಯುವವರು, ಎಚ್.ಐ.ವಿ. ಪೀಡಿತರು ಮೊದಲಾದವರಿಗೆ ‘ಮಂಕಿ–ಪಾಕ್ಸ್’ ಉಲ್ಬಣಿಸುವ ಸಾಧ್ಯತೆಗಳು ಹೆಚ್ಚು. ಶರೀರದಲ್ಲಿ ರೋಗನಿರೋಧ ಶಕ್ತಿ ಚೆನ್ನಾಗಿರುವವರಲ್ಲಿ ‘ಮಂಕಿ–ಪಾಕ್ಸ್’ ಪ್ರಾಣಾಪಾಯವಾಗುವುದು ಅಪರೂಪ. ಇಂತಹವರಲ್ಲಿ ಒಂದೆರಡು ವಾರ ರೋಗಲಕ್ಷಣಗಳು ಕಾಡಬಹುದು. ಚರ್ಮದ ಮೇಲಿನ ಕೊನೆಯ ವ್ರಣ ಚೆನ್ನಾಗಿ ಮಾಗಿ, ಕಪ್ಪು ಹಕ್ಕಳೆ (scab) ಕಟ್ಟಿ, ಅದರ ಅಡಿ ಹೊಸದಾದ ರೋಗರಹಿತ ಚರ್ಮ ಬಂದು, ಹಕ್ಕಳೆ ಬಿದ್ದುಹೋಗುವವರೆಗೆ ‘ಮಂಕಿ–ಪಾಕ್ಸ್’ ಮತ್ತೊಬ್ಬರಿಗೆ ಹರಡಬಹುದು ಎಂಬ ಅರಿವು ಇರಬೇಕು. ಅಲ್ಲಿಯವರೆಗೆ ರೋಗಿಗಳು ಇತರರ ಸಂಪರ್ಕಕ್ಕೆ ಬಾರದಂತೆ ಎಚ್ಚರ ವಹಿಸಬೇಕಾಗುತ್ತದೆ.

ಸರಳ ಆಹಾರ, ಸಾಕಷ್ಟು ನೀರು, ನೋವು ನಿವಾರಕ ಔಷಧಗಳು, ಸಿಡುಬು ಯಾವ ರೀತಿ ಮುಂದುವರೆಯುತ್ತಿದೆ ಎಂಬ ಎಚ್ಚರ, ಬೇರೆ ಯಾವುದಾದರೂ ಅನಿರೀಕ್ಷಿತ ರೋಗಲಕ್ಷಣಗಳು ಕಂಡರೆ ವೈದ್ಯರಿಗೆ ತಿಳಿಸುವುದು, ಮೊದಲಾದ ಸರಳ ಚಿಕಿತ್ಸೆ ಸಾಕಾಗುತ್ತದೆ. ‘ಮಂಕಿ–ಪಾಕ್ಸ್’ ಈ ಹಂತವನ್ನು ದಾಟಿದರೆ ಮಾತ್ರ ಚಿಕಿತ್ಸೆಯನ್ನು ಆಯಾ ಮಟ್ಟಕ್ಕೆ ಏರಿಸಬೇಕಾಗುತ್ತದೆ.

ಕೋವಿಡ್-19 ಕಾಲದಲ್ಲಿ ಕಲಿತ ವೈಯಕ್ತಿಕ ಶುಚಿ ಮತ್ತು ಶಿಸ್ತಿನ ಅಂಶಗಳು ಬಹುತೇಕ ವೈರಸ್ ಕಾಯಿಲೆಗಳಲ್ಲಿ ನೆರವಾಗುತ್ತವೆ. ಪರಸ್ಪರ ಅಂತರ, ಕೈಗಳ ಸ್ವಚ್ಛತೆ, ವೈಯಕ್ತಿಕ ಶಿಸ್ತು, ರೋಗಿಯ ಸ್ರವಿಕೆಗಳನ್ನು ಹೊಂದಿರಬಹುದಾದ ವಸ್ತುಗಳನ್ನು ಮತ್ತೊಬ್ಬರು ಬಳಸದಿರುವುದು, ಇತರರೊಡನೆ ಅನಗತ್ಯವಾಗಿ ಸಾಮೀಪ್ಯಕ್ಕೆ ಬಾರದಂತೆ ಇರುವಿಕೆ, ಮೊದಲಾದ ಜೀವನಶೈಲಿಯನ್ನು ಪಾಲಿಸುವುದು ಸೂಕ್ತ. ಇದನ್ನು ಮೀರಿಯೂ ರೋಗಲಕ್ಷಣಗಳು ಕಂಡುಬಂದರೆ ಧೃತಿಗೆಡಬೇಕಾಗಿಲ್ಲ. ಬಹುತೇಕ ಪ್ರಸಂಗಗಳಲ್ಲಿ ಕುಟುಂಬವೈದ್ಯರು ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ನೆರವಾಗುತ್ತಾರೆ.

‘ಮಂಕಿ–ಪಾಕ್ಸ್’ ತೀವ್ರವಾಗಿರುವ ರೋಗಿಗಳಲ್ಲಿ ವೈರಸ್-ನಿರೋಧಕ ಔಷಧ ಲಭ್ಯವಿದೆ. ಆದರೆ ಸದ್ಯಕ್ಕೆ ಈ ಔಷಧವನ್ನು ಕೇವಲ ತೀವ್ರ ಸ್ವರೂಪದ ಕಾಯಿಲೆಯಲ್ಲಿ ಮಾತ್ರ ಬಳಸಬೇಕು. ಇಲ್ಲವಾದರೆ ಅದರ ಪರಿಣಾಮ ಕುಂಠಿತವಾಗುವ ಸಾಧತೆಗಳು ಇರುತ್ತವೆ. ‘ಮಂಕಿ–ಪಾಕ್ಸ್’ ಬಾರದಂತೆ ತಡೆಯಲು ಮೂರು ಬಗೆಯ ಲಸಿಕೆಗಳನ್ನೂ ಈಗಾಗಲೇ ಅಭಿವೃದ್ಧಿಗೊಳಿಸಲಾಗಿದೆ. ಆದರೆ ಸದ್ಯಕ್ಕೆ ಇದರ ಬಳಕೆ ವ್ಯಾಪಕವಾಗಿ ಬೇಕಾಗಿಲ್ಲ.

ಪ್ರಸ್ತುತ ‘ಮಂಕಿ–ಪಾಕ್ಸ್’ ಜಾಗತಿಕ ವಿಪತ್ತಾಗುತ್ತದೆ ಎನ್ನುವ ಊಹಾಪೋಹಗಳಿಗೆ ಯಾವುದೇ ಬಲವಾದ ಆಧಾರಗಳಿಲ್ಲ. ಜೊತೆಗೆ, ಕೋವಿಡ್-19 ನಮಗೆ ಜಾಗತಿಕ ವಿಪತ್ತನ್ನು ಹೇಗೆ ಎದುರಿಸಬೇಕು ಎನ್ನುವ ಅನುಭವವನ್ನು ನೀಡಿದೆ. ಹೀಗಾಗಿ ‘ಮಂಕಿ–ಪಾಕ್ಸ್’ ಬಗ್ಗೆ ಆತಂಕ ಬೇಕಿಲ್ಲ. ಇಷ್ಟಾದರೂ ನಮ್ಮ ಎಚ್ಚರ ನಮಗೆ ಇರಲೇಬೇಕು. ಆರೋಗ್ಯಕರ ಜೀವನಶೈಲಿಯ ಪಾಲನೆ, ಸೋಂಕು ಬಾರದಂತೆ ಪಾಲಿಸಬೇಕಾದ ವೈಯಕ್ತಿಕ ಶಿಸ್ತುಗಳನ್ನು ಎಂದಿಗೂ ಮರೆಯಬಾರದು. ಅದೊಂದರ ಪಾಲನೆಯಿಂದಲೇ ಬಹುತೇಕ ಸಾಂಕ್ರಾಮಿಕ ರೋಗಗಳನ್ನು ವ್ಯಾಪಕವಾಗದಂತೆ ಮಣಿಸಬಹುದು.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ – 5.3

14) 0 ಮತ್ತು 50ರ ನಡುವಿನ ಬೆಸ ಸಂಖ್ಯೆಗಳ ಮೊತ್ತವೇನು?

ಪರಿಹಾರ: 0 ಮತ್ತು 50 ರ ನಡುವಿನ ಬೆಸ ಸಂಖ್ಯೆಗಳು 1, 3, 5, 7....49

ಇಲ್ಲಿ

$\Rightarrow a_2 - a_1 = 3 - 1 = 2$

$\Rightarrow a_3 - a_2 = 5 - 3 = 2$

$\Rightarrow a_4 - a_3 = 7 - 5 = 2$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 2$ ಹೊಂದಿದ್ದು, ಸಮಾಂತರ ಶ್ರೇಢಿಗೆ ಸೇರಿದೆ.

ಇಲ್ಲಿ

$a = 1 \quad d = 2 \quad l = 49$

$l = a + (n-1)d$

$49 = 1 + (n-1)2$

$49 - 1 = (n-1)2$

$(n-1)2 = 48$

$n - 1 = 48/2$

$n - 1 = 24$

$n = 24 + 1$

$n = 25$

: 0 ಮತ್ತು 50 ರ ನಡುವಿನ ಒಟ್ಟು ಬೆಸ ಸಂಖ್ಯೆಗಳು 25

∴ 0 ಮತ್ತು 50 ರ ನಡುವಿನ ಬೆಸ ಸಂಖ್ಯೆಗಳ ಮೊತ್ತ = S_{25}

$$S_n = \frac{n}{2}(a + l)$$

$$= \frac{25}{2}(1 + 49)$$

$$= \frac{25}{2}(50)$$

$$= 25(25)$$

$$= 625$$

****

ವಾಸ್ತವ ಸಂಖ್ಯೆಗಳು

ಯೂಕ್ಲಿಡ್‌ನ ಭಾಗಾಕಾರ ಅನುಪ್ರಮೇಯ: ದತ್ತ ಧನ ಪೂರ್ಣಾಂಕಗಳಾದ a ಮತ್ತು b ಗಳಿಗೆ, a=bq+r ಗೆ ಸರಿಹೊಂದುವಂತೆ q ಮತ್ತು r ಎಂಬ ಎರಡು ಅನನ್ಯ ಪೂರ್ಣಾಂಕಗಳಿರುತ್ತವೆ ಮತ್ತು ಇಲ್ಲಿ $0 \le r < b$ ಆಗಿರುತ್ತದೆ

‘ಯೂಕ್ಲಿಡ್‌ನ ಭಾಗಾಕಾರ ಕ್ರಮ ವಿಧಿಯನ್ನು ಸ್ಪಷ್ಟವಾಗಿ ನಿರೂಪಿಸುವುದು. $c > d$ ಆಗಿರುವಂತಹ c ಮತ್ತು d ಎಂಬ ಎರಡು ಧನ ಪೂರ್ಣಾಂಕಗಳ ಮ.ಸಾ.ಅ.ವನ್ನು ಕಂಡುಹಿಡಿಯಲು ನಾವು ಕೆಳಗಿನ ಹಂತಗಳನ್ನು ಅನುಸರಿಸುತ್ತೇವೆ.

ಹಂತ 1: ಯೂಕ್ಲಿಡ್‌ನ ಭಾಗಾಕಾರ ಅನುಪ್ರಮೇಯವನ್ನು c ಮತ್ತು d ಗಳಿಗೆ ಅನ್ವಯಿಸಿದಾಗ, c= dq+r ಆಗುವಂತೆ q ಮತ್ತು r ಎಂಬ ಎರಡು ಪೂರ್ಣ ಸಂಖ್ಯೆಗಳನ್ನು ನಾವು ಪಡೆಯುತ್ತೇವೆ.

ಇಲ್ಲಿ $0 \le r < d$ ಆಗಿರುತ್ತದೆ.

ಹಂತ 2: $r = 0$ ಆದರೆ, dಯು c ಮತ್ತು dಗಳ ಮ.ಸಾ.ಅ. ಆಗಿರುತ್ತದೆ. $r \neq 0$ ಆದರೆ, ಭಾಗಾಕಾರ ಅನುಪ್ರಮೇಯವನ್ನು d ಮತ್ತು r ಗಳಿಗೆ ಅನ್ವಯಿಸಿ.

ಹಂತ 3: ಶೇಷವು ಸೊನ್ನೆಯಾಗುವ ತನಕ ಈ ಪ್ರಕ್ರಿಯೆಯನ್ನು ಮುಂದುವರಿಸಿ. ಈ ಹಂತ (ಶೂನ್ಯ ಶೇಷ) ದಲ್ಲಿನ ಭಾಜಕವು ಅಪೇಕ್ಷಿತ ಮ.ಸಾ.ಅ. ಆಗಿರುತ್ತದೆ.

ಇಲ್ಲಿ ಮ.ಸಾ.ಅ (c,d) = ಮ.ಸಾ.ಅ. (d,r) ಆಗಿರುವುದರಿಂದ, ಈ ಕ್ರಮವಿಧಿಯು ಕಾರ್ಯನಿರ್ವಹಿಸುತ್ತದೆ. ಇಲ್ಲಿ ಮ.ಸಾ.ಅ. (c,d) ಎಂಬ ಸಂಕೇತವು c ಮತ್ತು dಗಳ ಮ.ಸಾ.ಅ.ವನ್ನು ಸೂಚಿಸುತ್ತದೆ.

ಅಭ್ಯಾಸ 1.1

1) ಕೆಳಗಿನ ಪ್ರತಿ ಸಂಖ್ಯೆಯ ಆದರ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿಯಿರಿ

(1) 140 (2)156 (3)3825 (4)5005 (5)7429

ಉತ್ತರ:–

1) 140 =

2|140
2|70
5|35
7|7
1

$= 2^2 \times 5 \times 7$

2) 156 =

2|156
2|78
3|39
13|13
1

$= 2^2 \times 3 \times 13$

3) 3825 =

5|3825
5|765
3|153
3|51
17|12
1

$= 3 \times 3 \times 5 \times 5 \times 17$

$= 3^2 \times 5^2 \times 17$

4) 5005 =

5|5005
7|1001
11|143
13|13
1

$= 5 \times 7 \times 11 \times 13$

4) 7429 =

17|7429
19|437
23|23
1

$= 17 \times 19 \times 23$

2) ಕೆಳಗೆ ನೀಡಿರುವ ಜೋಡಿ ಲಸಾಅ ಮತ್ತು ಮಸಾಅ ಕಂಡು ಹಿಡಿದು ಲಸಾಅ x ಮಸಾಅ = ಆ ಎರಡು ಸಂಖ್ಯೆಗಳ ಗುಣಲಬ್ಧ ಎಂಬುದನ್ನು ತಾಳೆ ನೋಡಿ (1) 26 ಮತ್ತು 91 (2) 510 ಮತ್ತು 92 (3) 336 ಮತ್ತು 54 (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

32. Manganin or Eureka is used for making standard resistance coils. Why?

Ans:- Manganin or Eureka has very high resistivity. Therefore, a smaller length of the wire of such a material is required to prepare the coil of given resistance. Also, the variation of resistance of such materials with temperature is very small. That is why they are used for making standard resistance coils.

Kirchoff's Network

1. **What is a network?**

Ans:- An electrical network is a combination of the various circuit elements and sources connected together.

2. **What is a node?**

Ans:- A node in an electrical network is a point at which more than two conductors meet.

3. Define a loop in an electrical network.

Ans:- A loop also called mesh in an electrical network is a closed path for current.

4. Can the Kirchoff's laws be applied to the AC circuits?

Ans:- Yes, Kirchoff's laws can be applied to the AC circuits.

5. What is a wheatstone's network?

Ans:- The wheatstone's network is the arrangement of resistances used for measuring one of them in terms of the other three. The meter bridge is based on this principle.

The condition for the balance of the wheatstone's network is $\frac{P}{Q} = \frac{R}{S}$

6. Why are the metal strips in the meter bridge made thick?

Ans:- The metal strips in the meter bridge are made thick in order to reduce their resistances.

7. How is the meter bridge checked for the proper connections?

Ans:- When the sliding contact is made to touch the bridge wire at the two ends one after the other, the deflections produced in the galvanometer must be in opposite directions – this is the check for the proper connections in the meter bridge.

8. What is the balancing length in the metre bridge when the resistances in the two gaps are equal?

Ans:- When the resistances in the two gaps are equal the balancing length in the metre bridge will be 0.5m.

9. In any experiment with the metre bridge, the resistances in the two gaps should be comparable, why?

Ans:- The resistances in the two gaps is not comparable the value of the balancing length may be too small or too large. As a result measurement of resistance will not be accurate. The error due to non uniformity of the bridge wire will be minimum when the resistances in the two gaps are comparable.

10. Why is the slide wire bridge also called a metre bridge?

Ans:- The slide wire bridge is also called a metre bridge because the length of the wire in it is of one metre.

11. Name the device used for measuring the emf of a cell.

Ans:- Potentiometer.

12. Of which material is potentiometer normally made of?

Ans:- The potentiometer is normally made of alloy like eureka or manganin because they have a high value of resistivity and low value of temperature coefficient of the resistance.

13. Explain the significance of Kirchoff's laws.

Ans:- The ohm's law can be used only to analyse simple electrical circuits. When the circuit contains more than one source emf and the distribution of current in various branches of the circuit is quite complicated, then one is unable to analyse such a circuit by making use of Ohm's law. In such a case, Kirchoff's laws are used to analyse the circuit.

14. State the Kirchoff's I law?

Ans:- Kirchoff's I law called the current law or even junction rule signifies the law of conservation of charges.

It states that – “In any electrical network the algebraic sum of the currents at a node is equal to zero”

That is., $\boxed{\Sigma I = 0}$

15. State the Kirchoff's II law?

Ans:- Kirchoff's II law also called the voltage law or even loop rule signifies the law of conservation of energy.

It states that – “In a current loop of an electrical network the algebraic sum of the emfs is equal to the algebraic sum of the products of current and resistance in different parts of that loop.”

That is., $\boxed{\Sigma E = \Sigma IR}$

16. Explain the significance of Kirchoff's laws.

Ans:- The ohm's law can be used only to analyse simple electrical circuits. When the circuit contains more than one source emf and the distribution of current in various branches of the circuit is quite complicated, then one is unable to analyse such a circuit by making use of Ohm's law. In such a case, Kirchoff's laws are used to analyse the circuit.

ಸಂಕ್ಷಿಪ್ತ ಸುದ್ದಿ

23ರಂದು ಉಕ್ರೇನ್‌ಗೆ ಪ್ರಧಾನಿ ಮೋದಿ ಭೇಟಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ (ಆಗಸ್ಟ್ 23) ಉಕ್ರೇನ್ ಪ್ರವಾಸ ಕೈಗೊಳ್ಳಲಿದ್ದಾರೆ. ಈ ವೇಳೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಭೇಟಿಯಾಗಲಿದ್ದು, ರಷ್ಯಾ–ಉಕ್ರೇನ್ ಬಿಕ್ಕಟ್ಟಿಗೆ ಶಾಂತಿಯುತ ಪರಿಹಾರ ಕಂಡುಕೊಳ್ಳುವ ಕುರಿತು ಚರ್ಚಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತವು ರಾಜತಾಂತ್ರಿಕ ಹಾಗೂ ಮಾತುಕತೆಯ ಮೂಲಕ ರಷ್ಯಾ ಹಾಗೂ ಉಕ್ರೇನ್ ನಡುವಿನ ಬಿಕ್ಕಟ್ಟು ಶಮನಗೊಳಿಸಲು ಸದಾ ಯತ್ನಿಸುತ್ತಿದೆ. ಪ್ರಧಾನಿ ಮೋದಿ ಅವರು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರೊಂದಿಗೆ ಈ ಸಂಬಂಧ ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ತನ್ಮಯ ಲಾಲ್ ಹೇಳಿದ್ದಾರೆ. ಮೋದಿ ಅವರು ರಾಷ್ಟ್ರ ಪೋಲೆಂಡ್‌ಗೆ ಭೇಟಿ ನೀಡಲಿದ್ದಾರೆ.

ನಾಮಪತ್ರ ಸಲ್ಲಿಸಿದ ಸಿಂಘ್ವಿ

ಹೈದರಾಬಾದ್ (ಪಿಟಿಐ): ತೆಲಂಗಾಣ ವಿಧಾನಸಭೆಯಿಂದ ರಾಜ್ಯಸಭೆಯಲ್ಲಿ ಖಾಲಿ ಇರುವ ಒಂದು ಸ್ಥಾನಕ್ಕೆ ನಡೆಯುತ್ತಿರುವ ಉಪಚುನಾವಣೆಗೆ ಖ್ಯಾತ ವಕೀಲ, ಕಾಂಗ್ರೆಸ್ ನಾಯಕ ಅಭಿಷೇಕ್‌ಮನು ಸಿಂಘ್ವಿ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.

ಉಪಚುನಾವಣೆಯು ಸೆಪ್ಟೆಂಬರ್ 3ರಂದು ನಡೆಯಲಿದೆ. ಬಿಆರ್‌ಎಸ್ ಹಾಗೂ ಬಿಜೆಪಿ ಪಕ್ಷವು ಯಾವುದೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೆ ಇರುವುದರಿಂದ ಸಿಂಘ್ವಿ ಅವರು ಅವಿರೋಧವಾಗಿ ಆಯ್ಕೆ ಆಗುವುದು ಬಹುತೇಕ ಖಚಿತವಾಗಿದೆ.

ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ ಮಿಹಿರ್ ಶಾ

ಮುಂಬೈ (ಪಿಟಿಐ): ಬಿಎಂಡಬ್ಲ್ಯು ಹಿಟ್ ಆ್ಯಂಡ್ ರನ್ ಪ್ರಕರಣದ ಪ್ರಮುಖ ಆರೋಪಿ ಮಿಹಿರ್ ಶಾ ಅವರು ತಮ್ಮನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಲಾಗಿದೆ, ತಮ್ಮನ್ನು ತಕ್ಷಣವೇ ಬಂಧಮುಕ್ತಗೊಳಿಸಬೇಕು ಎಂದು ಕೋರಿ ಬಾಂಬೆ ಹೈಕೋರ್ಟ್‌ಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ.

ಶಾ ಅವರು ಬಿಎಂಡಬ್ಲ್ಯು ಕಾರನ್ನು ಮುಂಬೈನ ವರ್ಲಿ ಪ್ರದೇಶದಲ್ಲಿ ದ್ವಿಚಕ್ರ ವಾಹನವೊಂದಕ್ಕೆ ಡಿಕ್ಕಿ ಹೊಡೆದು, ಅದರಲ್ಲಿ ಸಾಗುತ್ತಿದ್ದ ಕಾವೇರಿ ನಖ್ವಾ ಎನ್ನುವವರ ಸಾವಿಗೆ ಕಾರಣರಾದ ಆರೋಪ ಎದುರಿಸುತ್ತಿದ್ದಾರೆ. ಈ ಅಪಘಾತ ಸಂಭವಿಸಿದ ಎರಡು ದಿನಗಳ ನಂತರ ಶಾ ಅವರನ್ನು ಬಂಧಿಸಲಾಗಿದೆ.

ತಮ್ಮನ್ನು ಬಂಧನದಲ್ಲಿ ಇರಿಸಿರುವುದು ಅಕ್ರಮ ಎಂದು ಶಾ ಅವರು ಅರ್ಜಿಯಲ್ಲಿ ಹೇಳಿದ್ದಾರೆ. ಈ ಅರ್ಜಿಯು ಹೈಕೋರ್ಟ್‌ನ ವಿಭಾಗೀಯ ಪೀಠವೊಂದರ ಎದುರು ಬುಧವಾರ ವಿಚಾರಣೆಗೆ ಬರುವ ಸಾಧ್ಯತೆ ಇದೆ. ಅಪಘಾತ ಸಂಭವಿಸಿದಾಗ ಶಾ ಅವರು ಪಾನಮತ್ತರಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

‘ಬಿಜೆಪಿ ಸೇರ್ಪಡೆ: ಚಂಪೈ ನಮ್ಮೊಂದಿಗೆ ಮಾತನಾಡಿಲ್ಲ’

ರಾಂಚಿ (ಪಿಟಿಐ): ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು ಬಿಜೆಪಿ ಸೇರುವ ಬಗ್ಗೆ, ನಮ್ಮೊಂದಿಗೆ ಯಾವುದೇ ಮಾತುಕತೆ ನಡೆಸಿಲ್ಲ ಎಂದು ಜಾರ್ಖಂಡ್‌ನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಾಬುಲಾಲ್ ಮರಾಂಡಿ ತಿಳಿಸಿದರು.

ಬಾಬುಲಾಲ್ ಮರಾಂಡಿ

ಚಂಪೈ ಅನುಭವಿ ರಾಜಕಾರಣಿ. ಪ್ರತ್ಯೇಕ ಜಾರ್ಖಂಡ್ ಚಳವಳಿಯ ಭಾಗವಾಗಿದ್ದ ಅವರು ತಮ್ಮದೇ ಆದ ಮಾರ್ಗವನ್ನು ನಿರ್ಧರಿಸಲಿದ್ದಾರೆ ಎಂದು ಹೇಳಿದರು.

ಬಿಜೆಪಿಗೆ ಸೇರ್ಪಡೆಯಾಗುವ ಊಹಾಪೋಹಗಳ ನಡುವೆಯೇ ಸೊರೇನ್ ಭಾನುವಾರ ಮಧ್ಯಾಹ್ನ ನವದೆಹಲಿಗೆ ತೆರಳಿದ್ದಾರೆ. ಇದಾದ ಬಳಿಕ ‘ಮುಖ್ಯಮಂತ್ರಿಯಾಗಿದ್ದಾಗ ಅಪಮಾನ ಅನುಭವಿಸಿದೆ’ ಎಂದು ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಇದು ಚರ್ಚೆಗೆ ಕಾರಣವಾಗಿತ್ತು.

ಕಾಂಗ್ರೆಸ್ ಶಾಸಕರು ಎನ್‌ಪಿಪಿಗೆ

ಗುವಾಹಟಿ: ಮೇಘಾಲಯದಲ್ಲಿ ಕಾಂಗ್ರೆಸ್‌ನ ಮೂವರು ಶಾಸಕರು ಸೋಮವಾರ ಆಡಳಿತಾರೂಢ ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ಸೇರಿದ್ದಾರೆ. ಇದರಿಂದಾಗಿ ವಿಧಾನಸಭೆಯಲ್ಲಿ ಈಗ ಕಾಂಗ್ರೆಸ್‌ನ ಒಬ್ಬರೇ ಶಾಸಕರು ಇದ್ದಾರೆ. ಮಾವ್ಲಿಯ ಶಾಸಕ ಚಾರ್ಲ್ಸ್ ಮಾರ್ನಗರ್, ನೊಂಗ್‌ಸ್ಟೊಯಿನ್ ಶಾಸಕ ಗ್ಯಾಬ್ರಿಯಲ್ ವಾಲಾಂಗ ಮತ್ತು ಉಮ್ಸಿನಿಂಗ್ ಶಾಸಕ ಸೆಲ್ಸ್ಟೀನ್ ಲಿಂಗ್ಡೊ ಅವರು ಮುಖ್ಯಮಂತ್ರಿ ಕೊನ್ರಾಡ್ ಕೆ.ಸಂಗ್ಮಾ ಅವರ ಸಮ್ಮುಖದಲ್ಲಿ ಎನ್‌ಪಿಪಿ ಪಾಳಯಕ್ಕೆ ಸೇರಿದರು.

ಸುಪ್ರೀಂ ಕೋರ್ಟ್‌ಗೆ ವಿವರಣೆ ನೀಡಿದ ಕೇಂದ್ರ ಸರ್ಕಾರ

ತಲಾಖ್: ಕಾನೂನುಬದ್ಧವಲ್ಲ, ಧಾರ್ಮಿಕ ಮಾನ್ಯತೆಯೂ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ತ್ರಿವಳಿ ತಲಾಖ್ ಮೂಲಕ ವಿವಾಹ ವಿಚ್ಛೇದನ ನೀಡುವ ಪದ್ಧತಿಯನ್ನು ಕ್ರಿಮಿನಲ್ ಅಪರಾಧವನ್ನಾಗಿ ಪರಿಗಣಿಸಿದ 2019ರ ಕಾನೂನನ್ನು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಬಲವಾಗಿ ಸಮರ್ಥಿಸಿಕೊಂಡಿದೆ.

ಈ ಕಾನೂನಿನ ಅಡಿಯಲ್ಲಿ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಲು ಅವಕಾಶ ಇದೆ. ತ್ರಿವಳಿ ತಲಾಖ್ ಪದ್ಧತಿಗೆ ಕಾನೂನಿನ ಮಾನ್ಯತೆ ಇರಲಿಲ್ಲ, ವೈವಾಹಿಕ ಬಂಧವನ್ನು ಇದ್ದಕ್ಕಿದ್ದಂತೆ ಕಡಿದುಕೊಳ್ಳಲು ಅವಕಾಶ ಕಲ್ಪಿಸುವ ಈ ಪದ್ಧತಿಗೆ ಧಾರ್ಮಿಕ ಅನುಮತಿ ಕೂಡ ಇರಲಿಲ್ಲ ಎಂದು ಕೇಂದ್ರವು ಹೇಳಿದೆ.

‘ತಲಾಖ್–ಎ–ಬಿದ್ದತ್ (ಒಂದೇ ಬಾರಿಗೆ ಮೂರು ಬಾರಿ ತಲಾಖ್ ಹೇಳಿ ವಿಚ್ಛೇದನ ನೀಡುವುದು) ಖಾಸಗಿಯಾಗಿ ವ್ಯಕ್ತಿಯೊಬ್ಬರಿಗೆ ನೋವುಂಟು ಮಾಡುವಂಥದ್ದಲ್ಲ. ಅದರಿಂದ ಸಮಾಜದ ಹಿತಕ್ಕೆ ಧಕ್ಕೆ ಆಗುತ್ತದೆ. ಈ ಪದ್ಧತಿಯು ಮಹಿಳೆಯರ ಹಕ್ಕುಗಳಿಗೆ ಹಾಗೂ ಮದುವೆ ಎನ್ನುವ ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾಗಿದೆ’ ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯವು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

2017ರಲ್ಲಿ ಶಾಯರಾ ಬಾನು ಪ್ರಕರಣದಲ್ಲಿ ನೀಡಿದ ಬಹುಮತದ (3:2) ತೀರ್ಪಿನಲ್ಲಿ, ತ್ರಿವಳಿ ತಲಾಖ್ ಪದ್ಧತಿಯು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವೇ ಹೇಳಿರುವಾಗ, ಈ ಪದ್ಧತಿಯನ್ನು ಕ್ರಿಮಿನಲ್ ಅಪರಾಧವನ್ನಾಗಿ ಪರಿಗಣಿಸುವ ಕಾನೂನು ತರ್ಕ ರಹಿತವಾದುದು ಎಂದೋ, ಅತಿರೇಕದ ಕ್ರಮ ಎಂದೋ ಹೇಳಲು ಸಾಧ್ಯವಿಲ್ಲ ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

‘ತ್ರಿವಳಿ ತಲಾಖ್ ಎಂಬುದು ಕೆಟ್ಟ ಆಚರಣೆ ಎನ್ನುವುದನ್ನು ಶಾಯರಾ ಬಾನು ಪ್ರಕರಣವು ಅದಾಗಲೇ ಗುರುತಿಸಿತ್ತು. ಈ ಪದ್ಧತಿಯನ್ನು ಆಚರಿಸುವವರಲ್ಲಿ ಭೀತಿ ಮೂಡಿಸುವ ನಿಟ್ಟಿನಲ್ಲಿ ಶಿಕ್ಷೆಗೆ ಅವಕಾಶ ಕಲ್ಪಿಸುವ ಕೆಲಸವನ್ನು ಮಾತ್ರ ಕಾನೂನಿನ ಮೂಲಕ ಮಾಡಲಾಗಿದೆ’ ಎಂದು ಕೇಂದ್ರ ಹೇಳಿದೆ.

‘ಮುಸ್ಲಿಂ ಮಹಿಳೆಯರ (ವೈವಾಹಿಕ ಹಕ್ಕುಗಳ ರಕ್ಷಣೆ) ಕಾಯ್ದೆ–2019’ಅನ್ನು ಪ್ರಶ್ನಿಸಿ ‘ಸಮಸ್ತ ಕೇರಳ ಜಮಿಯತ್‌ಉಲ್ ಉಲೇಮಾ’ ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆಯಾಗಿ ಕೇಂದ್ರವು ಈ ಪ್ರಮಾಣ ಪತ್ರವನ್ನು ಸಲ್ಲಿಸಿದೆ.

ವಿವಾಹವು ವೈಯಕ್ತಿಕ ಕಾನೂನುಗಳ ವ್ಯಾಪ್ತಿಗೆ ಬರುತ್ತದೆಯಾದ ಕಾರಣಕ್ಕೆ ಅದು ಎಲ್ಲರಿಗೂ ಅನ್ವಯವಾಗುವ ಕ್ರಿಮಿನಲ್ ಕಾನೂನುಗಳ ವ್ಯಾಪ್ತಿಯಿಂದ ಹೊರಗಿರುತ್ತದೆ ಎಂಬ ವಾದಕ್ಕೆ ಆಧಾರ ಇಲ್ಲ ಎಂದು ಕೇಂದ್ರವು ಹೇಳಿದೆ.

‘ವಿವಾಹವೆಂಬುದು ಸಾಮಾಜಿಕ ಪದ್ಧತಿ. ಇದನ್ನು ರಕ್ಷಿಸುವ ವಿಶೇಷವಾದ ಆಸಕ್ತಿಯು ಪ್ರಭುತ್ವಕ್ಕೆ ಇರುತ್ತದೆ. ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳ ಮೂಲಕ ಪ್ರಭುತ್ವವು ವಿವಾಹ ಸಂಬಂಧಗಳ ಸ್ಥಿರತೆಯನ್ನು ಕಾಪಾಡುವ ಕೆಲಸ ಮಾಡಬಹುದು ಎಂಬುದರಲ್ಲಿ ಅನುಮಾನ ಇಲ್ಲ. ವಿವಾಹ ಪದ್ಧತಿಯ ಪಾವಿತ್ರ್ಯವನ್ನು ಕಾಪಾಡುವ ತತ್ವದ ಆಧಾರದಲ್ಲಿ ಈ ಕಾಯ್ದೆಯನ್ನು ರೂಪಿಸಿರುವಂತೆಯೇ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆಯನ್ನು ರೂಪಿಸಲಾಗಿದೆ’ ಎಂದು ಕೇಂದ್ರ ಹೇಳಿದೆ.

ಅರ್ಜಿದಾರರ ವಾದ ಒಪ್ಪದ ಕೇಂದ್ರ

ಶಾಯರಾ ಬಾನು ಪ್ರಕರಣದ ತೀರ್ಪಿನ ನಂತರ, ತ್ರಿವಳಿ ತಲಾಖ್ ಪದ್ಧತಿಗೆ ಮಾನ್ಯತೆ ಇಲ್ಲವಾಗಿರುವ ಕಾರಣ ಆ ಪದ್ಧತಿಯು ಕ್ರಿಮಿನಲ್ ಅಪರಾಧವಾಗದು ಎಂಬ ವಾದವನ್ನು ಕೇಂದ್ರವು ಒಪ್ಪಿಲ್ಲ.

‘ಅಕ್ರಮವಾದ ನಡೆಯು ತನ್ನ ಉದ್ದೇಶವನ್ನು ಈಡೇರಿಸುವುದಿಲ್ಲವಾದ ಕಾರಣ ಅದನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಬಾರದು ಎಂಬ ವಾದವನ್ನು ಅರ್ಜಿದಾರರು ಮಂಡಿಸಲು ಯತ್ನಿಸುತ್ತಿದ್ದಾರೆ. ಆದರೆ ಈ ವಾದವು ಕ್ರಿಮಿನಲ್ ಕಾನೂನುಗಳ ನೆಲೆಗಟ್ಟನ್ನೇ ಉಪೇಕ್ಷಿಸುವಂತಿದೆ. ದಂಡನೆಯ ಭೀತಿ ಇಲ್ಲದಿದ್ದರೆ ಕ್ರಿಮಿನಲ್ ಅಪರಾಧವನ್ನು ನಿಷೇಧಿಸಿದ ಕ್ರಮವೇ ನಿರುಪಯುಕ್ತ ಆಗುತ್ತದೆ’ ಎಂದು ಕೇಂದ್ರ ಹೇಳಿದೆ.

ಅಪರಾಧಗಳನ್ನು ವ್ಯಾಖ್ಯಾನಿಸುವುದು ಹಾಗೂ ಅದಕ್ಕೆ ಸೂಕ್ತವಾದ ಶಿಕ್ಷೆಯನ್ನು ನಿಗದಿಪಡಿಸುವುದು ಪ್ರಭುತ್ವದ ಮೂಲ ಕಾರ್ಯಗಳಲ್ಲೊಂದು ಎಂದು ಸರ್ಕಾರವು ವಿವರಿಸಿದೆ.

‘ನಿರ್ದಿಷ್ಟವಾದ ನಡೆಯನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಬೇಕೇ, ಅದಕ್ಕೆ ಯಾವ ಶಿಕ್ಷೆ ವಿಧಿಸಬೇಕು ಎಂಬ ತೀರ್ಮಾನವನ್ನು ಸಾಮಾಜಿಕ ಸಂದರ್ಭಗಳಿಗೆ ಅನುಗುಣವಾಗಿ ಶಾಸಕಾಂಗ ಕೈಗೊಳ್ಳುತ್ತದೆ. ನಿರ್ದಿಷ್ಟವಾದ ನಡೆಯು ಕ್ರಿಮಿನಲ್ ಅಪರಾಧವೇ ಅಥವಾ ಸಿವಿಲ್ ಅಪರಾಧವೇ ಎಂಬುದನ್ನು ಕೋರ್ಟ್‌ಗಳು ತೀರ್ಮಾನಿಸಲಾಗದು’ ಎಂದೂ ಕೇಂದ್ರ ಹೇಳಿದೆ.

ಮುಂದುವರಿದ ಸಿಬಿಐ ವಿಚಾರಣೆ

ಕೋಲ್ಕತ್ತ: ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಪ್ರಕರಣ

ಕೋಲ್ಕತ್ತ (ಪಿಟಿಐ): ಆರ್‌.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಚಾರ್ಯ ಸಂದೀಪ್ ಘೋಷ್ ಅವರನ್ನು ಸಿಬಿಐ ಅಧಿಕಾರಿಗಳು ಸತತ ನಾಲ್ಕನೇ ದಿನವೂ ವಿಚಾರಣೆಗೆ ಒಳಪಡಿಸಿದರು.

ವೈದ್ಯಕೀಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ಸಿಬಿಐ, ಶುಕ್ರವಾರದಿಂದ ಹಲವು ಗಂಟೆಗಳ ಕಾಲ ಘೋಷ್ ಅವರ ವಿಚಾರಣೆ ನಡೆಸಿದ್ದಾರೆ. ಸೋಮವಾರ ಬೆಳಿಗ್ಗೆ ಸಿಬಿಐ ಕಚೇರಿಗೆ ಹಾಜರಾದ ಅವರು ಹಲವು ಪ್ರಶ್ನೆಗಳನ್ನು ಎದುರಿಸಿದರು.

ಆರ್‌.ಜಿ.ಕರ್ ಆಸ್ಪತ್ರೆಯ ಸೆಮಿನಾರ್ ಹಾಲ್‌ನಲ್ಲಿ ವೈದ್ಯ ವಿದ್ಯಾರ್ಥಿನಿಯ ಮೃತ ದೇಹ ಆಗಸ್ಟ್ 9ರಂದು ಪತ್ತೆಯಾಗಿತ್ತು. ಅದಾದ ಎರಡು ದಿನಗಳ ಬಳಿಕ ಘೋಷ್ ಅವರು ಪ್ರಾಚಾರ್ಯರ ಹುದ್ದೆಗೆ ರಾಜೀನಾಮೆ ನೀಡಿದ್ದರು. ಘೋಷ್ ಮಾಡಿರುವ ದೂರವಾಣಿ ಕರೆಗಳು ಮತ್ತು ವಾಟ್ಸ್‌ಆ್ಯಪ್ ಚಾಟ್ ಕುರಿತು ತನಿಖಾಧಿಕಾರಿಗಳು ಮಾಹಿತಿ ಕಲೆಹಾಕಿದ್ದಾರೆ.

ಹೈಕೋರ್ಟ್ ಮೊರೆ: ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಘಟನೆ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಸಮನ್ಸ್ ಜಾರಿಗೊಳಿಸಿರುವುದನ್ನು ಪ್ರಶ್ನಿಸಿ ಟಿಎಂಸಿ ಸಂಸದ ಸುಖೇಂದು ಶೇಖರ್ ರಾಯ್ ಅವರು ಕಲ್ಕತ್ತ ಹೈಕೋರ್ಟ್ ಮೊರೆಹೋಗಿದ್ದಾರೆ. ರಾಯ್ ಅವರಿಗೆ ಭಾನುವಾರ ನೋಟಿಸ್ ಜಾರಿಗೊಳಿಸಿದ್ದ ಕೋಲ್ಕತ್ತ ಪೊಲೀಸರು, ಅಧಿಕಾರಿಗಳ ಮುಂದೆ ಹಾಜರಾಗುವಂತೆ ಸೂಚಿಸಿದ್ದರು.

ನೋಟಿಸ್ ಅನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲು ರಾಯ್ ಅವರ ವಕೀಲರಿಗೆ ನ್ಯಾಯಮೂರ್ತಿಗಳಾದ ರಾಜರ್ಷಿ ಭಾರದ್ವಾಜ್ ಸೋಮವಾರ ಅನುಮತಿ ನೀಡಿದರು. ಅರ್ಜಿಯ ವಿಚಾರಣೆ ಮಂಗಳವಾರ ನಡೆಯಲಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಲ್ಕತ್ತ ಪೊಲೀಸ್ ಕಮಿಷನರ್ ಹಾಗೂ ಆರ್‌.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಚಾರ್ಯ ಅವರನ್ನು ತನಿಖೆಗೆ ಒಳಪಡಿಸಬೇಕು ಎಂದು ರಾಯ್ ಅವರು ಆಗ್ರಹಿಸಿದ್ದರು.

ಸಂತ್ರಸ್ತೆಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಕಲ್ಕತ್ತ ಹೈಕೋರ್ಟ್‌ನ ವಕೀಲರು ಸೋಮವಾರ ಕೋಲ್ಕತ್ತದಲ್ಲಿ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಪ್ರಮುಖ ಬೆಳವಣಿಗೆಗಳು

- ಅತ್ಯಾಚಾರ ಘಟನೆ ಖಂಡಿಸಿ ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಆರ್‌.ಜಿ. ಕರ್ ವೈದ್ಯಕೀಯ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಸೋಮವಾರ ಪಾಲ್ಗೊಂಡರು.
- ‘ಆಸ್ಪತ್ರೆಯಲ್ಲಿ ನಡೆದಿರುವುದು ಘೋರ ಘಟನೆ’ ಎಂದು 1964ರ ಬ್ಯಾಚ್‌ನ ವಿದ್ಯಾರ್ಥಿಯೊಬ್ಬರು ಹೇಳಿದರು.
- ಅತ್ಯಾಚಾರ ಮತ್ತು ಕೊಲೆ ಘಟನೆಗೆ ಸಂಬಂಧಿಸಿದಂತೆ ಸುಳ್ಳು ಸುದ್ದಿ ಹರಡಿದ ಆರೋಪ ಎದುರಿಸುತ್ತಿರುವ ಹಿರಿಯ ವೈದ್ಯರಾದ ಕುನಾಲ್ ಸರ್ಕಾರ್ ಮತ್ತು ಸುವರ್ಣ ಗೋಸ್ವಾಮಿ ಅವರು ಪೊಲೀಸ್ ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳ ಮುಂದೆ ಸೋಮವಾರ ಹಾಜರಾದರು.
- ಕುನಾಲ್ ಮತ್ತು ಗೋಸ್ವಾಮಿ ಅವರು ಇತರ ವೈದ್ಯರ ಜತೆ ಮೆರವಣಿಗೆಯಲ್ಲಿ ಪೊಲೀಸ್ ಕೇಂದ್ರ ಕಚೇರಿಗೆ ತೆರಳಿದರು.
- ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರತ್ತ ಬೆರಳು ತೋರಿಸಿ ರಾಜೀನಾಮೆಗೆ ಆಗ್ರಹಿಸುತ್ತಿರುವವರ ಬೆರಳು ಕತ್ತರಿಸಬೇಕು ಎಂದು ಟಿಎಂಸಿ ಮುಖಂಡರೂ ಆಗಿರುವ ಸಚಿವ ಉದಯನ್ ಗುಹಾ ಹೇಳಿದ್ದು, ವಿವಾದಕ್ಕೆ ಕಾರಣವಾಗಿದೆ.
- ಸಂತ್ರಸ್ತೆಗೆ ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸಿ ಕಲ್ಕತ್ತ ಹೈಕೋರ್ಟ್‌ನ ವಕೀಲರು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು

ಮಕ್ಕಳಿಂದ ಇಟ್ಟಿಗೆ ಹೊರಿಸಿದ ಮುಖ್ಯಶಿಕ್ಷಕ ಅಮಾನತು

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಸರ್ಕಾರಿ ಶಾಲೆಯೊಂದರ ಆವರಣದಲ್ಲಿ ಮಕ್ಕಳಿಂದ ಇಟ್ಟಿಗೆ ಹೊರಿಸಿದ ವಿಡಿಯೊವೊಂದು ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ, ಮುಖ್ಯಶಿಕ್ಷಕರನ್ನು ಅಮಾನತುಗೊಳಿಸಲಾಗಿದೆ.

ಬಲಿಯಾ ಜಿಲ್ಲೆಯ ಬಿಸೌಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣ ಸ್ವಚ್ಛಗೊಳಿಸುವ ವೇಳೆ ಮಕ್ಕಳು ಇಟ್ಟಿಗೆ ಹೊರುತ್ತಿದ್ದ ವಿಡಿಯೊವನ್ನು ಸಾಮಾಜಿಕ ಜಾಲತಾಣಕ್ಕೆ ಆಗಸ್ಟ್ 12ರಂದು ಅಪ್‌ಲೋಡ್ ಮಾಡಲಾಗಿತ್ತು.

ವಿಡಿಯೊ ವೈರಲ್ ಆದ ವಿಷಯ ತಿಳಿದು ಕ್ಷೇತ್ರ ಶಿಕ್ಷಣಾಧಿಕಾರಿ ರೇವತಿ ಅವರು ಈ ಬಗ್ಗೆ ಮಾಹಿತಿ ಸಂಗ್ರಹಿಸಿ, ಮುಖ್ಯಶಿಕ್ಷಕರು ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿ ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಉತ್ತರ ಪ್ರದೇಶ ಸರ್ಕಾರಿ ನೌಕರರ (ಶಿಸ್ತು ಮತ್ತು ಸಭ್ಯತೆ) ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿದ್ದಾರೆ’ ಎಂದು ವರದಿ ನೀಡಿದ್ದಾರೆ.

‘ವರದಿ ಅನ್ವಯ, ತಕ್ಷಣದಿಂದ ಜಾರಿಗೆ ಬರುವಂತೆ ಮುಖ್ಯಶಿಕ್ಷಕ ಮಹೇಶ್ ಯಾದವ್ ಅವರನ್ನು ಅಮಾನತುಗೊಳಿಸಿದ್ದು, ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಜಿಲ್ಲಾ ಶಿಕ್ಷಣಾಧಿಕಾರಿ ಮನೀಶ್ ಕುಮಾರ್ ಸಿಂಗ್ ಅವರು ಸೋಮವಾರ ತಿಳಿಸಿದ್ದಾರೆ.

ವಿಷಪೂರಿತ ಆಹಾರ ಸೇವನೆ ನಾಲ್ವರು ಮಕ್ಕಳ ಸಾವು

ಅಮರಾವತಿ: ಅನಾಕಪಲ್ಲಿ ಜಿಲ್ಲೆಯಲ್ಲಿ ಎರಡು ದಿನಗಳ ಹಿಂದೆ ವಿಷಪೂರಿತ ಆಹಾರ ಸೇವಿಸಿದ್ದ ನಾಲ್ವರು ಅನಾಥ ಮಕ್ಕಳು ಸೋಮವಾರ ಮೃತಪಟ್ಟಿದ್ದಾರೆ.

‘ಕೊಟಾರಟ್ಲಾ ಮಂಡಲದ ಕೈಲಾಸಪಟ್ಟಣಂನಲ್ಲಿ ಆರಾಧಾನಾ ಟ್ರಸ್ಟ್ ನಡೆಸುತ್ತಿದ್ದ ಅನಾಥಾಲಯದಲ್ಲಿ ಶನಿವಾರ ಸಮೋಸಾ, ಚಾಕೊಲೇಟ್ ತಿಂದ ತಕ್ಷಣವೇ 27 ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದರು. ಭಾನುವಾರ ವಾಂತಿ, ವಿಪರೀತ ಸುಸ್ತು ಕಾಣಿಸಿಕೊಂಡಿದ್ದ ಮಕ್ಕಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಜೋಶುವಾ, ಭವಾನಿ, ಶ್ರದ್ಧಾ ಹಾಗೂ ನಿತ್ಯಾ ಮೃತಪಟ್ಟರು’ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇತರೆ ಮಕ್ಕಳನ್ನು ವಿಶಾಖಪಟ್ಟಣದ ಕಿಂಗ್ ಜಾರ್ಜ್ ಆಸ್ಪತ್ರೆಗೆ ದಾಖಲಿಸಿದ್ದು, ಉತ್ತಮ ಚಿಕಿತ್ಸೆ ಕಲ್ಪಿಸುವಂತೆ ಅನಾಕಪಲ್ಲಿ ಜಿಲ್ಲಾಧಿಕಾರಿ ವಿಜಯಾ ಕೃಷ್ಣನ್ ಅವರಿಗೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್‌.ಚಂದ್ರಬಾಬು ನಾಯ್ಡು ಸೂಚನೆ ನೀಡಿದ್ದಾರೆ. ಘಟನೆ ಕುರಿತಂತೆ ಸಮಗ್ರ ವರದಿ ಸಲ್ಲಿಸುವಂತೆ ಆದೇಶ ನೀಡಿದ್ದಾರೆ.

ಗ್ರಾಮೀಣ ಬಾಲಕಿಯರಿಗೆ ವರದಾನವಾದ ಯೋಜನೆ

ಉಚಿತ ಸೈಕಲ್ ಯೋಜನೆಯಿಂದ ಮೌನ ಕ್ರಾಂತಿ

ಪ್ರಜಾವಾಣಿ ವಾರ್ತೆ/ಪಿಟಿಐ

- **2007, 2014, 2017** — ಸಂಶೋಧನೆ ನಡೆಸಿದ ವರ್ಷ
- **35** — ಸಂಶೋಧನೆ ನಡೆಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶ
- **5-17 ವರ್ಷ** — ಸಂಶೋಧನೆಗಾಗಿ ಸಂದರ್ಶಿಸಿದವರ ವಯೋಮಾನ
- **ಗ್ರಾಮೀಣ/ನಗರ–ಬಾಲಕಿ/ಬಾಲಕ** — ಸಂಶೋಧನೆಯಲ್ಲಿ ಭಾಗಿಯಾದವರು

ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗಾಗಿ ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿರುವ ಉಚಿತ ಸೈಕಲ್ ವಿತರಣೆ ಯೋಜನೆಯ (ಬಿಡಿಎಸ್) ಕಾರಣದಿಂದಾಗಿ ಭಾರತದಲ್ಲಿ ‘ಮೌನ ಕ್ರಾಂತಿ’ಯೊಂದು ನಡೆದಿದೆ. ಗ್ರಾಮೀಣ ಭಾಗದ ಬಾಲಕಿಯರ ಬದುಕಿನಲ್ಲಿ ಈ ಕ್ರಾಂತಿ ನಡೆದಿದೆ.

ಶಾಲೆಗಳಿಗೆ ಹೋಗಲು ಸೈಕಲ್ ಬಳಸುವ ವಿದ್ಯಾರ್ಥಿಗಳ ಸಂಖ್ಯೆಯು ಬಿಹಾರ ಹಾಗೂ ಪಶ್ಚಿಮ ಬಂಗಾಳದಲ್ಲಿ ಎಂಟು ಪಟ್ಟು ಏರಿಕೆಯಾಗಿದೆ. ಆದರೆ, ಮಣಿಪುರದ ಗ್ರಾಮೀಣ ಭಾಗಗಳಲ್ಲಿ ಸೈಕಲ್ ಬಳಸುವ ವಿದ್ಯಾರ್ಥಿಗಳ ಪ್ರಮಾಣ ಇಳಿಮುಖವಾಗಿದೆ.

ದೆಹಲಿಯ ಐಐಟಿ ಹಾಗೂ ನರ್ಸೀ ಮೊಂಜಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಸಂಶೋಧಕರ ವರದಿಯು ಈ ಮೌನ ಕ್ರಾಂತಿಯ ಕುರಿತು ಮಾಹಿತಿ ನೀಡಿದೆ. ಈ ಸಂಶೋಧನಾ ಪ್ರಬಂಧವು ‘ಜರ್ನಲ್ ಆಫ್ ಟ್ರಾನ್ಸ್‌ಪೋರ್ಟ್ ಜಿಯೊಗ್ರಫಿ’ ಎಂಬ ಪ್ರತಿಷ್ಠಿತ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ.

- ಶೇ 70ರಷ್ಟಕ್ಕೂ ಅಧಿಕ ಗ್ರಾಮೀಣ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗೆ ದಾಖಲಾಗುವುದರಿಂದ ಬಿಡಿಎಸ್ ಯೋಜನೆ ಪ್ರಯೋಜನವು ಗ್ರಾಮೀಣ ಭಾಗದಲ್ಲಿಯೇ ಅಧಿಕವಾಗಿದೆ
- ನಗರ ಪ್ರದೇಶದ ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗೆ ಅಧಿಕವಾಗಿ ದಾಖಲಾಗುವುದರಿಂದ ಬಿಡಿಎಸ್ ಯೋಜನೆಯು ಪ್ರಯೋಜನವು ಈ ಪ್ರದೇಶದಲ್ಲಿ ಆಗಿಲ್ಲ



ಬಿಡಿಎಸ್ ಜಾರಿಯಲ್ಲಿರುವ ರಾಜ್ಯಗಳಲ್ಲಿ ವಿದ್ಯಾರ್ಥಿಗಳ ಸೈಕಲ್ ಬಳಕೆಯಲ್ಲಿ ಆದ ಶೇಕಡವಾರು ಅಂಶಗಳಷ್ಟು ಏರಿಕೆ

ಬಿಡಿಎಸ್ ಜಾರಿಯಲ್ಲಿ ಇಲ್ಲದ ರಾಜ್ಯಗಳಲ್ಲಿ ವಿದ್ಯಾರ್ಥಿಗಳ ಸೈಕಲ್ ಬಳಕೆಯಲ್ಲಿ ಆದ ಶೇಕಡವಾರು ಅಂಶಗಳಷ್ಟು ಏರಿಕೆ

ಬಿಡಿಎಸ್ ಯೋಜನೆಯ ಪರಿಣಾಮಗಳ ಕುರಿತು ಸಂಶೋಧನೆ ಮಾಡಿರುವ ಒಂದೇ ಒಂದು ಪ್ರಬಂಧವನ್ನು ನಾವು ಕಂಡಿಲ್ಲ. ಅದಕ್ಕಾಗಿಯೇ ಇದೊಂದು ‘ಮೌನ’ ಕ್ರಾಂತಿ. ಲಿಂಗದ ಕಾರಣಕ್ಕೆ ಮನೆಯಿಂದ ಹೊರಗೆ ಕಾಲಿಡುವುದಕ್ಕೂ ತಾರತಮ್ಯ ಇರುವ ದೇಶದಲ್ಲಿ ಬಾಲಕಿಯರು ಬಿಡಿಎಸ್ ಯೋಜನೆಯ ಮೂಲಕ ಸೈಕಲ್ ಬಳಸಿಕೊಂಡು ಶಿಕ್ಷಣ ಪಡೆಯುತ್ತಿದ್ದಾರೆ ಎನ್ನುವುದು ದೊಡ್ಡ ವಿಷಯವೇ ಆಗಿದೆ. ಅದರಿಂದಾಗಿಯೇ ಇದೊಂದು ಮೌನ ‘ಕ್ರಾಂತಿ’

ಅದಿತಿ ಸೇಠ್, ನರ್ಸೀ ಮೊಂಜಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಸಂಶೋಧಕಿ

ಬಾಲಕಿಯರ ಸೈಕಲ್ ಬಳಕೆ: ರಾಜ್ಯವಾರು ಪ್ರಮಾಣ ಏರಿಕೆ



- ಬಿಡಿಎಸ್‌ನಿಂದಾಗಿ 6–7ನೇ ತರಗತಿಗಳಿಗೆ ಗ್ರಾಮೀಣ ಭಾಗದ ಬಾಲಕಿಯರ ದಾಖಲಾತಿಯು ದ್ವಿಗುಣಗೊಂಡಿದೆ
- ಬಿಡಿಎಸ್‌ನಿಂದಾಗಿ 6–7ನೇ ತರಗತಿಗಳಿಗೆ ನಗರ ಭಾಗದ ಬಾಲಕಿಯರ ದಾಖಲಾತಿಯು 1.5ರಷ್ಟು ಏರಿಕೆಯಾಗಿದೆ

ರಷ್ಯಾ ಸೇನೆಯಲ್ಲಿದ್ದ ಮಲಯಾಳಿ ಸಾವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಷ್ಯಾದ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಕೇರಳದ ತ್ರಿಶೂರ್ ಜಿಲ್ಲೆಯ ಚಾಲಕ್ಕುಡಿಯ ನಾಯರಂಗಡಿಯ ನಿವಾಸಿ ಸಂದೀಪ್ (36) ಉಕ್ರೇನ್ ನಡೆಸಿದ ದಾಳಿಯಲ್ಲಿ ಮೃತಪಟ್ಟಿದ್ದಾರೆ.

ಅಧಿಕೃತ ಸೂಚನೆಗಾಗಿ ಕಾಯಲಾಗುತ್ತಿದೆ. ರಷ್ಯಾದಲ್ಲಿರುವ ಮಲಯಾಳಿ ಸಂಘಟನೆಗಳು ಈ ಕುರಿತು ಮೃತರ ಕುಟುಂಬಸ್ಥರಿಗೆ ಭಾನುವಾರ ಮಾಹಿತಿ ನೀಡಿದ್ದಾರೆ. ಘಟನೆಯಲ್ಲಿ ರಷ್ಯಾದ ಹಲವು ಯೋಧರು ಕೂಡ ಮೃತಪಟ್ಟಿದ್ದಾರೆ.

ಸ್ಥಳೀಯರ ಪ್ರಕಾರ, ಸಂದೀಪ್ ಹಾಗೂ ಕೆಲವರನ್ನು ಮಾಸ್ಕೊದಲ್ಲಿರುವ ರೆಸ್ಟೋರೆಂಟ್‌ನಲ್ಲಿ ಉದ್ಯೋಗಕ್ಕಾಗಿ ನೇಮಕಾತಿ ಮಾಡಿಕೊಳ್ಳಲಾಗಿತ್ತು. ರಷ್ಯಾಕ್ಕೆ ತಲುಪಿದ ನಂತರ ಬಲವಂತದಿಂದ ಸೇನೆಗೆ ಸೇರ್ಪಡೆಗೊಳಿಸಲಾಯಿತು. ಸಂದೀಪ್ ರಷ್ಯಾದ ಪೌರತ್ವ ಕೂಡ ಪಡೆದಿದ್ದರು.

‘ಘಟನೆ ಕುರಿತಂತೆ ಇದುವರೆಗೂ ಅಧಿಕೃತ ಮಾಹಿತಿ ಬಂದಿಲ್ಲ. ರಷ್ಯಾದ ಭಾರತೀಯ ರಾಯಭಾರ ಕಚೇರಿಯು ‘ಅನೌಪಚಾರಿಕ’ವಾಗಿ ದೃಢಪಡಿಸಿದೆ’ ಎಂದು ಕೇರಳ ಸರ್ಕಾರದ ಅನಿವಾಸಿ ಕೇರಳ ಶ್ರೇಯಾಭಿವೃದ್ಧಿ ಸಂಸ್ಥೆಯ (ಎನ್‌ಆರ್‌ಕೆ) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅಜಿತ್ ಕೊಲ್ಲಶ್ಶೇರಿ ತಿಳಿಸಿದ್ದಾರೆ.

ಉದ್ಯೋಗ ನೀಡುವುದಾಗಿ ನಂಬಿಸಿ ಮಲಯಾಳಿಗಳು ಸೇರಿದಂತೆ ಭಾರತದ ಯುವಕರನ್ನು ಕರೆಸಿಕೊಳ್ಳುವ ಏಜೆಂಟರು ಅಲ್ಲಿಗೆ ತೆರಳಿದ ಬಳಿಕ ಯುವಕರನ್ನು ಬಲವಂತವಾಗಿ ರಷ್ಯಾ ಸೇನೆಗೆ ಸೇರ್ಪಡೆಗೊಳಿಸುತ್ತಿದ್ದಾರೆ. ಕೇರಳದ ಕೆಲವು ಯುವಕರು ಕೆಲವೇ ದಿನಗಳಲ್ಲಿ ಸ್ವದೇಶಕ್ಕೆ ಹಿಂತಿರುಗಿದ್ದು, ಇನ್ನೂ ಕೆಲವರು ಅಲ್ಲಿಯೇ ಉಳಿದಿದ್ದಾರೆ.

ಜಮ್ಮು–ಕಾಶ್ಮೀರ: ಎನ್‌ಸಿ ಪ್ರಣಾಳಿಕೆ ಬಿಡುಗಡೆ

ಪ್ರಜಾ ಮತ
ಜನತಂತ್ರದ ಹಬ್ಬ

ಶ್ರೀನಗರ (ಎಪಿ): ವಿಧಾನಸಭೆ ಚುನಾವಣೆಗೆ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷವು ಸೋಮವಾರ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನ ನೀಡುವುದು ಮತ್ತು ಸಂವಿಧಾನದ 370ನೇ ವಿಧಿ ಅಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ಮರುಸ್ಥಾಪನೆ ಸೇರಿದಂತೆ 12 ಭರವಸೆಗಳನ್ನು ನೀಡಿದೆ.

2000ನೇ ಇಸವಿಯಲ್ಲಿ ವಿಧಾನಸಭೆಯಲ್ಲಿ ಅಂಗೀಕರಿಸಿದ್ದ ಸ್ವಾಯತ್ತ ನಿರ್ಣಯವನ್ನು ಅನುಷ್ಠಾನ ಮಾಡುವುದಾಗಿಯೂ ತಿಳಿಸಿದೆ.

2000ನೇ ಇಸವಿಯ ಜೂನ್‌ನಲ್ಲಿ ಫಾರೂಕ್ ಅಬ್ದುಲ್ಲಾ ನೇತೃತ್ವದ ಎನ್‌ಸಿ ಸರ್ಕಾರವು, ರಾಜ್ಯಕ್ಕೆ 1953ಕ್ಕೂ ಮುಂಚೆ ಇದ್ದ ಸಾಂವಿಧಾನಿಕ ಸ್ಥಾನಮಾನವನ್ನು ಮರುಸ್ಥಾಪಿಸುವ ನಿರ್ಣಯವನ್ನು ವಿಧಾನಸಭೆಯಲ್ಲಿ ಮಂಡನೆ ಮಾಡಿ ಅಂಗೀಕಾರ ಪಡೆದಿತ್ತು. ಆದರೆ, ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಕೇಂದ್ರ ಸಂಪುಟವು ಅದನ್ನು ಒಪ್ಪಿರಲಿಲ್ಲ.

ಪತ್ರಿಕಾಗೋಷ್ಠಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಪಕ್ಷದ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು, ‘ಅನುಷ್ಠಾನಗೊಳಿಸಲು ಸಾಧ್ಯವಿರುವ ಭರವಸೆಗಳನ್ನು ಮಾತ್ರ ನೀಡಲಾಗಿದೆ. ಪ್ರಣಾಳಿಕೆಯು ಪಕ್ಷದ ದೂರದೃಷ್ಟಿ ಮತ್ತು ಆಡಳಿತದ ನೀಲನಕ್ಷೆ’ ಎಂದು ಹೇಳಿದರು.

ಇತರ ಭರವಸೆಗಳು

- ಸಾರ್ವಜನಿಕ ಭದ್ರತೆ ಕಾಯ್ದೆಯ ರದ್ದತಿ
- ಒಂದು ಲಕ್ಷ ಉದ್ಯೋಗ ಸೃಷ್ಟಿ
- ಆರ್ಥಿಕ ದುರ್ಬಲ ವರ್ಗದ ಕುಟುಂಬಕ್ಕೆ ವರ್ಷಕ್ಕೆ ಉಚಿತ ಆರು ಎಲ್‌ಪಿಜಿ ಸಿಲಿಂಡರ್
- ಮಹಿಳೆಯರಿಗೆ ಸಾರ್ವಜನಿಕ ಸಾರಿಗೆಗಳಲ್ಲಿ ಉಚಿತ ಪ್ರಯಾಣ
- ರಾಜಕೀಯ ಕೈದಿಗಳ ಬಿಡುಗಡೆ
- ಕಾಶ್ಮೀರಿ ಪಂಡಿತರನ್ನು ವಾಪಸ್ ಕರೆಸಿಕೊಳ್ಳುವುದು

ಮೈತ್ರಿಗೆ ‘ಕೈ’ ಸಿದ್ಧ: ತಾರೀಕ್ ಹಮೀದ್

ನವದೆಹಲಿ (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿಗಾಗಿ ಸಮಾನ ಮನಸ್ಕ ಪಕ್ಷಗಳೊಂದಿಗೆ ಮಾತುಕತೆ ನಡೆಸಲು ಕಾಂಗ್ರೆಸ್ ಪಕ್ಷವು ಸಿದ್ಧವಿದೆ’ ಎಂದು ಪಕ್ಷದ ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್ ಘಟಕದ ಅಧ್ಯಕ್ಷ ತಾರೀಕ್ ಹಮೀದ್ ಕರ್ರ ಸೋಮವಾರ ಹೇಳಿದರು.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಈ ಬಾರಿಯ ಮೈತ್ರಿಯ ಮಾನದಂಡವು ಕಳೆದ ಲೋಕಸಭಾ ಚುನಾವಣೆಗಿಂತ ಭಿನ್ನವಾಗಿ ಇರಲಿದೆ’ ಎಂದು ಹೇಳಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನ ನೀಡುವುದು ಕಾಂಗ್ರೆಸ್ ಪಕ್ಷದ ಆದ್ಯತೆ. ಕಣಿವೆ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡುವ ಮೂಲಕ ಕೇಂದ್ರ ಸರ್ಕಾರವು ಅಸಾಂವಿಧಾನಿಕ ಹೆಜ್ಜೆ ಇಟ್ಟಿದೆ ಎಂದು ದೂರಿದರು.

ಬಿಜೆಪಿಯ ಸರ್ವಾಧಿಕಾರಿ ಧೋರಣೆ ವಿರೋಧಿಸುವ ಎಲ್ಲ ಜಾತ್ಯತೀತ ಪಕ್ಷಗಳಿಗೆ ಈಗಾಗಲೇ ಸಂದೇಶ ರವಾನೆಯಾಗಿದೆ. ಬಿಜೆಪಿಯು ಜಮ್ಮು ಮತ್ತು ಕಾಶ್ಮೀರದ ಮೇಲೆ ಮಲತಾಯಿ ಧೋರಣೆ ತೋರುತ್ತಿದೆ. ಕೇಂದ್ರಾಡಳಿತ ಪ್ರದೇಶವನ್ನು ಮತದಾಳವಾಗಿ ಬಳಸಿಕೊಂಡಿದೆ ಎಂದರು.

ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಜೊತೆ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳಲಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಲೋಕಸಭಾ ಚುನಾವಣೆ ಸಂದರ್ಭದಲ್ಲಾದ ಮೈತ್ರಿಗಿಂತ ಈ ಮೈತ್ರಿಯು ಭಿನ್ನವಾಗಿ ಇರಲಿದೆ. ಅದು ರಾಷ್ಟ್ರಮಟ್ಟದಲ್ಲಾದ ಮೈತ್ರಿ, ಇದು ವಿಧಾನಸಭಾ ಚುನಾವಣೆ. ಹೀಗಾಗಿ ಮೈತ್ರಿಯ ಮಾನದಂಡಗಳು ವಿಭಿನ್ನವಾಗಿ ಇರಲಿವೆ’ ಎಂದು ಹೇಳಿದರು.

ಹಮೀದ್ 2017ರಲ್ಲಿ ಪಿಡಿಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ.

ಮಲಯಾಳ ಚಿತ್ರರಂಗದ ಕರಾಳ ಮುಖ ಬಹಿರಂಗಪಡಿಸಿದ ಹೇಮಾ ಸಮಿತಿ

ಸಿನಿಮಾ ಕಲಾವಿದೆಯರಿಗೆ ಲೈಂಗಿಕ ಕಿರುಕುಳ

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುವನಂತಪುರ: ನಟನಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ನಟಿಯೊಬ್ಬರಿಗೆ ಮರುದಿನ ಅದೇ ನಟನೊಂದಿಗೆ ಪತಿ–ಪತ್ನಿಯಾಗಿ ನಟಿಸಬೇಕಾಯಿತು. ಕೋಪ ಮತ್ತು ದ್ವೇಷವು ಆಕೆಯ ಮುಖದಲ್ಲಿ ಪ್ರತಿಫಲಿಸುತ್ತಿದ್ದ ಕಾರಣ ಆ ದೃಶ್ಯಕ್ಕೆ ಒಪ್ಪುವ ರೀತಿಯಲ್ಲಿ ನಟಿಸಲು ಆಕೆಗೆ ಸಾಧ್ಯವಾಗಲಿಲ್ಲ. ಒಂದು ಶಾಟ್‌ಗಾಗಿ 17 ಸಲ ರಿಟೇಕ್ ಮಾಡಬೇಕಾಯಿತು. ಕೊನೆಗೆ ಆ ನಟಿ, ನಿರ್ದೇಶಕರ ಟೀಕೆಗೂ ಗುರಿಯಾದರು.

–ಮಲಯಾಳ ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಹೇಮಾ ಸಮಿತಿಯ ವರದಿಯಲ್ಲಿ ದಾಖಲಾಗಿರುವ ಅನೇಕ ಘೋರ ಅನುಭವಗಳಲ್ಲಿ ಇದೂ ಒಂದು.

ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಅಧ್ಯಯನಕ್ಕೆ ಕೇರಳ ಸರ್ಕಾರ 2019ರಲ್ಲಿ ನೇಮಿಸಿದ್ದ ನ್ಯಾಯಮೂರ್ತಿ ಹೇಮಾ ಸಮಿತಿಯ ವರದಿಯು ಸುಮಾರು ಐದು ವರ್ಷಗಳ ಬಳಿಕ ಆರ್‌ಟಿಐ ಕಾಯ್ದೆಯಡಿ ಮಾಧ್ಯಮಗಳಿಗೆ ಲಭ್ಯವಾಗಿದೆ.

ಸಮಸ್ಯೆಯ ವ್ಯಾಪಕ ಸ್ವರೂಪವನ್ನು ವರದಿಯು ಬಹಿರಂಗಪಡಿಸಿದ್ದು, ಚಿತ್ರೋದ್ಯಮದಲ್ಲಿ ಮಹಿಳಾ ವೃತ್ತಿಪರರ ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

‘ರಾಜಿ’ ಮತ್ತು ‘ಹೊಂದಾಣಿಕೆ’ ಎಂಬ ಎರಡು ಪದಗಳು ಮಲಯಾಳ ಚಿತ್ರರಂಗದಲ್ಲಿ ಮಹಿಳೆಯರಿಗೆ ಬಹಳ ಪರಿಚಿತವಾಗಿವೆ. ಸಿನಿಮಾದಲ್ಲಿ ನಟಿಸುವ ಅಥವಾ ಬೇರೆ ಯಾವುದೇ ಕೆಲಸ ಮಾಡುವ ಪ್ರಸ್ತಾವವು ನಟಿಯರಿಗೆ ಲೈಂಗಿಕತೆಯ ಬೇಡಿಕೆಯೊಂದಿಗೆ ಬರುತ್ತಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಹಿಳೆಗೆ ಹೊಂದಾಣಿಕೆ ಮತ್ತು ರಾಜಿ ಮಾಡಿಕೊಳ್ಳುವಂತೆ ಕೇಳಲಾಗುತ್ತದೆ, ಆ ಮೂಲಕ ಲೈಂಗಿಕ ಬೇಡಿಕೆಗಳಿಗೆ ಶರಣಾಗುವಂತೆ ಮಾಡಲಾಗುತ್ತದೆ. ಲೈಂಗಿಕವಾಗಿ ಸಹಕರಿಸಲು ಒಪ್ಪಿದ ನಟಿಯರಿಗೆ ‘ಕೋಡ್’ ನೀಡಲಾಗಿದ್ದು, ಒಪ್ಪದವರನ್ನು ಉದ್ಯಮದಿಂದಲೇ ಹೊರಹಾಕಲಾಗಿದೆ ಎಂಬ ಅಂಶ ವರದಿಯಲ್ಲಿದೆ.

ಅನೇಕರು ಜೀವಭಯದಿಂದ ಮತ್ತು ಭವಿಷ್ಯದ ದೃಷ್ಟಿಯಿಂದ ದೂರು ದಾಖಲಿಸಲು ಮುಂದಾಗಿಲ್ಲ. ಪೊಲೀಸರು ಚಿತ್ರೋದ್ಯಮದಲ್ಲಿ ನಡೆಯುತ್ತಿರುವ ಅಪರಾಧಗಳ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವರದಿಯಲ್ಲಿರುವ ಕೆಲವು ಅಂಶಗಳು

- ಮಲಯಾಳ ಚಿತ್ರೋದ್ಯಮವು ‘ಕ್ರಿಮಿನಲ್ ಗ್ಯಾಂಗ್’ನ ನಿಯಂತ್ರಣದಲ್ಲಿದೆ.
- ಮಹಿಳೆಯರು ಹೋಟೆಲ್‌ಗಳಲ್ಲಿ ಉಳಿದುಕೊಳ್ಳುವ ಸಮಯದಲ್ಲಿ ಅದೇ ಚಿತ್ರ ತಂಡದಲ್ಲಿ ಕೆಲಸ ಮಾಡುವ ಪುರುಷರು ಮದ್ಯದ ನಶೆಯಲ್ಲಿ ಕೊಠಡಿಯ ಬಾಗಿಲು ತಟ್ಟುವರು.
- ಮುಟ್ಟಿನ ಅವಧಿಯಲ್ಲಿ ಮಹಿಳೆಯರಿಗೆ ಯಾವುದೇ ವಿಶೇಷ ಸೌಲಭ್ಯ ಒದಗಿಸುವುದಿಲ್ಲ. ನ್ಯಾಪ್‌ಕಿನ್ ಬದಲಿಸಲೂ ಅವಕಾಶ ಇರುವುದಿಲ್ಲ.
- ಶೂಟಿಂಗ್ ತಾಣದಲ್ಲಿ ಮಹಿಳೆಯರು ಅನೇಕ ಸಲ ಮೂತ್ರವಿಸರ್ಜನೆಯನ್ನು ತುಂಬಾ ಸಮಯದವರೆಗೆ ತಡೆಹಿಡಿಯಬೇಕಾಗುತ್ತದೆ. ಈ ಸಂಕಟ ತಪ್ಪಿಸಲಿಕ್ಕಾಗಿ ನೀರನ್ನೇ ಕುಡಿಯುವುದಿಲ್ಲ.
- ಪುರುಷ ಕಲಾವಿದರಿಗೆ ಹೋಲಿಸಿದರೆ, ಮಹಿಳಾ ಕಲಾವಿದರಿಗೆ ಕಡಿಮೆ ಸಂಭಾವನೆ ನೀಡಲಾಗುತ್ತದೆ.

ಲ್ಯಾಟರಲ್ ಎಂಟ್ರಿಗೆ ಎನ್‌ಡಿಎ ಸದಸ್ಯರ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಲೋಕ ಜನಶಕ್ತಿ ಪಕ್ಷದ (ರಾಮ್ ವಿಲಾಸ್) ಅಧ್ಯಕ್ಷ ಚಿರಾಗ್ ಪಾಸ್ವಾನ್ ಅವರು ಸರ್ಕಾರದ ಉನ್ನತ ಹುದ್ದೆಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಖಾಸಗಿ ವಲಯದ ತಜ್ಞರು ಹಾಗೂ ಪರಿಣತರನ್ನು ನೇಮಕ ಮಾಡಿಕೊಳ್ಳುವುದನ್ನು ವಿರೋಧಿಸಿದ್ದಾರೆ.

ಹೀಗೆ ಮಾಡುವುದು ಪೂರ್ತಿ ತಪ್ಪು ಎಂದು ಅವರು ಹೇಳಿದ್ದಾರೆ. ಈ ವಿಚಾರವನ್ನು ತಾವು ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪಿಸುವುದಾಗಿಯೂ ಅವರು ಹೇಳಿದ್ದಾರೆ.

ಎನ್‌ಡಿಎ ಭಾಗವಾಗಿರುವ ಹಿಂದುಸ್ತಾನಿ ಅವಾಮ್ ಮೋರ್ಚಾದ ನಾಯಕ ಜಿತನ್ ರಾಮ್ ಮಾಂಝಿ ಅವರು ಕೂಡ ಈ ಪ್ರಸ್ತಾವದ ಬಗ್ಗೆ ಅಸಂತೃಪ್ತಿ ವ್ಯಕ್ತಪಡಿಸಿದ್ದಾರೆ. ವಿಷಯವನ್ನು ಸರ್ಕಾರದ ಜೊತೆ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ.

‘ಖಾಸಗಿ ವಲಯದಲ್ಲಿ ಮೀಸಲಾತಿ ಇಲ್ಲ. ಮೀಸಲಾತಿಯನ್ನು ಸರ್ಕಾರಿ ಹುದ್ದೆಗಳಲ್ಲಿಯೂ ನೀಡದೆ ಇದ್ದರೆ... ಈ ಮಾಹಿತಿ ನನಗೆ ಭಾನುವಾರ ದೊರೆಯಿತು. ಇದು ನನ್ನಲ್ಲಿ ಕಳವಳ ಮೂಡಿಸಿದೆ’ ಎಂದು ಪಾಸ್ವಾನ್ ಅವರು ಹೇಳಿದ್ದಾರೆ.

ಲ್ಯಾಟರಲ್ ಎಂಟ್ರಿ ಕ್ರಮವು ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಗಳ ಮೀಸಲಾತಿಯನ್ನು ಕಸಿದುಕೊಳ್ಳುವ ನಡೆ ಅಲ್ಲ. ಮೀಸಲಾತಿಯನ್ನು ಇಲ್ಲವಾಗಿಸುವ ಯಾವುದೇ ಮಾತು ಇದ್ದರೆ, ಆ ಬಗ್ಗೆ ಬಿಜೆಪಿ ಮುಖಂಡರ ಜೊತೆ ಮಾತುಕತೆ ನಡೆಸಲಾಗುತ್ತದೆ ಎಂದು ಮಾಂಝಿ ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಕೋಪ ಎಂಬುದು ಒಂದು ಸಂಕ್ಷಿಪ್ತವಾದ ಬುದ್ಧಿಭ್ರಮಣೆ.
-ಟಿ.ಪಿ.ಕೈಲಾಸಂ

ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಘೋಷಣೆ ವಿಳಂಬಕ್ಕೆ ಸಕಾರಣಗಳಿಲ್ಲ

ಜಮ್ಮು ಮತ್ತು ಕಾಶ್ಮೀರ ಹಾಗೂ ಹರಿಯಾಣ ವಿಧಾನಸಭೆಗೆ ಚುನಾವಣಾ ಆಯೋಗವು ಚುನಾವಣೆ ಘೋಷಣೆ ಮಾಡುವುದರೊಂದಿಗೆ ದೇಶವು ಮತ್ತೊಂದು ಸುತ್ತು ಚುನಾವಣೆಗೆ ಸಜ್ಜಾಗಿದೆ. ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಚುನಾವಣೆ ನಡೆಸುವ ವಿಚಾರದಲ್ಲಿ ಕೇಂದ್ರ ಸರ್ಕಾರವು ದೀರ್ಘಕಾಲದಿಂದ ಹಿಂದೆಮುಂದೆ ನೋಡುತ್ತಿತ್ತು. ಹೀಗಾಗಿ, ಅಲ್ಲಿ ಚುನಾವಣೆ ನಡೆಯುವುದು ಅನಿಶ್ಚಿತವಾಗಿತ್ತು. ಅಲ್ಲಿ ಚುನಾವಣೆ ನಡೆದು ಹತ್ತು ವರ್ಷಗಳಾಗಿವೆ; ಜೊತೆಗೆ ಅಲ್ಲಿನ ಪರಿಸ್ಥಿತಿಯು ಸಹಜ ಸ್ಥಿತಿಗೆ ಮರಳಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಹೀಗಾಗಿ, ಅಲ್ಲಿ ಚುನಾವಣೆಯನ್ನು ಮತ್ತೆ ಮುಂದಕ್ಕೆ ಹಾಕಿದರೆ ವಿವರಣೆ ಕೊಡುವುದು ಕಷ್ಟವಿತ್ತು. ಸೆಪ್ಟೆಂಬರ್ 18, 25 ಮತ್ತು ಅಕ್ಟೋಬರ್ 1ರಂದು ಮತದಾನ ನಡೆಯಲಿದೆ. ಮೂರೇ ಹಂತಗಳಲ್ಲಿ ಮತದಾನ ನಿಗದಿ ಮಾಡಿರುವುದು ಚುನಾವಣಾ ಆಯೋಗದ ಆತ್ಮವಿಶ್ವಾಸವನ್ನು ತೋರಿಸುತ್ತದೆ. ಹಾಗಿದ್ದರೂ ಭದ್ರತೆಯು ದೊಡ್ಡ ಸವಾಲೇ ಆಗಿದೆ. ಜಮ್ಮು ಪ್ರದೇಶದಲ್ಲಿಯಂತೂ ಇತ್ತೀಚಿನ ದಿನಗಳಲ್ಲಿ ಭಯೋತ್ಪಾದನಾ ಚಟುವಟಿಕೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಚುನಾವಣಾ ಪ್ರಚಾರ ಮತ್ತು ಚುನಾವಣಾ ಪ್ರಕ್ರಿಯೆಗೆ ಅಡ್ಡಿ ಉಂಟುಮಾಡುವ ಪ್ರಯತ್ನಗಳು ನಡೆಯಬಹುದು. ಈ ಎಲ್ಲವುಗಳ ಕುರಿತು ಚುನಾವಣಾ ಆಯೋಗವು ಹೆಚ್ಚು ಜಾಗೃತವಾಗಿ ಇರಬೇಕು. ಜಮ್ಮು–ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ನೀಡಿಕೆ ಕುರಿತು ಒಂದೇ ಒಂದು ಮಾತು ಈವರೆಗೆ ಬಂದಿಲ್ಲ ಎಂಬುದೂ ಗಮನಾರ್ಹ.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸದಿರುವ ಚುನಾವಣಾ ಆಯೋಗದ ನಡೆಯು ಕೆಲವು ಅಹಿತಕರವಾದ ಪ್ರಶ್ನೆಗಳನ್ನು ಎತ್ತುತ್ತದೆ

ಹರಿಯಾಣ ವಿಧಾನಸಭೆಗೆ ಅಕ್ಟೋಬರ್ 1ರಂದು ಮತದಾನ ನಡೆಯಲಿದೆ. ಜಮ್ಮು–ಕಾಶ್ಮೀರ ಮತ್ತು ಹರಿಯಾಣದ ಚುನಾವಣಾ ಫಲಿತಾಂಶವು ಅಕ್ಟೋಬರ್ 4ರಂದು ಪ್ರಕಟವಾಗಲಿದೆ. ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಹರಿಯಾಣ ಮತ್ತು ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಮಹತ್ವ ಪಡೆದುಕೊಂಡಿದೆ. ಹರಿಯಾಣದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಮಹಾರಾಷ್ಟ್ರದ ಮೈತ್ರಿಕೂಟ ಸರ್ಕಾರದ ಚಾಲಕ ಸ್ಥಾನದಲ್ಲಿಯೂ ಬಿಜೆಪಿ ಇದೆ. ಆದರೆ ಲೋಕಸಭೆ ಚುನಾವಣೆಯಲ್ಲಿ ಈ ಎರಡೂ ರಾಜ್ಯಗಳಲ್ಲಿ ಬಿಜೆಪಿಗೆ ಹಿನ್ನಡೆ ಆಗಿದೆ. ಹಾಗಾಗಿ ಈ ರಾಜ್ಯಗಳ ವಿಧಾನಸಭೆ ಚುನಾವಣೆಯು ರಾಜಕೀಯವಾಗಿ ಆಸಕ್ತಿ ಕೆರಳಿಸಿದೆ. ಈ ಎರಡೂ ರಾಜ್ಯಗಳಲ್ಲಿ ಮಹಾ ವಿಕಾಸ್ ಆಘಾಡಿ ಮತ್ತು ಕಾಂಗ್ರೆಸ್ ಪಕ್ಷವು ಉತ್ತಮ ಸಾಧನೆ ಮಾಡಿವೆ. ಹಾಗಾಗಿಯೇ ಈ ರಾಜ್ಯಗಳ ಚುನಾವಣಾ ಫಲಿತಾಂಶವು ರಾಷ್ಟ್ರೀಯ ಮಹತ್ವ ಪಡೆದುಕೊಂಡಿದೆ.

ಕಳೆದ ಬಾರಿ, ಅಂದರೆ 2019ರಲ್ಲಿ ಹರಿಯಾಣ ಮತ್ತು ಮಹಾರಾಷ್ಟ್ರದಲ್ಲಿ ಜೊತೆಯಾಗಿಯೇ ಚುನಾವಣೆ ನಡೆದಿತ್ತು. ಆದರೆ, ಈ ಬಾರಿ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ವೇಳಾಪಟ್ಟಿಯನ್ನು ಆಯೋಗವು ಪ್ರಕಟಿಸಿಲ್ಲ. ಜಮ್ಮು–ಕಾಶ್ಮೀರ ಮತ್ತು ಹರಿಯಾಣದ ಚುನಾವಣೆಗೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕಿರುವುದರಿಂದ ಏಕಕಾಲಕ್ಕೆ ಒಂದು ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಮಾತ್ರ ಚುನಾವಣೆ ನಡೆಸಲು ಆಯೋಗವು ನಿರ್ಧರಿಸಿರಬಹುದು. ಜೊತೆಗೆ, ಮಹಾರಾಷ್ಟ್ರದಲ್ಲಿ ಜೋರಾಗಿ ಮಳೆ ಸುರಿಯುತ್ತಿದೆ ಹಾಗೂ ಹಲವು ಹಬ್ಬಗಳು ಇವೆ. ಇವು ಕೂಡ ಇತರ ಕಾರಣಗಳು ಆಗಿರಬಹುದು. ಆದರೆ, ಇವು ನಂಬಲರ್ಹವಾದ ಕಾರಣಗಳೇನೂ ಅಲ್ಲ. ಮಹಾರಾಷ್ಟ್ರವು ರಾಜಕೀಯವಾಗಿ ಹರಿಯಾಣಕ್ಕಿಂತ ಹೆಚ್ಚು ಮಹತ್ವವಾದುದು. ಹಾಗಾಗಿಯೇ ಆಯೋಗದ ನಿರ್ಧಾರವು ಅಹಿತಕರವಾದ ಪ್ರಶ್ನೆಗಳನ್ನು ಎತ್ತುತ್ತದೆ. ಪ್ರಧಾನಿಯವರಿಗೆ ಪ್ರಚಾರಕ್ಕೆ ಹೆಚ್ಚು ಸಮಯ ಸಿಗುವ ರೀತಿಯಲ್ಲಿ ಅಥವಾ ಸರ್ಕಾರವು ಹೆಚ್ಚು ಹೆಚ್ಚು ಯೋಜನೆಗಳನ್ನು ಘೋಷಿಸಲು ಅನುಕೂಲ ಆಗುವ ರೀತಿಯಲ್ಲಿ ಚುನಾವಣಾ ವೇಳಾಪಟ್ಟಿ ಸಿದ್ಧಪಡಿಸಿದೆ ಎಂಬ ಕಾರಣಕ್ಕೆ ಚುನಾವಣಾ ಆಯೋಗವು ಈ ಹಿಂದೆ ಟೀಕೆಗೆ ಒಳಗಾಗಿತ್ತು. ಮಹಾರಾಷ್ಟ್ರ ಸರ್ಕಾರವು ಹೊಸ ಹೊಸ ಯೋಜನೆಗಳನ್ನು ಘೋಷಿಸಲು ಅಥವಾ ಈಗಾಗಲೇ ಘೋಷಿಸಿರುವ ಯೋಜನೆಗಳನ್ನು ಸುಧಾರಿಸಲು ಚುನಾವಣೆ ಘೋಷಣೆಯಲ್ಲಿನ ವಿಳಂಬವು ಅವಕಾಶ ಕೊಟ್ಟಿದೆ ಎಂಬ ಟೀಕೆಗೆ ಈ ಬಾರಿಯೂ ಆಯೋಗವು ಗುರಿಯಾಗಬಹುದು. 'ಒಂದು ದೇಶ, ಒಂದು ಚುನಾವಣೆ' ದೇಶಕ್ಕೆ ಅಗತ್ಯವಾಗಿದೆ ಎಂದು ಪ್ರಧಾನಿಯವರು ಪ್ರತಿಪಾದನೆ ಮಾಡಿದ ಮೂರೇ ದಿನಕ್ಕೆ, ಒಂದು ಕೇಂದ್ರಾಡಳಿತ ಪ್ರದೇಶ ಮತ್ತು ಎರಡು ರಾಜ್ಯಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಆಯೋಗ ಹೇಳಿರುವುದು ವಿರೋಧಾಭಾಸಕರವಾಗಿದೆ.

ದಿನದ ಟ್ವೀಟ್

ವಾಹನ ಚಾಲನೆ: ಎಚ್ಚರವಿರಲಿ

ತಪ್ಪು ಮಾರ್ಗದಲ್ಲಿ ವಾಹನ ಚಲಾಯಿಸುವುದು ಅಪಾಯಕಾರಿ ನಡವಳಿಕೆ. ಈ ಸಂಬಂಧ 12 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದೆ. ಇದರಲ್ಲಿ ಬೆಂಗಳೂರು ನಗರ ಮುಂಚೂಣಿಯಲ್ಲಿದ್ದು, 51 ಎಫ್ಐಆರ್ ದಾಖಲಿಸಲಾಗಿದೆ. ಕ್ರಮಗಳನ್ನು ತೆಗೆದುಕೊಳ್ಳುವುದರಿಂದಷ್ಟೇ ಇಂತಹ ಉಲ್ಲಂಘನೆಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಚಾಲನೆಯ ಬಗೆಯಲ್ಲಿ ಅತ್ಯಗತ್ಯವಾಗಿ ಬದಲಾವಣೆ ಮಾಡಿಕೊಳ್ಳಬೇಕು.

ಅಲೋಕ್ ಕುಮಾರ್, ಎಡಿಜಿಪಿ, ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ

ಕಿಡಿನುಡಿ



ರಕ್ಷಾ ಬಂಧನ ಎನ್ನುವುದು ರಾಖಿ ಕಟ್ಟುವ ಸಹೋದರಿಯರ ಬಗ್ಗೆ ಕಾಳಜಿ ವಹಿಸುವ ಕುರಿತು ಸಹೋದರರು ಮಾಡುವ ಪ್ರತಿಜ್ಞೆ. ಹೀಗಿರುವಾಗ, ಎಲ್ಲರೂ ಎಲ್ಲರಿಗೂ ರಕ್ಷಾ ಬಂಧನದ ಶುಭಾಶಯ ಹೇಳುವುದೇಕೆ? ಕೆಲವು ರಾಜಕೀಯ ಪಕ್ಷಗಳು ರಕ್ಷಾ ಬಂಧನದ ಶುಭಾಶಯ ಕೋರುವ ಸಂದೇಶಗಳನ್ನು ಕಳುಹಿಸುವುದು ಹಾಸ್ಯಾಸ್ಪದವಾಗಿದೆ. ರಕ್ಷಾ ಬಂಧನ ಹೇಗೆ ನಡೆದುಬಂದಿದೆಯೋ ಹಾಗೇ ಇರಲಿ– ಸಹೋದರ, ಸಹೋದರಿಯ ನಡುವಿನ ಖಾಸಗಿ ಆಚರಣೆಯಾಗಿ. ಇದನ್ನು ನಗೆಪಾಟಲಾಗಿಸುವುದು ತಪ್ಪು.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಶುಕ್ರವಾರ, 20-8-1999

• 4 ಪಕ್ಷಗಳೊಂದಿಗೆ ಹೊಂದಾಣಿಕೆ

ಹಾಸನ, ಆ. 19– ಬಹುಜನ ಸಮಾಜ ಪಕ್ಷ, ಎಡಪಕ್ಷಗಳು ಹಾಗೂ ಮಹಾರಾಷ್ಟ್ರದಲ್ಲಿ ಶರದ್ ಪವಾರ್ ನೇತೃತ್ವದ ಕಾಂಗ್ರೆಸ್ ಪಕ್ಷ, ತಮಿಳುನಾಡಿನಲ್ಲಿ ತಮಿಳು ಮಾನಿಲ ಕಾಂಗ್ರೆಸ್ ಹೊರತುಪಡಿಸಿ, ಜನತಾದಳ (ಎಸ್) ಪಕ್ಷ ಬೇರಾವ ಪಕ್ಷಗಳೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಹಾಸನ ಲೋಕಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ ನಂತರ ಮಾತನಾಡಿದ ಅವರು, ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಿಂದ ಸಮಾನ ಅಂತರವನ್ನು ಕಾಪಾಡಿಕೊಳ್ಳಬೇಕು ಎಂದು ಕಳೆದ ಜುಲೈ 14ರಂದು ರಾಜ್ಯ ಕಾರ್ಯಕಾರಿಣಿ ಕೈಗೊಂಡ ನಿರ್ಣಯಕ್ಕೆ ಈಗಲೂ ತಮ್ಮ ಪಕ್ಷ ಕಟಿಬದ್ಧವಾಗಿದೆ ಎಂದು ಅವರು ನುಡಿದರು.

• ಅಮೇಥಿಯಿಂದಲೂ ಸೋನಿಯಾ ಸ್ಪರ್ಧೆ

ನವದೆಹಲಿ, ಆ. 19– ಬಳ್ಳಾರಿ ಲೋಕಸಭೆ ಕ್ಷೇತ್ರದಿಂದ ನಾಮಪತ್ರ ಸಲ್ಲಿಸುವಲ್ಲಿ ರಹಸ್ಯ ಕಾಯ್ದುಕೊಳ್ಳಲು ಹೋಗಿ ನಗೆಪಾಟಲಿಗೆ ಗುರಿಯಾದ ಕಾಂಗ್ರೆಸ್ ಪಕ್ಷ, ಸೋನಿಯಾ ಗಾಂಧಿ ಅವರು ಉತ್ತರ ಪ್ರದೇಶದ ಅಮೇಥಿ ಕ್ಷೇತ್ರದಿಂದಲೂ ಸ್ಪರ್ಧೆಗೆ ಇಳಿಯುವುದಾಗಿ ಅಧಿಕೃತವಾಗಿ ಪ್ರಕಟಿಸಿತು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಣಬ್ ಕುಮಾರ್ ಮುಖರ್ಜಿ ಈ ವಿಷಯವನ್ನು ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಅವರು ಮತ್ತೆ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಲಿದ್ದಾರೆ ಎಂಬ ವರದಿಗಾರರ ಪ್ರಶ್ನೆಗೆ, ಮತ್ತೆ ಬೇರಾವ ಕ್ಷೇತ್ರವೂ ಇಲ್ಲ. ಈಗಾಗಲೇ ಬಳ್ಳಾರಿಯಲ್ಲಿ ನಾಮಪತ್ರ ಸಲ್ಲಿಸಿದ್ದಾರಲ್ಲವೇ ಎಂದರು.

50 ವರ್ಷಗಳ ಹಿಂದೆ

ಮಂಗಳವಾರ, 20-8-1974

• ಕೃಷ್ಣಾ ನ್ಯಾಯಮಂಡಲಿ ಕಾರ್ಯಕಲಾಪ: ಕರ್ನಾಟಕದ ನಿರ್ಗಮನ

ನವದೆಹಲಿ, ಆ. 19– ಕೃಷ್ಣಾ ಜಲವಿವಾದ ಕುರಿತ ನ್ಯಾಯಮಂಡಲಿಯಿಂದ ತನಗೆ 'ನ್ಯಾಯಸಮ್ಮತ ಮತ್ತು ನಿಷ್ಪಕ್ಷಪಾತ ನಿರ್ಧಾರ' ಸಿಕ್ಕುವ ಸಂಭವವಿಲ್ಲವೆಂದು ಕರ್ನಾಟಕ ಸರ್ಕಾರ ಆರೋಪಿಸಿ ಇಂದು ನ್ಯಾಯಮಂಡಲಿಯ ಕಾರ್ಯಕಲಾಪಗಳಿಂದ ಹೊರಬಂದಿತು.

ನ್ಯಾಯಮಂಡಲಿಯ ಮುಂದಿನ ಕಾರ್ಯ-ಕಲಾಪಗಳಲ್ಲಿ ಭಾಗವಹಿಸದಿರಲೂ ಕರ್ನಾಟಕ ಸರ್ಕಾರ ಉದ್ದೇಶ ವ್ಯಕ್ತಪಡಿಸಿತು.

ರಾಜ್ಯದ ಅಡ್ವೊಕೇಟ್ ಜನರಲ್ ಆರ್.ಎನ್. ಬೈರಾರೆಡ್ಡಿ ಅವರು ನ್ಯಾಯಮಂಡಲಿ ಕಾರ್ಯಕಲಾಪಗಳಿಂದ ಹೊರಬರುವ ಬಗೆಗೆ ಒಂದು ಹೇಳಿಕೆ ನೀಡಿ, ಎಲ್ಲ ಅಪರಿಹಾರ್ಯ ಸಮಸ್ಯೆಗ-ಳನ್ನು ಕರ್ನಾಟಕಕ್ಕೆ ಬಾಧಕವಾಗುವಂತೆ 'ಪರಿಹರಿಸಲು ಅಥವಾ ಬಿಡಿಸಲು' ಪ್ರಯತ್ನಿ-ಸಲಾಗುತ್ತಿದೆಯೆಂದು ಆಪಾದಿಸಿ 'ಇದರಿಂದ ಕರ್ನಾಟಕಕ್ಕೆ ಭಾರಿ ಅನ್ಯಾಯವಾಗಿ ಅದರ ಹಿತಗಳಿಗೆ ಧಕ್ಕೆ ತಂದಿದೆ' ಎಂದರು.

ಸಮಕಾಲೀನ ರಾಜಕಾರಣದ ಅಮಲನ್ನು ರಾಷ್ಟ್ರಪ್ರಶಸ್ತಿಗಳ ಮೂಲಕ ಸಿನಿಮಾದಲ್ಲಿ ತರಲಾಗುತ್ತಿದೆಯೇ?

ಸಿನಿಮೀಯ ಪ್ರಶಸ್ತಿಗಳಿಗಿದು ಕಾಲ

ಪಡಸಾಲೆ

ರಘುನಾಥ ಚ.ಹ.

ಎಪ್ಪತ್ತನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಪಟ್ಟಿಯಲ್ಲಿ ಕನ್ನಡಕ್ಕೆ ಏಳು ಪ್ರಶಸ್ತಿಗಳು ದೊರೆತಿರುವುದು ಸಹಜವಾಗಿಯೇ ಸಾರ್ವಜನಿಕ ಉತ್ಸಾಹಕ್ಕೆ ಕಾರಣವಾಗಿದೆ. ಆದರೆ, ನಿಜವಾಗಿ ಸಂತಸ ಪಡಬೇಕಾದುದು ದೊರೆತಿರುವ ಪ್ರಶಸ್ತಿಗಳ ಬಗ್ಗೆಯಲ್ಲ; ಪ್ರಶಸ್ತಿ ಕಣದಲ್ಲಿದ್ದ ಕನ್ನಡ ಚಿತ್ರಗಳ ಗುಣಮಟ್ಟದ ಬಗ್ಗೆ. 'ಫೋಟೋ' (ನಿ: ಉತ್ಸವ್ ಗೋನವಾರ), 'ಪೆದ್ರೊ' (ನಿ: ನಟೇಶ ಹೆಗಡೆ), 'ಹದಿನೇಳೆಂಟು' (ನಿ: ಪೃಥ್ವಿ ಕೊಣನೂರು), 'ಕೋಳಿ ಎಸ್ರು' (ನಿ: ಚಂಪಾ ಶೆಟ್ಟಿ), 'ನಾನು ಕುಸುಮ' (ನಿ: ಕೃಷ್ಣೇಗೌಡ) – ಗುಣಮಟ್ಟದ ಇಷ್ಟೊಂದು ಸಿನಿಮಾಗಳು ಒಂದೇ ವರ್ಷ ಸ್ಪರ್ಧಾಕಣದಲ್ಲಿದ್ದ ಉದಾಹರಣೆ ಇತ್ತೀಚಿನ ವರ್ಷಗಳಲ್ಲಿ ಇಲ್ಲವೇ ಇಲ್ಲ ಎನ್ನಬೇಕು. ಇವುಗಳಲ್ಲಿ ಒಂದು ಸಿನಿಮಾ ಕೂಡ ಪ್ರಶಸ್ತಿ ಪಡೆದಿಲ್ಲ ಎನ್ನುವುದು ಚಿತ್ರರಸಿಕರ ದುಗುಡಕ್ಕೆ ಕಾರಣವಾಗಬೇಕು.

ನಟೇಶ ಹೆಗಡೆ ಹಾಗೂ ಪೃಥ್ವಿ ಕನ್ನಡ ಸಿನಿಮಾಕ್ಕೆ ಆಧುನಿಕತೆಯನ್ನೂ ಸಂಕೀರ್ಣತೆಯನ್ನೂ ದೊರಕಿಸಿಕೊಟ್ಟಿರುವ ಹೊಸ ನೀರು. ರಾಮ್ ರೆಡ್ಡಿ ನಿರ್ದೇಶನದ 'ತಿಥಿ'ಯ ನಂತರ ವಿಶ್ವದ ಗಮನಸೆಳೆದ ಕನ್ನಡ ಚಿತ್ರ, ನಟೇಶರ ಚೊಚ್ಚಿಲ ನಿರ್ದೇಶನದ 'ಪೆದ್ರೊ.' ಬೂಸಾನ್ ಸಿನಿಮೋತ್ಸವ, ಬಿಎಫ್ಐ ಲಂಡನ್ ಫೆಸ್ಟಿವಲ್ ಸೇರಿದಂತೆ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಸಹೃದಯರ ಮೆಚ್ಚುಗೆ ಪಡೆದಿರುವ 'ಪೆದ್ರೊ', ಈವರೆಗೆ ತೆರೆಕಂಡಿರುವ ಐದು ಸಾವಿರಕ್ಕೂ ಹೆಚ್ಚು ಕನ್ನಡ ಸಿನಿಮಾಗಳಲ್ಲಿ ಯಾವುದರೊಂದಿಗೂ ಸುಲಭ ಹೋಲಿಕೆಗೆ ನಿಲುಕದ ವಿಶ್ವದರ್ಜೆಯ ಚಲನಚಿತ್ರ. 'ರೈಲ್ವೆ ಚಿಲ್ಡ್ರನ್', 'ಪಿಂಕಿ ಎಲ್ಲಿ?' ಸಿನಿಮಾಗಳ ಪೃಥ್ವಿ ಕೊಣನೂರು ನಿರ್ದೇಶನದ 'ಹದಿನೇಳೆಂಟು' ನಿಜವಾದ ಅರ್ಥದಲ್ಲಿ ಆಧುನಿಕ ಸಿನಿಮಾ. ಬಿಕ್ಕಟ್ಟೊಂದನ್ನು ಕಪ್ಪು ಬಿಳುಪುಗೊಳಿಸದೆ, ಸಮಸ್ಯೆಗಿರಬಹುದಾದ ವಿವಿಧ ಆಯಾಮಗಳನ್ನು ಪರಿಶೀಲಿಸುವ ಸಾವಧಾನ ಹಾಗೂ ಪ್ರೌಢಿಮೆ ಪೃಥ್ವಿ ಅವರದು. ಕೊರೊನಾ ಕಾಲಘಟ್ಟದಲ್ಲಿ ವಲಸೆ ಕಾರ್ಮಿಕರು ಅನುಭವಿಸಿದ ಸಂಕಷ್ಟಗಳ ದಾಖಲಾತಿಯಂತಿರುವ ಉತ್ಸವ್ ಗೋನವಾರ ನಿರ್ದೇಶನದ 'ಫೋಟೋ' ಹೃದಯವುಳ್ಳ ಯಾರನ್ನೇ ಆದರೂ ವಿಚಲಿತಗೊಳಿಸುವ ಸಿನಿಮಾ; ತಾಂತ್ರಿಕವಾಗಿಯೂ ಉತ್ತಮವಾದುದು. ಸಿನಿಮಾ ಸೌಂದರ್ಯ ಮತ್ತು ವ್ಯಾಕರಣ, ಎರಡೂ ಕಾರಣಗಳಿಂದ ಗಮನ ಸೆಳೆಯುವ ಈ ಮೂರೂ ಸಿನಿಮಾಗಳು, ಕನ್ನಡದ ಹಿತ್ತಲಿನಲ್ಲಿ ಅರಳಿದ ವಿಶ್ವಸಿನಿಮಾಗಳು; ಕನ್ನಡಿಗರು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಕಲಾಕೃತಿಗಳು. ಚಂಪಾ ಶೆಟ್ಟಿ ಅವರ 'ಕೋಳಿ ಎಸ್ರು' ಹಾಗೂ ಕೃಷ್ಣೇಗೌಡರ 'ನಾನು ಕುಸುಮ' ಕೂಡ ಇತ್ತೀಚಿನ ವರ್ಷಗಳಲ್ಲಿ ಕನ್ನಡ ಚಿತ್ರರಂಗ ರೂಪಿಸಿದ ಒಳ್ಳೆಯ ಸಿನಿಮಾಗಳು. ವಿಷಾದದ ಸಂಗತಿಯೆಂದರೆ, ಈ ಪ್ರಯತ್ನಗಳಲ್ಲಿ ಒಂದಕ್ಕೂ ರಾಷ್ಟ್ರ ಪ್ರಶಸ್ತಿಯ ಮನ್ನಣೆ ದೊರೆತಿಲ್ಲ.

ಚಲನಚಿತ್ರ ರಾಷ್ಟ್ರೀಯ ಪ್ರಶಸ್ತಿಗಳ ಉದ್ದೇಶ ಮತ್ತು ಆಶಯ, ಸಿನಿಮಾ ಮಾಧ್ಯಮದಲ್ಲಿನ ವಿಭಿನ್ನ ಪ್ರಯತ್ನಗಳನ್ನು ಗುರ್ತಿಸಿ ಉತ್ತೇಜಿಸುವುದು. ಸಿನಿಮಾದ ಸೌಂದರ್ಯ ಹಾಗೂ ತಾಂತ್ರಿಕ ಉತ್ಕೃಷ್ಟತೆಯನ್ನು ಗುರ್ತಿಸುವುದು; ಸಾಮಾಜಿಕ ಪ್ರಸ್ತುತತೆಯನ್ನು ಒಳಗೊಂಡ ಸಿನಿಮಾ ನಿರ್ಮಾಣವನ್ನು ಉತ್ತೇಜಿಸುವುದು ರಾಷ್ಟ್ರಪ್ರಶಸ್ತಿಗಳ ಉದ್ದೇಶವಾಗಿದೆ. ದೇಶದ ಸಾಂಸ್ಕೃತಿಕ ವೈವಿಧ್ಯವನ್ನು ಒಳಗೊಂಡಿರುವ ಸಾಧ್ಯತೆ ಹಾಗೂ ದೇಶದ ಏಕತೆ ಮತ್ತು ಸಮಗ್ರತೆಗೆ ನೀಡುವ ಕೊಡುಗೆಯನ್ನು ಗುರ್ತಿಸುವ ಉದ್ದೇಶವೂ ರಾಷ್ಟ್ರಪ್ರಶಸ್ತಿಗಳಿಗಿದೆ. ಈ ಉದ್ದೇಶ ಮತ್ತು ಆಶಯಗಳನ್ನು, 2022ರ ಸಾಲಿನ ರಾಷ್ಟ್ರಪ್ರಶಸ್ತಿ ಪಟ್ಟಿಯಲ್ಲಿನ ಅನೇಕ ಆಯ್ಕೆಗಳು ಅಣಕಿಸುವಂತಿವೆ.

ಕನ್ನಡದ 'ಕಾಂತಾರ' ಚಿತ್ರವನ್ನು ಮನರಂಜನಾತ್ಮಕ ವಿಭಾಗದಲ್ಲೂ, 'ಕೆಜಿಎಫ್ 2' ಸಿನಿಮಾವನ್ನು ಪ್ರಾದೇಶಿಕ ಚಿತ್ರ ವಿಭಾಗದಲ್ಲೂ ಗುರ್ತಿಸಲಾಗಿದೆ. ಮನರಂಜನಾತ್ಮಕ ವಿಭಾಗದಲ್ಲಿ 'ಕಾಂತಾರ'ದ ಆಯ್ಕೆಗೆ ತರ್ಕದ ನೆಲೆಗಟ್ಟಾದರೂ ಇರಬಹುದು. ಪ್ರಾದೇಶಿಕತೆಯ ಹೆಸರಿನಲ್ಲಿ 'ಕೆಜಿಎಫ್ 2' ಸಿನಿಮಾವನ್ನು ಕನ್ನಡದ ಪ್ರಾತಿನಿಧಿಕ ಚಿತ್ರವಾಗಿ ಆಯ್ಕೆ ಮಾಡಿರುವುದರಲ್ಲಿ ತರ್ಕವೂ ಇಲ್ಲ, ಸದುದ್ದೇಶವೂ ಇಲ್ಲ. ಸಾಹಸ ಸಂಯೋಜನೆಗೆ ಸಂಬಂಧಿಸಿದಂತೆ 'ಕೆಜಿಎಫ್'ಗೆ ಪ್ರಶಸ್ತಿ ನೀಡಿರುವುದೇನೋ ಸರಿ. ಆದರೆ, ಕನ್ನಡ ಚಿತ್ರವೆಂದು ಬಿಂಬಿಸಿಕೊಳ್ಳುವುದಕ್ಕಿಂತಲೂ 'ಪ್ಯಾನ್ ಇಂಡಿಯಾ' ಎಂದು ಕರೆದುಕೊಳ್ಳುವುದರಲ್ಲೇ ಹೆಚ್ಚು ಉತ್ಸಾಹ ತೋರಿದ 'ಕೆಜಿಎಫ್'ನಲ್ಲಿ 'ಕನ್ನಡ ಸಿನಿಮಾ' ಎಂದು ಕರೆಸಿಕೊಳ್ಳುವ ಅಂಶಗಳು ಕ್ಷೀಣವಾಗಿವೆ. ಹಾಗಾಗಿ, ಆ ಚಿತ್ರವನ್ನು ಪ್ರಾದೇಶಿಕ ಚಿತ್ರ ವಿಭಾಗದಲ್ಲಿ ಗೌರವಿಸುವುದು ಉಳಿದ ಚಿತ್ರಗಳಿಗೆ ಮಾಡಿದ ಅನ್ಯಾಯವಾಗಿದೆ.

ಕನ್ನಡ ಮಾತ್ರವಲ್ಲ ಇತರೆ ಭಾಷೆಗಳ ಆಯ್ಕೆಯಲ್ಲೂ ಪ್ರಾದೇಶಿಕ ಅಸ್ಮಿತೆಗಿಂತಲೂ ವ್ಯಾಪಾರಿ ಅಂಶಗಳಿಗೆ ಆಯ್ಕೆ ಸಮಿತಿ ಒತ್ತುಕೊಟ್ಟಿದೆ. ಅತ್ಯುತ್ತಮ ಪ್ರಾದೇಶಿಕ ಚಿತ್ರಗಳಾಗಿ ಆಯ್ಕೆಯಾಗಿರುವ ತೆಲುಗಿನ 'ಕಾರ್ತಿಕೇಯ 2' ಹಾಗೂ ತಮಿಳಿನ 'ಪೊನ್ನಿಯಿನ್ ಸೆಲ್ವನ್' ಸಿದ್ಧಸೂತ್ರಗಳ ರಂಜನಾ ಪ್ರಧಾನ ಸಿನಿಮಾಗಳೇ ಹೊರತು, ಪ್ರಾದೇಶಿಕ ಅನನ್ಯತೆಯನ್ನು ಎತ್ತಿಹಿಡಿಯುವುದರಲ್ಲಿ ಅವುಗಳಿಗೆ ವಿಶೇಷ ಮಹತ್ವವಿಲ್ಲ.

ಈ ಬಾರಿ ಮಾತ್ರವಲ್ಲ, ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರಪ್ರಶಸ್ತಿ ಪಡೆದ ಸಿನಿಮಾಗಳನ್ನು ಗಮನಿಸಿದರೆ, ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನಗಳನ್ನು ನಿರ್ಲಕ್ಷಿಸಿ, ಮನರಂಜನಾತ್ಮಕ ಸಿನಿಮಾಗಳಿಗೆ ಒತ್ತು ನೀಡುತ್ತಿರುವುದು ಸ್ಪಷ್ಟವಾಗಿದೆ. ತಪ್ಪು ಆಯ್ಕೆಗಳ ಹಿಂದೆ ರಾಜಕೀಯ ಉದ್ದೇಶಗಳು ಇರುವುದು ಈಗ ಗುಟ್ಟಾಗಿ ಉಳಿದಿಲ್ಲ. ಈ ಮೊದಲು ಯಾವುದಾದರೂ ವಿಭಾಗದಲ್ಲಿ ಒಂದಾದರೂ ರಾಷ್ಟ್ರಪ್ರಶಸ್ತಿ ಪಡೆದ ಸಿನಿಮಾ ಮಂದಿಯನ್ನು ಆಯ್ಕೆ ಸಮಿತಿಯ ಜ್ಯೂರಿಗಳನ್ನಾಗಿ ಆರಿಸುವುದನ್ನು ಅಲಿಖಿತ ನಿಯಮದಂತೆ ಪಾಲಿಸಲಾಗುತ್ತಿತ್ತು. ಚಿತ್ರೋದ್ಯಮದ ಹೊರಗಿನವರು ಜ್ಯೂರಿಗಳಾದಾಗಲೂ ಅವರು ತಂತಮ್ಮ ಕ್ಷೇತ್ರಗಳಲ್ಲಿ ಹೆಸರು ಮಾಡಿದವರೇ ಆಗಿರುತ್ತಿದ್ದರು. ಆ ಪದ್ಧತಿಯೀಗ ಬದಲಾಗಿ, ಸಿನಿಮಾ ಮಾಧ್ಯಮದ ಕುರಿತ ತಿಳಿವಳಿಕೆಗಿಂತಲೂ ರಾಜಕೀಯ ಸಿದ್ಧಾಂತಗಳ ಒಲವು ನಿಲುವುಗಳೇ ಜ್ಯೂರಿಗಳ ಆಯ್ಕೆಯಲ್ಲಿ ಮುಖ್ಯವಾಗುತ್ತಿವೆ. ಈ ಬಾರಿಯ ಆಯ್ಕೆ ಸಮಿತಿಯ ಅಧ್ಯಕ್ಷರಾದ ರಾಹುಲ್ ರವೈಲ್ ಅವರು ಆಯ್ಕೆ ಸಮಿತಿಯನ್ನು ಮತ್ತೆ ಮತ್ತೆ ಮುನ್ನಡೆಸುತ್ತಿರುವುದೂ 'ಆಯ್ಕೆ ರಾಜಕಾರಣ'ದ ಭಾಗವಾಗಿರುವಂತಿದೆ.

'ಬಾಹುಬಲಿ', 'ಆರ್ಆರ್ಆರ್', 'ಕೆಜಿಎಫ್' ರೀತಿಯ ಮಾದರಿಗಳನ್ನು ಗುರ್ತಿಸುವುದಾದರೆ, 'ಪುಷ್ಪ' ಚಿತ್ರದಲ್ಲಿನ ನಟನೆಯನ್ನು ಅತ್ಯುತ್ತಮ ಎಂದು ಗುರ್ತಿಸುವುದಾದರೆ, ರಾಷ್ಟ್ರೀಯ ಪ್ರಶಸ್ತಿಗಳ ಮಾನದಂಡಗಳನ್ನು ಬದಲಿಸುವುದು ಅನಿವಾರ್ಯ. 'ಬಾಹುಬಲಿ', 'ಕೆಜಿಎಫ್'ನಂಥ ಸಿನಿಮಾಗಳು ಆರ್ಥಿಕವಾಗಿ ದೊಡ್ಡ ಯಶಸ್ಸು ಗಳಿಸಿರುವುದು ನಿಜ. ಈ ಸಿನಿಮಾಗಳು ಕಡಿಮೆ ಬಜೆಟ್‌ನಲ್ಲಿ ಅರ್ಥಪೂರ್ಣ ಸಿನಿಮಾ ರೂಪಿಸುತ್ತಿದ್ದ ಪರಂಪರೆಯೊಂದನ್ನು ಹಿನ್ನೆಲೆಗೆ ಸರಿಸಿ, ನೂರಾರು ಕೋಟಿ ರೂಪಾಯಿ ಸಿನಿಮಾಗಳಷ್ಟೇ ಇಂದಿನ ಟ್ರೆಂಡ್ ಎನ್ನುವ ಮಾದರಿಯೊಂದಕ್ಕೆ ಕಾರಣವಾಗಿರುವುದನ್ನು ಗಮನಿಸಬೇಕು. ಈಗ, ಪ್ರಶಸ್ತಿಗಳಿಗೂ ಕೈಹಾಕಿರುವ 'ತಿಮಿಂಗಿಲ ಸಿನಿಮಾ'ಗಳು, ಸೃಜನಶೀಲ ಸಾಧ್ಯತೆಯನ್ನಷ್ಟೇ ನೆಚ್ಚಿದ ಸಿನಿಮಾ ನಿರ್ಮಾತೃಗಳನ್ನೂ ನಾಶಗೊಳಿಸಲು ಹೊರಟಂತಿವೆ. ಸಿನಿಮಾದ ಕಲಾತ್ಮಕ ಆಯಾಮವನ್ನಷ್ಟೇ ನೆಚ್ಚಿಕೊಂಡವರು ಕೈಚೆಲ್ಲಿದ್ದಾರೆ; 'ಜನಮನ್ನಣೆಯೊಂದಿಗೆ ಪುರಸ್ಕಾರಗಳ ಗುರುತಿಸುವಿಕೆಯೂ ಇಲ್ಲದಿದ್ದ ಸಂದರ್ಭದಲ್ಲಿ ಸಿನಿಮಾ ಯಾಕೆ ಮಾಡಬೇಕು, ಯಾರಿಗೆ ಮಾಡಬೇಕು' ಎನ್ನುವ ಅವರ ಪ್ರಶ್ನೆಗೆ ಉತ್ತರಿಸುವವರು ಯಾರು?

ಈ ಬಾರಿ ಅತ್ಯುತ್ತಮ ಮನರಂಜನಾತ್ಮಕ ಪ್ರಶಸ್ತಿ ಪಡೆದ 'ಕಾಂತಾರ' ಚಿತ್ರದಲ್ಲಿನ ನಟನೆಗಾಗಿ 'ಅತ್ಯುತ್ತಮ ನಟ' ಪುರಸ್ಕಾರಕ್ಕೆ ಪಾತ್ರರಾಗಿರುವ ರಿಷಬ್ ಶೆಟ್ಟಿ ಅವರ ಇತ್ತೀಚಿನ ಪ್ರತಿಕ್ರಿಯೆ ಹೀಗಿದೆ: 'ಯಾವ ಯಾವುದೋ ದೇಶದಲ್ಲಿ ಪ್ರದರ್ಶನ ಕಂಡು ಪ್ರಶಸ್ತಿ ಪಡೆಯುವ ಸಿನಿಮಾಗಳಿಗೆ ನಮ್ಮಲ್ಲೇ ಗೌರವ ಇಲ್ಲ, ಪ್ರೇಕ್ಷಕರೂ ನೋಡುವುದಿಲ್ಲ. ಹಾಗಾಗಿ ನಾನಿನ್ನು ಫೆಸ್ಟಿವಲ್ ಟೈಪ್ ಸಿನಿಮಾ ಮಾಡಲ್ಲ.' 'ಪೆದ್ರೊ' ಸಿನಿಮಾದ ನಿರ್ಮಾಪಕರೂ ಆದ ರಿಷಬ್‌ರ ಮಾತುಗಳನ್ನು ರಾಷ್ಟ್ರಪ್ರಶಸ್ತಿಗಳ ಆಯ್ಕೆಯ ಕುರಿತ ಅವರ ಟೀಕೆಟಿಪ್ಪಣಿ ಎಂದು ಭಾವಿಸಬಹುದೆ?

ಅರ್ಥಪೂರ್ಣ ಸಿನಿಮಾಗಳ ನಿರ್ಮಾಣದಿಂದ ರಿಷಬ್ ಹಿಂದೆ ಸರಿಯುತ್ತಿರುವ ಹೊತ್ತಿಗೇ, ಹೇಗಾದರೂ ಜನರಿಗೆ ತಲುಪಿಸಬೇಕೆಂದು 'ರೈಲ್ವೆ ಚಿಲ್ಡ್ರನ್' ಹಾಗೂ 'ಹದಿನೇಳೆಂಟು' ಸಿನಿಮಾಗಳನ್ನು ಪೃಥ್ವಿ ಕೊಣನೂರು ಯುಟ್ಯೂಬ್‌ನಲ್ಲಿ ಬಿಡುಗಡೆ ಮಾಡಿದ್ದಾರೆ. ಚಿಂತನಶೀಲ ಸಿನಿಮಾಗಳು ಜನರಿಗೆ ಬೇಕಾಗಿಲ್ಲ ಎನ್ನುವ ಸ್ಥಿತಿಯನ್ನು ಮಾರುಕಟ್ಟೆ ಸೃಷ್ಟಿಸಿರುವ ಸಂದರ್ಭದಲ್ಲಿ ಪೃಥ್ವಿ ಅವರಂಥ ನಿರ್ದೇಶಕರಿಗೆ ಉಳಿದಿರುವ ಕೊನೆಯ ದಾರಿಯಿದು. ಮಾರುಕಟ್ಟೆಯ ಒಲವುಗಳನ್ನೇ ಪ್ರಶಸ್ತಿಗಳ ಮೂಲಕ ಸರ್ಕಾರವೂ ದೃಢೀಕರಿಸಲು ಹೊರಟಿದೆ. ಸಮಕಾಲೀನ ರಾಜಕಾರಣದ ಅಮಲು ಸಿನಿಮಾ ಮೂಲಕವೂ ಸಾಧ್ಯವಾಗುವುದಾದರೆ ಸರ್ಕಾರ ಬೇಡವೆಂದೀತೆ?

ಚುರುಮುರಿ

ಅರಣ್ಯ ನ್ಯಾಯ

• ಡಿ.ಎಸ್.ಲಿಂಗರಾಜು

'ಮಂಡೇದ ಮೆಡಿಕಲ್ ಕಾಲೇಜಲ್ಲಿ ಎಕ್ಸ್‌ಪೈರಾದ ಹಳೇ ಔಷಧಿಗಳನ್ನೆಲ್ಲಾ ಸ್ವಾಕು ಮಡೀಕಂದು ಅದುನ್ನೇ ಜನಿಗೆ ಚುಚ್ಚಿ ಚುಚ್ಚಿ ಯಮದೋರ ತಕ್ಕೆ ಬಿರ್ರನೆ ಕಳುಗುಸೋ ಪ್ಲಾನ್ ನಡೆದಿತ್ತಂತೆ?' ಚಂದ್ರು ಗಾಬರಿಯಾಗಿದ್ದ.

'ಅಲ್ಲ ಕಜಾ, ಹೆಣ್ಣುಟ್ಟದೆ ಅಂತ ಆಲೆಮನೇಲೇ ಕೊಂದು ಮಂಡೇದ ಮರ್ವಾದೆ ಮುಕ್ಕಾಗಂಗೆ ಮಾಡ್ಯವೆ. ಬಡ್ಡೆತ್ತವ್ಕೆ ಅವ್ವ ಬೇಕು, ಹೆಂಡ್ರು ಬೇಕು, ಸೊಸೆ ಬೇಕು ಮಗಳು ಬ್ಯಾಡವುಲಾ?' ಯಂಟಪ್ಪಣ್ಣ ನೊಂದ್ಕತ್ತು.

'ಅದೇನ್ ಕಂಡ್ರಿ. ಕಾರ್ಮಿಕರು ಮೆಹನತ್ತು ಮಾಡಿ ತುಂಗಭದ್ರ ಅಣೆಗೆ ಹೊಸ ಎಲಿಮೆಂಟುಗಳ ಜೋಡಿಸ್ಯವರಂತೆ. ಈಗಾಗ್ಲೇ ಕಡೆದೋಗಿರೋ 20 ಟಿಎಂಸಿ ಅಡಿ ಅಂದ್ರೆ 566 ಕೋಟಿ ಲೀಟರ್ ನೀರಿನ ಕಾಸನ್ನ ಅಲ್ಲಿ ಸೇರಿಕ್ಯಂದಿರೋ ಬ್ಯಾಡ್ ಎಲಿಮೆಂಟುಗಳ ಜೋಬಿಂದ ಲೀಟರಿಗೆ ಇಪ್ಪತ್ತು ರೂಪಾಯಿಯಂಗೆ ವಸೂಲು ಮಾಡಬೇಕು' ತುರೇಮಣೆ ರೂಲಿಂಗ್ ಕೊಟ್ಟರು.

'ಇಲ್ಲಿ ನೋಡ್ರಿ, ಕೆಆರ್‌ಎಸ್ಸಿಗೆ ಬಾಗಿನ ಕೊಟ್ವಾರಂತೆ. ಕೆಆರ್‌ಎಸ್ ಗೇಟು ಯಂಗದೆ ಅಂತ ಅಲ್ಲಿರೋ ಬ್ಯಾಡ್ ಎಲಿಮೆಂಟುಗಳು ನೋಡಿಕ್ಯಂದವ್ರೋ ಇಲ್ಲವ್ರೋ ಕಾಣ್ನಲ್ಲಾ?' ಅಂತಂದೆ ನಾನು.

'ಈ ಭಂಗ ಕೇಳ್ರಪ್ಪಾ. ಮೂಡರಬಲೆಗೆ ಹಳೇಹುಲಿ ಸಿದ್ದಣ್ಣ ಸಿಗೇ ಬಿದ್ದು ಕಗ್ಗಂಟಾಗ್ಯಾ-ದಂತೆ. ಯಂಗೆ ಬಚಾವಾದದೋ?' ಯಂಟಪ್ಪಣ್ಣ ಬೇಜಾರು ಮಾಡಿಕೊಂಡಿತು.

'ರಾಜಕಾರಣಿಗಳೇನಣ್ಣೆ, ಬಿದಿರ ಕೋಲು ಮುರಿದ್ರೂ ಕಾಣ್ದಂಗೆ ಬೆಸಗೆ ಹಾಕಿಬುಡ್ತರೆ' ಚಂದ್ರು ಸಿಟ್ಟಿಗೆ ಬಿದ್ದಿದ್ದ.

'ರಾಜಕೀಯ ಅರಣ್ಯ ನ್ಯಾಯದೇಲಿ ಇವೆಲ್ಲಾ ಕಾಮನ್ ಕಯ್ಯಾ ಚಂದ್ರು. ಬಲಿಷ್ಠರು ಅವರ ನಸುಗುನ್ನಿ ಆಟದೇಲಿ ನಮ್ಮ ಕುತ್ತಿಗೆ ಕೂದು ತಾವು ಮಜ ತಕ್ಕತರೆ. ಸತ್ತು ಬೇಯೋ ನಾವೇ ಕುರಿಗಳು. ನಮ್ಮನ್ನ ಕೇಳಿ ಯಾರೂ ಕಾರ ಅರೆಯಕುಲ್ಲ' ಅಂದ್ರು ತುರೇಮಣೆ.

'ರಾಜಕೀಯ ನಮ್ಮ ಕೆರದೊಳಗಿನ ಕಲ್ಲಿದ್ದಂಗೆ ಸಾ. ಮೆಟ್ಟಿಕಂದ ಮ್ಯಾಲೆ ಉಸುರುಯ್ಯದೇ ನೀಸಬೇಕು. ಇಷ್ಟೇ ನಮ್ಮ ಯೇಗ್ತೆ!' ಅಂದ ನನ್ನ ಮಾತಿಗೆ ಎಲ್ಲರೂ ತಲೆದೂಗಿದರು.

ಸಂಗತ

ಜನಪರ ಕೆಲಸ, ಜನಮನದ ಅರಸ

ಸಾಮಾಜಿಕ ಪರಿವರ್ತನೆಯ ಹರಿಕಾರ ಎನ್ನಿಸಿಕೊಂಡಿರುವ ದೇವರಾಜ ಅರಸು ಅವರ ಜನಪರ ಕೆಲಸಗಳನ್ನು ಬರೀ ಅಂಕಿಅಂಶಗಳಿಂದ ನೋಡದೆ, ಹೃದಯದ ಭಾಷೆಯಿಂದ ಓದಬೇಕು

• ಕೋಟ ಶ್ರೀನಿವಾಸ ಪೂಜಾರಿ

ರಾಜಕಾರಣ ಎಂಬ ಚದುರಂಗದಾಟದಲ್ಲಿ ಯಾರೂ ನಿರಂತರವಾಗಿ ಗೆಲ್ಲಲು ಸಾಧ್ಯವಿಲ್ಲ. ಹಿಂದೆ, ಇಂದು, ಮುಂದೂ ರಾಜಕಾರಣದ ತಂತ್ರ, ಪ್ರತಿತಂತ್ರ, ಏರಿಳಿತ, ಪರ, ವಿರೋಧ, ಸೋಲು, ಗೆಲುವೆಲ್ಲಾ ಜನತಂತ್ರ ವ್ಯವಸ್ಥೆಯ ಒಂದು ಭಾಗ. ಭೋರ್ಗರೆದು ಬರುವ ಕಡಲ ತೆರೆಯನ್ನು ಎದುರಿಸಿ ಈಜಿದರೆ, ಹೊಟ್ಟೆ ತುಂಬಾ ಉಪ್ಪು ನೀರು ಕುಡಿಯದೇ ಬೇರೆ ಮಾರ್ಗವಿಲ್ಲ.

ಇಂತಹ ದಿನಗಳಲ್ಲಿ ದೇವರಾಜ ಅರಸು ಎಂಬ 'ಕಲ್ಲಹಳ್ಳಿ ಪೈಲ್ವಾನ್' ರಾಜಕಾರಣದಲ್ಲಿ ಸೆಟೆದು ನಿಂತ ಪರಿ, ಸಡಿಲಿಸದ ಪಟ್ಟು, ಎದುರಾಳಿಯನ್ನು ಮಣ್ಣಿನ ಅಂಗಳದಲ್ಲಿ ಕೆಡವಿದ ಪರಿ, ಅವರು ತಂದ ಸಾಮಾಜಿಕ ಪರಿವರ್ತನೆ ಊಹಿಸಲು ಅಸಾಧ್ಯ.

ಅರಸು ಅವರ ಜನಪರ ಕೆಲಸಗಳನ್ನು ಬರೀ ಅಂಕಿ-ಅಂಶಗಳಿಂದ ನೋಡುವ ಬದಲು, ಹೃದಯದ ಭಾಷೆ ಯಿಂದ ಓದಬೇಕು. ರಾಜ್ಯದಲ್ಲಿ ಭೂ ಸುಧಾರಣೆ ಕಾಯ್ದೆ ಜಾರಿ ಮಾಡಿದ ಸಂದರ್ಭದಲ್ಲಿ, ಬಡ ಗೇಣಿದಾರರು ಮತ್ತು ಭೂಮಾಲೀಕರ ನಡುವೆ, ಕರುನಾಡಿನ ಇತಿಹಾಸದಲ್ಲೇ ಪ್ರಥಮ ಬಾರಿಗೆ ಸಂಘರ್ಷವೊಂದು ಏರ್ಪಟ್ಟಿತ್ತು. ಭೂಮಾಲೀಕರ ಸ್ಥಾನದಲ್ಲಿ ಗೇಣಿದಾರರನ್ನು, ಗೇಣಿದಾರರ ಸ್ಥಾನದಲ್ಲಿ ಭೂಮಾಲೀಕರನ್ನು ತಂದು ನಿಲ್ಲಿಸಿಬಿಟ್ಟಿತ್ತು. ಭಾರತದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಅನುಷ್ಠಾನಕ್ಕೆ ಕರ್ನಾಟಕವೇ ಪ್ರಯೋಗಶಾಲೆಯಾಯಿತು.

ಆಗ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಭೀಮಯ್ಯ, 'ದೇಶದ ಯಾವುದೇ ರಾಜ್ಯದಲ್ಲಿ ಕರ್ನಾಟಕದ ಮಾದರಿಯಲ್ಲೇನಾದರೂ ಭೂ ಸುಧಾರಣೆ ಜಾರಿಯಾಗಿದ್ದಿದ್ದರೆ ಅಂತಹ ಕಾನೂನು ತಂದ ಮಂತ್ರಿಗಳ ತಲೆಯೇ ಉರುಳುತ್ತಿತ್ತು' ಎಂದು ಉದ್ಗರಿಸಿದ್ದರು. ಭೂ ಸುಧಾರಣೆಯ ಮೂಲಕ ಬಡವರು ಮೊದಲ ಬಾರಿಗೆ ಅನ್ನವನ್ನು ಕೈತುಂಬ ಹಿಡಿದು ಉಂಡದ್ದು ಇದೇ ಅರಸು ಎಂಬ ಸ್ಥಿತಪ್ರಜ್ಞ ರಾಜಕಾರಣಿಯ ಆಡಳಿತದಲ್ಲಿ.

ರಾಜಕಾರಣದಲ್ಲಿ ಕಟ್ಟಿದ ಕೋಟೆ, ಸಾಮಾಜಿಕ ನ್ಯಾಯದ ಸ್ಪಷ್ಟತೆ, ಹಿಂದುಳಿದ ವರ್ಗಕ್ಕೆ ಮತ್ತು ದಲಿತರಿಗೆ ಕೊಟ್ಟಿರುವ ನೆರವು, ಋಣ ಪರಿಹಾರ ಕಾಯ್ದೆ, ಬಡವರ ಮನೆಗೆ ಭಾಗ್ಯಜ್ಯೋತಿ, ಬಸವಲಿಂಗಪ್ಪನವರ ಮೂಲಕ ತಂದ ಮಲ ಹೊರುವ ಪದ್ಧತಿ ನಿಷೇಧ ಇವೆಲ್ಲವೂ ಅರಸು ಅವರ ರಾಜಕಾರಣದ ತಳಹದಿಯನ್ನು ಗಟ್ಟಿಯಾಗಿಸಿದ್ದವು. ದುರದೃಷ್ಟಕ್ಕೆ ಇಂದಿರಾ ಗಾಂಧಿಯವರು ತಂದ ತುರ್ತುಪರಿಸ್ಥಿತಿಯ ಬೆಂಕಿ ಅರಸು ಅವರ ಸುತ್ತ ಕಾವು ಕೊಡದೇ ಬಿಡಲಿಲ್ಲ. ಈ ವೇಳೆ ದೇಶದೆಲ್ಲೆಡೆಯಂತೆ ರಾಜ್ಯದಲ್ಲೂ ಹಲವು ರಾಜಕಾರಣಿಗಳು, ಪತ್ರಕರ್ತರು ಬಂಧನಕ್ಕೆ ಒಳಗಾದರು. ಬರಹಗಾರರಾದ ಕುವೆಂಪು, ಶಿವರುದ್ರಪ್ಪ, ಶಿವರಾಮ ಕಾರಂತ, ಗೋಪಾಲಕೃಷ್ಣ ಅಡಿಗ, ಲಂಕೇಶ್, ಮಾಸ್ಟರ್ ಹಿರಣ್ಣಯ್ಯ ಅವರಂತಹ ಸಾಹಿತಿಗಳು, ಕಲಾವಿದರು, ಲೇಖಕರು ತುರ್ತು ಪರಿಸ್ಥಿತಿಯ ವಿರುದ್ಧ ಸೆಟೆದು ನಿಂತಿದ್ದರು. ಆದರೆ ಅವರ್‍ಯಾರನ್ನೂ ಅರಸು ಬಂಧಿಸದಿದ್ದುದು ಅಂದಿನ ಮಟ್ಟಿಗೆ ಸೋಜಿಗದ ಸಂಗತಿಯೇ ಹೌದು. ಹಾಗಿದ್ದರೆ ವಿರೋಧ ಪಕ್ಷದ ನಾಯಕರನ್ನು ಬಂಧಿಸಿದ್ದು ಯಾರು ಎಂಬ ಪ್ರಶ್ನೆಗೆ, ಅರಸು ಅವರ ಒಡನಾಡಿಗಳು ಕೇಂದ್ರದತ್ತ ಬೊಟ್ಟು ಮಾಡಿದ್ದರು. ಅರಸು ಅವರನ್ನು ಆಡಳಿತದಲ್ಲಿ ಕಹಿನೆನಪಾಗಿ ಕಾಡಿದ್ದು ಅಳಿಯ ನಟರಾಜ ಅವರಿಗೆ ಸಂಬಂಧಿಸಿದ ಪ್ರಕರಣ. ಆಯುರ್ವೇದ ಗಿಡಮೂಲಿಕೆ ಬೆಳೆಯಲು ತಮ್ಮ ಶಿಫಾರಸು ಬಳಸಿ ಭೂಮಿ ಮಂಜೂರು ಮಾಡಿಕೊಟ್ಟ ಸ್ವಜನಪಕ್ಷಪಾತದ ಆರೋಪ ಅವರನ್ನು ಅಸಹಾಯಕರನ್ನಾಗಿ ಮಾಡಿತ್ತು.

ಮುಖ್ಯಮಂತ್ರಿಯಾಗಿ ಅರಸು ಕ್ರಾಂತಿಕಾರಿ ಕೆಲಸವನ್ನೇ ಮಾಡಿದ್ದರೂ ಅಲ್ಲಲ್ಲಿ ವಿರೋಧವೂ ತಲೆ ಎತ್ತುತ್ತಿತ್ತು. ಅನಿವಾರ್ಯ ಕಾರಣಗಳಿಂದ ಅರಸು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕಾಗಿ ಬಂದಾಗ ಅವರು ಶಾಸಕರ ಸಭೆ ಕರೆದು, 'ಯಾರು ನನ್ನೊಟ್ಟಿಗೆ ಉಳಿಯಬೇಕೆಂದು ಯೋಚಿಸಿದ್ದೀರೋ ಅವರು ಉಳಿಯಬಹುದು. ಉಳಿದವರು ತಮ್ಮ ಭವಿಷ್ಯದ ದೃಷ್ಟಿಯಿಂದ ಬಿಟ್ಟು ಹೋಗಬಹುದು' ಎಂದು ಮೃದುವಾಗಿಯೇ ಹೇಳಿದ್ದರು. ಕರುನಾಡಿನ ರಾಜಕಾರಣವೆಂದರೆ ಅವಕಾಶವಾದಿತನ ಎಂಬುದು ಸಾಕ್ಷಾತ್ಕಾರವಾದ ಸಂದರ್ಭವದು.



ಸಣ್ಣಪುಟ್ಟ ಸಮುದಾಯಗಳನ್ನು ಹೆಕ್ಕಿ, ರಾಜಕಾರಣದ ಗಂಧ ಗಾಳಿಯನ್ನೇ ಅರಿಯದಿದ್ದ ಕಡುಬಡವರ ಮಕ್ಕಳನ್ನು ವಿಧಾನಸೌಧದ ಪಡಸಾಲೆಗೆ ತಂದು ಬಿಟ್ಟಿದ್ದವರು ದೇವರಾಜ ಅರಸು ಎಂಬ ಜಗಜಟ್ಟಿ ರಾಜಕಾರಣಿ. ಅಂತಹವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಡುತ್ತಲೇ, ಮುಳುಗುವ ಹಡಗಿನಿಂದ ಪ್ರಾಣ ಉಳಿಸಿಕೊಳ್ಳಲು ಹೊರಟ ಹೆಗ್ಗಣಗಳಂತೆ ದಡ ಸೇರಲೋಸುಗ ಅನೇಕ ಮಂದಿ ರಾಜಕಾರಣಿಗಳು ಅವರನ್ನು ಬಿಟ್ಟು ಹೊರಟಿದ್ದರು. ಅರಸು ಅವರ ಒಂದು ಮುಗುಳ್ನಗುವಿಗಾಗಿ ಕಾತರಿಸುತ್ತಿದ್ದವರೂ ಇವರಲ್ಲಿ ಸೇರಿದ್ದರು. 'ನೀವೇ ನಮ್ಮ ನಾಯಕ. ನೀವಲ್ಲದಿದ್ದರೆ ವಿಷ ಕುಡಿಯುತ್ತೇವೆ ಎಂದಿದ್ದವರೆಲ್ಲಾ ನಾನು ರಾಜೀನಾಮೆ ಕೊಟ್ಟ ಒಂದು ಗಂಟೆಯೊಳಗೇ ನನ್ನನ್ನು ಬಿಟ್ಟುಹೋದರಲ್ಲ' ಎಂದು ಅರಸು ನೊಂದು ಹೇಳಿದ್ದರು.

ಇಂದು (ಆ. 20) ಅರಸು ಅವರ ಜನ್ಮದಿನ. ವೈಚಾರಿಕವಾಗಿ ನಮಗೆಲ್ಲ ಅವರ ಬಗ್ಗೆ ಸಹಜವಾದ ಅಭಿಪ್ರಾಯಭೇದ ಇರಬಹುದು. ಆದರೆ, ದಿನದಿಂದ ದಿನಕ್ಕೆ ಹೌದಪ್ಪಗಳ ಚಾವಡಿ ಆಗುತ್ತಿರುವ ರಾಜಕಾರಣದಲ್ಲಿ, ಅಧಿಕಾರ ಇರಲಿ, ಹೋಗಲಿ ಬಡವರ ಬದುಕಿನಲ್ಲಿ ಬದಲಾವಣೆ ತರುತ್ತೇವೆ ಎಂಬ ನಿಷ್ಠುರ ನಿಲುವು ಹೊಂದಿರುವವರು ಕಡಿಮೆ. ಅರಸು ಮಾತ್ರ ಬಡವರ ಪಾಲಿಗೆ ಅನ್ನದಾತ. ನನ್ನ ಕುಟುಂಬವೂ ಸೇರಿ.

ಲೇಖಕ: ಲೋಕಸಭೆಯ ಬಿಜೆಪಿ ಸದಸ್ಯ

ವಾಚಕರ ವಾಣಿ

ಪೂಜೆ ಮಾತ್ರ ಪರಿಹಾರವಲ್ಲ

ಕನ್ನಡ ಚಿತ್ರರಂಗ ಎದುರಿಸುತ್ತಿರುವ ಎಲ್ಲಾ ಸಂಕಷ್ಟಗಳಿಂದ ಮುಕ್ತಿ ಕೋರಿ ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದಿಂದ ವಿಶೇಷ ಪೂಜೆ, ಹೋಮ, ಹವನ ಮಾಡಲಾಗಿದೆ. ಕಷ್ಟಗಳು ಬಂದಾಗ ದೇವರ ಮೊರೆ ಹೋಗುವುದು ತಪ್ಪಲ್ಲ. ಆದರೆ ಇಂದು ಕನ್ನಡ ಸಿನಿಮಾ ರಂಗದಲ್ಲಿ ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತದೆ. ಜೊತೆಗೆ ಹಳೆಯ ಸಿನಿಮಾಗಳಲ್ಲಿ ಚಿತ್ರಕಥೆ, ಸಂಗೀತ, ಸಾಹಿತ್ಯ ಹೆಚ್ಚು ಪ್ರಸ್ತುತವಾಗಿ, ಜನರ ಮನಸ್ಸಿಗೆ ನಾಟುವಂತೆ ಇರುತ್ತಿದ್ದವು. ಹಾಗೆಯೇ ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್‌ನಾಗ್ ಅವರಂತಹ ಅನೇಕ ನಾಯಕನಟರು ಹಣ ಸಂಪಾದನೆಗೆ ಮಾತ್ರ ಸಿನಿಮಾ ಮಾಡುತ್ತಿರಲಿಲ್ಲ. ಸಮಾಜದ ಕೆಲವು ಸಮಸ್ಯೆಗಳ ಬಗ್ಗೆ ಜನಜಾಗೃತಿಯನ್ನೂ ಉಂಟು ಮಾಡುತ್ತಿದ್ದರು. ಕವಿಗಳು, ಲೇಖಕರು, ಸಾಹಿತಿಗಳ ಪ್ರತಿಭೆಯನ್ನೂ ಚಿತ್ರಗಳು ಒಳಗೊಳ್ಳುತ್ತಿದ್ದವು. ಆದರೆ ಇಂದು ಅವೆಲ್ಲವೂ ಕಾಣೆಯಾಗಿವೆ.

ಒಂದು ಚಿತ್ರಕ್ಕೆ ಬೇಕಾದ ಕಥೆ, ನಟರು ಜನರೊಂದಿಗೆ ನಡೆದುಕೊಳ್ಳುವ ರೀತಿ, ಚಿತ್ರವು ಜನರಿಗೆ ನೀಡುವ ಉತ್ತಮ ಸಂದೇಶ ಎಲ್ಲವೂ ಮುಖ್ಯ. ಆಗಮಾತ್ರ ಚಿತ್ರ ಗೆಲ್ಲುತ್ತದೆ, ಚಿತ್ರರಂಗ ಬೆಳೆಯುತ್ತದೆ.

ಸುರೇಂದ್ರ ಪೈ, ಭಟ್ಕಳ

ದುಡಿಮೆಯ ಜೊತೆಗೆ ಸುಂದರ ಬದುಕಿದೆ

ನೌಕರರು ದಿನದ 14 ಗಂಟೆಗಳ ಕಾಲ ಕೆಲಸ ಮಾಡಬೇಕೆಂಬ ನಿಯಮವನ್ನು ಜಾರಿಗೆ ತರುವಂತೆ ಐ.ಟಿ. ಕಂಪನಿಯೊಂದು ನಮ್ಮ ಕಾರ್ಮಿಕ ಸಚಿವರು ಮತ್ತು ಸರ್ಕಾರವನ್ನು ವಿನಂತಿಸಿದೆ. ಅಂತಹ ನಿಯಮದಿಂದ ಸಮಾಜದ ಮೇಲೆ ಆಗುವ ಸಂಭಾವ್ಯ ನಕಾರಾತ್ಮಕ ಪರಿಣಾಮಗಳ ಬಗ್ಗೆ ಅವರಿಗೆ ಅರಿವಿದೆಯೇ? ದಿನದ 24 ಗಂಟೆಗಳಲ್ಲಿ 14 ಗಂಟೆಗಳ ಕಾಲ ವೃತ್ತಿ ಬದುಕಿನಲ್ಲೇ ಕಳೆದುಹೋದರೆ, ಇನ್ನುಳಿದ 10 ಗಂಟೆಯನ್ನು ನಿದ್ರೆ, ಕುಟುಂಬ, ಸ್ನೇಹಿತರು ಮತ್ತು ಸಾಮಾಜಿಕ ಜೀವನಕ್ಕೆ ಮೀಸಲಿಡಬೇಕಾಗುತ್ತದೆ. ಹಾಗಾದಾಗ ಈ ಎಲ್ಲಾ ಜವಾಬ್ದಾರಿಗಳನ್ನು ಸಮತೋಲನಗೊಳಿಸಲು ಹೇಗೆ ಸಾಧ್ಯ? ಈ ರೀತಿ ತೀವ್ರವಾಗಿ ಕೆಲಸದಲ್ಲಿ ತೊಡಗಿಸಿಕೊಳ್ಳುವ ನೌಕರ ತನ್ನ ವಯಸ್ಸಾದ ಪೋಷಕರಿಗೆ ಆರೈಕೆ ಮಾಡಲು ಸಾಧ್ಯವಾಗುವುದಿಲ್ಲ. ವಿಚ್ಛೇದನ ಮತ್ತು ಏಕಾಂಗಿ ಜೀವನ ಪ್ರವೃತ್ತಿ ಹೆಚ್ಚಾಗಿ ಬೆಳೆಯುತ್ತದೆ. ನಿದ್ರೆಯು ಆಹಾರದಂತೆಯೇ ಮಾನವರಿಗೆ ಮೂಲಭೂತ ಅವಶ್ಯಕತೆಯಾಗಿದೆ. ದಿನಕ್ಕೆ 6-7 ಗಂಟೆಗಳಷ್ಟೂ ನಿದ್ದೆಯಿಲ್ಲದೆ ಆರೋಗ್ಯ ಹದಗೆಡುತ್ತದೆ.

ಪೋಷಕರು ತಮ್ಮ ಮಕ್ಕಳೊಂದಿಗೆ ಸಮಯ ಕಳೆಯಲು ಸಾಧ್ಯವಾಗದ ಕಾರಣ ಮಕ್ಕಳು ಮೊಬೈಲ್, ಟಿ.ವಿ.ಗಳ ದಾಸರಾಗಿ, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಾರೆ. ಮಾನಸಿಕ ಶಾಂತಿಯನ್ನು ಅರಸುತ್ತಾ ಅನೇಕರು ವಾರಾಂತ್ಯದಲ್ಲಿ ಅತಿಯಾದ ಮೋಜು ಮಸ್ತಿಯ ಮೊರೆ ಹೋಗುತ್ತಾರೆ. ನಿಜವಾದ ಜೀವನದ ಅನುಭವಕ್ಕಿಂತ ಭೌತಿಕ ಆಸ್ತಿಯನ್ನು ಮೌಲ್ಯೀಕರಿಸುವ ಸಮಾಜದಲ್ಲಿ, ನಾನು ಗಳಿಸಿದ್ದು ಇಷ್ಟು, ಅವನು ಗಳಿಸಿದ್ದು ಇಷ್ಟು ಅನ್ನುವ ಲೆಕ್ಕಾಚಾರವೇ ಪ್ರಮುಖವಾಗುತ್ತದೆ. ಇದರಿಂದ ಬದುಕಿನ ನಿಜವಾದ ಅನುಭವವನ್ನೇ ಕಳೆದುಕೊಂಡು, ಈ ಚಿಕ್ಕ ಜೀವನ ಪ್ರಯಾಣದ ಅಂತ್ಯವನ್ನು ತಲುಪಬೇಕಾಗುತ್ತದೆ.

ನಂದೀಶ್ ಎಂ.ಗೌಡ, ಮಂಡ್ಯಕೊಪ್ಪಲು

ಮತಹಬ್ಬ

ಕಾಶ್ಮೀರ ಕಣಿವೆಯ ಮತಹಬ್ಬ
ಆಗಲಿ ಜನಮನದ ಹಬ್ಬ,
ತಂಪುನಾಡಿನ ಜನರ
ಬದುಕು ತಂಪಾಗಲಿ,
ಪ್ರಗತಿಯಲಿ ಕಾಶ್ಮೀರ
ಭಾರತಾಂಬೆಯ ಮುಕುಟವಾಗಲಿ

ನೀ.ಗೂ.ರಮೇಶ್
ಮೈಸೂರು

ಭಾಷೆ ಕಲಿಕೆ: ಅಂಧ ವ್ಯಾಮೋಹ ಸಲ್ಲ

ಸಂಸ್ಕೃತ ಭಾಷಾ ಪರಂಪರೆಯ ಇತಿಹಾಸವನ್ನು ಬಿ.ಎಸ್.ಭಗವಾನ್ ತಮ್ಮ ಲೇಖನದಲ್ಲಿ (ಸಂಗತ, ಆ. 19) ವಿವರಿಸಿದ್ದಾರೆ. ಸರಿಯೇ. ಆದರೆ ಸಂಸ್ಕೃತ ಇಂದು ಜನತಾ ಭಾಷೆಯಾಗಿ ಉಳಿದಿಲ್ಲ. ಆದರೂ ಒಂದು ಭಾಷೆಯನ್ನಾಗಿ ಸಂಸ್ಕೃತ ಭಾಷೆಯನ್ನು ಕಲಿಯಲು ಯಾರ ಅಡ್ಡಿ ಆತಂಕವೂ ಇಲ್ಲ. ಆದರೆ ಅದರಿಂದಾಗಿ ನಮ್ಮ ಜೀವನ ನಿರ್ವಹಣೆ ಸಾಧ್ಯವೇ ಎಂಬುದು ಇಂದಿನ ಬಹಳ ಮುಖ್ಯ ಪ್ರಶ್ನೆ.

ಇಂದು ಜಾಗತೀಕರಣದಿಂದಾಗಿ ಜಾಗತಿಕ ಸಂಪರ್ಕ ಮತ್ತು ಸಂವಹನ ಬಹಳ ಮುಖ್ಯವಾಗುತ್ತಿವೆ. ಹೀಗಾಗಿ, ಅಲ್ಲಿ ನಮಗೆ ಸಂಸ್ಕೃತಕ್ಕಿಂತ ಇಂಗ್ಲಿಷ್ ಕಲಿಕೆ ಅನಿವಾರ್ಯ. ಇಂಗ್ಲಿಷ್ ಕಲಿಕೆ ಬಗ್ಗೆಯೂ ಒಂದು ಅಂಧ ವ್ಯಾಮೋಹ ಉಂಟಾದ್ದರಿಂದ ನಮ್ಮ ಬಹುಪಾಲು ಮಾತೃಭಾಷೆಗಳೇ ಅಳಿವಿನಂಚಿಗೆ ಬಂದಿವೆ. ಇದು ನಾವೆಲ್ಲ ಅರಿಯಬೇಕಿರುವ ಸದ್ಯದ ಅಪಾಯ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅತ್ಯಾಚಾರದಂಥ ವಿಷಯದಲ್ಲೂ ರಾಜಕೀಯವೇ?

'ಅತ್ಯಾಚಾರಿಗಳ ಅಟ್ಟಹಾಸ ಮೇರೆಮೀರಿದೆ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಹೇಳಿಕೆ (ಪ್ರ.ವಾ., ಆ. 19) ಓದಿ ಆಶ್ಚರ್ಯವಾಯಿತು. ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಅತ್ಯಾಚಾರ ಕುರಿತು ಹೇಳಿಕೆ ನೀಡುವಾಗ ಯಾರೇ ಆದರೂ ಜಾಗ್ರತೆ ವಹಿಸಿ ಸಂಯಮದಿಂದ ಗಂಭೀರ ಹೇಳಿಕೆ ನೀಡಬೇಕು. ಇಂತಹ ವಿಷಯಗಳಲ್ಲೂ ರಾಜಕೀಯ ಲೇಪಿತ ಹೇಳಿಕೆ ಸಲ್ಲದು. ಹೌದು, ಮಹಿಳೆಯರ ಮೇಲಿನ ಯಾವುದೇ ಬಗೆಯ ದೌರ್ಜನ್ಯವನ್ನು ಎಲ್ಲರೂ ಖಂಡಿಸಬೇಕು. ಅಂತಹ ಕೃತ್ಯಗಳನ್ನು ತಡೆಯಲು ಎಚ್ಚರ ವಹಿಸಬೇಕು. ಯಾವ ಪಕ್ಷದ ನೇತೃತ್ವದ ಸರ್ಕಾರದ ಅವಧಿಯಲ್ಲೂ ಇಂತಹವು ನಡೆಯದಂತೆ ನೋಡಿಕೊಳ್ಳಬೇಕಿದೆ. ಸಾರ್ವಜನಿಕರು, ಪೋಷಕರು ಹಾಗೂ ಸಂಘ–ಸಂಸ್ಥೆಗಳು ಪೊಲೀಸರ ಜೊತೆ ಸಹಕರಿಸಬೇಕು. ಜೊತೆಗೆ ಮಹಿಳೆಯರು ಹಾಗೂ ಯುವಸಮೂಹವು ಸರ್ಕಾರ ಮತ್ತು ಪೋಷಕರ ಮಾರ್ಗದರ್ಶನವನ್ನು ಪಾಲಿಸಬೇಕು. ಆಗ ಇಂತಹ ಅಹಿತಕರ ಘಟನೆಗಳನ್ನು ತಡೆಯಲು ಸಾಧ್ಯ.

ಸ್ವೇಚ್ಛಾಚಾರದ ಜೀವನಶೈಲಿ ಯಾವತ್ತೂ ಅಪಾಯಕಾರಿ. ಖಂಡಿತ ನಾವು ರಾಮರಾಜ್ಯದಲ್ಲಿ ವಾಸಿಸುತ್ತಿಲ್ಲ ಎಂಬ ಅರಿವು ಯುವಜನರಿಗೆ ಇರಬೇಕು. ಅಪಾಯ ಆಹ್ವಾನಿಸುವ ದುಸ್ಸಾಹಸ ಯಾರಿಂದಲೂ ಔಚಿತ್ಯವಲ್ಲ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೆಚ್ಚಿದ ಲೈಂಗಿಕ ದೌರ್ಜನ್ಯ, ಶಿಕ್ಷೆಯಾದ ಪ್ರಮಾಣ ಕಡಿಮೆ

ಅತ್ಯಾಚಾರಿಗಳಿಗೆ ‘ನಿರ್ಭಯ’

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಿರ್ಭಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣ ವರದಿಯಾದಾಗ ದೇಶದಲ್ಲಿ ವ್ಯಾಪಕ ಪ್ರತಿಭಟನೆ, ಆಕ್ರೋಶ ವ್ಯಕ್ತವಾಗಿತ್ತು. ಅದು ಕಾನೂನು ತಿದ್ದುಪಡಿಗೂ ಕಾರಣವಾಗಿತ್ತು. ಆದರೆ, ಅದರ ನಂತರ ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿವೆ. ಕಾನೂನು ಕಟ್ಟಳೆ ಬಿಗಿಗೊಳಿಸಿದರೂ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿರುವ ಪ್ರಮಾಣ ಕಡಿಮೆ ಇದೆ. ಅತ್ಯಾಚಾರದ ಹೆಸರಿನಲ್ಲಿ ಹೆಣ್ಣಿನ ಘನತೆ, ಮಾನ, ಪ್ರಾಣದ ಮೇಲೆ ದಾಳಿ ಮಾಡುವ ಪ್ರವೃತ್ತಿ ಹೆಚ್ಚಳವಾಗಿದೆ

ಅತ್ಯಾಚಾರ ಪ್ರಕರಣ ಯಾವ ವರ್ಷ, ಎಷ್ಟು?



25 ಸಾವಿರಕ್ಕೂ ಕಡಿಮೆ
2012ಕ್ಕೂ ಮೊದಲು ದೇಶದಲ್ಲಿ ದಾಖಲಾಗುತ್ತಿದ್ದ ಅತ್ಯಾಚಾರ ಪ್ರಕರಣಗಳು

30 ಸಾವಿರಕ್ಕೂ ಹೆಚ್ಚು
ನಿರ್ಭಯಾ ಪ್ರಕರಣದ ನಂತರ ವರದಿಯಾದ ಅತ್ಯಾಚಾರ ಪ್ರಕರಣಗಳು

29.25%
2013ರಿಂದ 2022ರವರೆಗೆ ಭಾರತದಲ್ಲಿ ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಮಾಣ

ಪ್ರಜಾವಾಣಿ ವಾರ್ತೆ

ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಮತ್ತು ಕೊಲೆಯ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಯುತ್ತಿದ್ದು, ಭಾರಿ ಆಕ್ರೋಶಕ್ಕೆ ಕಾರಣವಾಗಿದೆ. ಈ ಪ್ರಕರಣವು ಮಹಿಳೆಯರ ಸುರಕ್ಷತೆ ಮತ್ತು ಘನತೆಯ ಬಗ್ಗೆ ಗಂಭೀರವಾದ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ನಿರ್ಭಯಾ ಪ್ರಕರಣದ ನಂತರ ಮಹಿಳೆಯರ ಸುರಕ್ಷತೆಗಾಗಿ ಕೇಂದ್ರ ಸರ್ಕಾರ ಬಿಗಿ ಕಾನೂನು ಜಾರಿಗೆ ತಂದಿದ್ದರೂ, ನಿರ್ಭಯಾ ನಿಧಿ ಸ್ಥಾಪನೆಯಂತಹ ಕ್ರಮಗಳನ್ನು ಕೈಗೊಂಡಿದ್ದರೂ ಮಹಿಳೆಯರ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಮಹಿಳೆಯರ ವಿರುದ್ಧ ಹೀನ ಅಪರಾಧ ಎಸಗುತ್ತಿರುವವರಿಗೆ ಎಷ್ಟರ ಮಟ್ಟಿಗೆ ಶಿಕ್ಷೆ ಆಗುತ್ತಿದೆ ಎಂಬ ಬಗ್ಗೆಯೂ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ.

ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಕಿರಿಯ ವೈದ್ಯರು ಕೋಲ್ಕತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯದಂಥ ಕೃತ್ಯಗಳನ್ನು ಎಸಗುವವರಿಗೆ ಶಿಕ್ಷೆ ವಿಧಿಸುವ ದಿಸೆಯಲ್ಲಿ ನಿರ್ಭಯಾ ಕಾಯ್ದೆ ಬಹಳ ಮಹತ್ವದ್ದು. 2012ರಲ್ಲಿ ದೆಹಲಿಯಲ್ಲಿ ಚಲಿಸುತ್ತಿದ್ದ ಬಸ್‌ನಲ್ಲಿ ಆರು ಮಂದಿ ಅಪರಾಧಿಗಳು ಅರೆ ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿ, ಹತ್ಯೆ ಮಾಡಿದ್ದರು. ವಿದ್ಯಾರ್ಥಿನಿಯ ಜೊತೆಯಲ್ಲಿದ್ದ ಸ್ನೇಹಿತನ ಮೇಲೆಯೂ ಹಲ್ಲೆ ನಡೆಸಿ, ನಂತರ ಇಬ್ಬರನ್ನೂ ರಸ್ತೆಗೆ ಬಿಸಾಡಿದ್ದರು. ಅದರ ಬಗ್ಗೆ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಅತ್ಯಾಚಾರಿಗಳ ಕ್ರೂರ ವರ್ತನೆಗೆ ತಕ್ಕಂತೆಯೇ ಶಿಕ್ಷೆಯೂ ಕಠಿಣವಾಗಿರಬೇಕು ಎಂಬ ಕೂಗು ಕೇಳಿಬಂದಿತ್ತು. ತ್ವರಿತಗತಿಯಲ್ಲಿ ಪ್ರಕರಣದ ವಿಚಾರಣೆ ನಡೆಸಿ ಅತ್ಯಾಚಾರಿಗಳ ಪೈಕಿ ನಾಲ್ವರಿಗೆ ಮರಣ ದಂಡನೆ ವಿಧಿಸಲಾಗಿತ್ತು. ಅಷ್ಟು ಹೊತ್ತಿಗೆ ಒಬ್ಬ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ. ಉಳಿದವರಿಗೆ ವಿಧಿಸಿದ್ದ ಶಿಕ್ಷೆ, ಘಟನೆ ನಡೆದ ಎಂಟು ವರ್ಷಗಳ ಬಳಿಕ, ಜಾರಿಯಾಗಿತ್ತು. ಅತ್ಯಾಚಾರಿಗಳ ಪೈಕಿ ಬಾಲಕನೊಬ್ಬನೂ ಇದ್ದ. ನ್ಯಾಯಾಲಯವು ಅವನಿಗೆ ಕೇವಲ 3 ವರ್ಷ ಶಿಕ್ಷೆ ವಿಧಿಸಿದ್ದರ ವಿರುದ್ಧವೂ ಆಕ್ಷೇಪಣೆ ವ್ಯಕ್ತವಾಗಿತ್ತು. ಕಾನೂನಿಗೆ ತಿದ್ದುಪಡಿ ತರುವ ಸಂಬಂಧ ಕೇಂದ್ರ ಸರ್ಕಾರವು ನ್ಯಾ.ಜೆ.ಎಸ್.ವರ್ಮಾ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿ ನೇಮಿಸಿತ್ತು.

ಕೇಂದ್ರ ಸರ್ಕಾರವು ನಿರ್ಭಯಾ ಪ್ರಕರಣದ ವೇಳೆ ವ್ಯಕ್ತವಾದ ಸಾರ್ವಜನಿಕ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು, ನ್ಯಾ. ವರ್ಮಾ ಸಮಿತಿಯ ಶಿಫಾರಸುಗಳ ಅನ್ವಯ ಅತ್ಯಾಚಾರ ಸೇರಿದಂತೆ ಮಹಿಳೆಯರ ವಿರುದ್ಧದ ಲೈಂಗಿಕ ದೌರ್ಜನ್ಯದ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ತಂದಿತು. ಭಾರತೀಯ ದಂಡ ಸಂಹಿತೆಯ (ಐಪಿಸಿ) 375, 376 ಸೆಕ್ಷನ್‌ಗಳಿಗೆ ತಿದ್ದುಪಡಿ ತರಲಾಗಿತ್ತು. ಜತೆಗೆ, 166ಎ, 166ಬಿ, 326 ಎ ಮತ್ತು ಬಿ, 354ಎ, ಸಿ ಮತ್ತು ಡಿ ಸೆಕ್ಷನ್‌ಗಳನ್ನು ಹೊಸದಾಗಿ ಸೇರಿಸಲಾಗಿತ್ತು. ಅದು ನಿರ್ಭಯಾ ಕಾಯ್ದೆ ಎಂದೇ ಹೆಸರು ಪಡೆಯಿತು. ಬಾಲಾಪರಾಧ ಕಾಯ್ದೆಗೂ ತಿದ್ದುಪಡಿ ತಂದು, ಹೀನ ಕೃತ್ಯ ಎಸಗಿದ ಆರೋಪಿಯು 16ರಿಂದ 18 ವರ್ಷದ ಒಳಗಿದ್ದರೆ, ಅವನನ್ನೂ ಕೂಡ ವಯಸ್ಕ ಮತ್ತು ಶಿಕ್ಷೆಗೆ ಅರ್ಹ ಎಂದು ಪರಿಗಣಿಸಲಾಗುವುದು (ಜೆ.ಜೆ.ಕಾಯ್ದೆ) ಎಂದು ಬದಲಾಯಿಸಲಾಯಿತು.

ಆದರೆ, ನಂತರವೂ ಲೈಂಗಿಕ ದೌರ್ಜನ್ಯ ಪ್ರಕರಣಗಳು ಸೇರಿದಂತೆ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗಿವೆ. ಅವುಗಳಲ್ಲಿ ಅತ್ಯಾಚಾರ ಪ್ರಕರಣಗಳು ಗಮನಾರ್ಹವಾಗಿ ಏರಿಕೆ ಕಂಡಿವೆ. ಅದರಲ್ಲೂ ಬಾಲಕಿಯರು, ಪುಟ್ಟ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ಏರಿಕೆಯಾಗಿವೆ. ಬಹುತೇಕ ಪ್ರಕರಣಗಳು ಪರಿಚಿತರಿಂದಲೇ ನಡೆಯುತ್ತಿವೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಅತಿ ಹೆಚ್ಚು ಅತ್ಯಾಚಾರಗಳು ವರದಿಯಾಗುತ್ತಿವೆ.

ಶಿಕ್ಷೆಯಾದ ಪ್ರಮಾಣ ಕಡಿಮೆ: ಒಂದು ಕಡೆ, ದೇಶದಲ್ಲಿ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದರೆ, ಮತ್ತೊಂದು ಕಡೆ, ಆರೋಪಿಗಳಿಗೆ ಶಿಕ್ಷೆಯಾಗುತ್ತಿರುವ ಪ್ರಮಾಣ ಅತ್ಯಂತ ಕಡಿಮೆ ಇದೆ. ಜಾಗತಿಕ ಮಟ್ಟದಲ್ಲಿ ಅತ್ಯಾಚಾರಿಗಳಿಗೆ ಶಿಕ್ಷೆಯಾಗುತ್ತಿರುವ ಪ್ರಮಾಣ ಭಾರತದಲ್ಲಿಯೇ ಕಡಿಮೆ ಇದೆ. 2013ರಿಂದ 2022ರ ನಡುವೆ ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಮಾಣ ಶೇ 29.25ರಷ್ಟು ಮಾತ್ರ.

ತಪ್ಪಿತಸ್ಥರಿಗೆ ಶಿಕ್ಷೆ ನೀಡುವುದಕ್ಕೆ ಹೆಚ್ಚು ಗಮನ ಕೊಡಲಾಗುತ್ತಿದೆಯೇ ವಿನಾ ಅತ್ಯಾಚಾರ ನಡೆಯುವುದಕ್ಕೆ ಕಾರಣವಾಗುವಂಥ ಸಂದರ್ಭಗಳು, ಅಂಶಗಳು ಹಾಗೂ ಅಪರಾಧ ಎಸಗುವವರ ಮನಃಸ್ಥಿತಿಯ ಬದಲಾವಣೆಗೆ ಹೆಚ್ಚು ಒತ್ತು ನೀಡಲಾಗುತ್ತಿಲ್ಲ. ಈ ಕಾರಣಕ್ಕಾಗಿ ಪ್ರಕರಣಗಳು ಕಡಿಮೆ ಆಗಿಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ.

ನಿರ್ಭಯಾ ನಿಧಿ ಶೇ 75ರಷ್ಟು ಬಳಕೆ

ನಿರ್ಭಯಾ ಪ್ರಕರಣದ ನಂತರ, ದೇಶದಲ್ಲಿ ಮಹಿಳೆಯರ ಸುರಕ್ಷತೆ ಮತ್ತು ಅವರಿಗೆ ಭದ್ರತೆ ಒದಗಿಸಲು ಪೂರಕವಾದ ಕ್ರಮಗಳು, ಮೂಲಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಕೇಂದ್ರ ಸರ್ಕಾರ 2013ರಲ್ಲಿ ನಿರ್ಭಯಾ ನಿಧಿಯನ್ನು ಸ್ಥಾಪಿಸಿತ್ತು. ಆದರೆ, ಕೇಂದ್ರದ ಈ ಪ್ರಯತ್ನ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಕಡಿವಾಣ ಹಾಕುವುದರಲ್ಲಿ ಯಶಸ್ವಿಯಾದಂತೆ ಕಾಣುತ್ತಿಲ್ಲ.

ಇದರ ಅಡಿಯಲ್ಲಿ ಕೇಂದ್ರ ಸರ್ಕಾರವು ವಿವಿಧ ಇಲಾಖೆಗಳಿಗೆ, ರಾಜ್ಯಗಳಿಗೆ, ಅವುಗಳು ಮುಂದಿಡುವ ಪ್ರಸ್ತಾವಗಳ ಆಧಾರದಲ್ಲಿ ಅನುದಾನ ಬಿಡುಗಡೆ ಮಾಡುತ್ತದೆ. ನಿಧಿ ಆರಂಭವಾದಾಗಿನಿಂದ 2023–24ರವರೆಗೆ ನಿಧಿಗೆ ಮೀಸಲಿಟ್ಟ ಹಣದಲ್ಲಿ ಶೇ 75ರಷ್ಟು ಹಣವನ್ನು ಕೇಂದ್ರ ಸರ್ಕಾರ ಸಚಿವಾಲಯಗಳಿಗೆ ಬಿಡುಗಡೆ ಮಾಡಿದೆ.

2013ರಿಂದ 2023– 24ನೇ ಸಾಲಿನವರೆಗೆ ಕೇಂದ್ರ ಸರ್ಕಾರ ನಿರ್ಭಯಾ ನಿಧಿ ಅಡಿಯಲ್ಲಿ ವಿವಿಧ ಸಚಿವಾಲಯಗಳು/ಇಲಾಖೆಗಳಿಗೆ ₹5,448 ಕೋಟಿ ಬಿಡುಗಡೆ ಮಾಡಿದೆ. ಅವುಗಳನ್ನು ವಿವಿಧ ಸಚಿವಾಲಯಗಳು ಬಳಕೆ ಮಾಡಿವೆ. ಇದರಲ್ಲಿ ಸಿಂಹಪಾಲನ್ನು (₹3,022 ಕೋಟಿ) ಗೃಹ ಇಲಾಖೆ ಪಡೆದಿದೆ. ₹992.5 ಕೋಟಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಬಳಸಿದೆ. ನ್ಯಾಯಾಂಗ ಇಲಾಖೆ ₹824.77 ಕೋಟಿ ಬಳಸಿಕೊಂಡಿದೆ.

ಪೂರ್ಣವಾಗಿ ಬಳಸದ ರಾಜ್ಯಗಳು: ರಾಜ್ಯಗಳು ಸಲ್ಲಿಸುವ ಪ್ರಸ್ತಾವಗಳಿಗೂ ನಿರ್ಭಯಾ ನಿಧಿಯಲ್ಲಿ ಅನುದಾನ ನೀಡಲಾಗುತ್ತದೆ. 60:40ರ ಅನುಪಾತದಲ್ಲಿ ಈ ಯೋಜನೆಗಳು ಅನುಷ್ಠಾನಕ್ಕೆ ಬರುತ್ತವೆ. ನಿಧಿಯ ಅಡಿಯಲ್ಲಿ ಕೇಂದ್ರದಿಂದ ಸಿಗುವ ಅನುದಾನವನ್ನು ರಾಜ್ಯಗಳು ಪೂರ್ಣವಾಗಿ ಬಳಸುತ್ತಿಲ್ಲ.

ಉದಾಹರಣೆಗೆ, 2016–17ರಿಂದ 2021–22ರವರೆಗೆ ಕರ್ನಾಟಕಕ್ಕೆ ₹299.74 ಕೋಟಿ ಹಂಚಿಕೆ ಮಾಡಲಾಗಿದೆ. ಈ ಮೊತ್ತದಲ್ಲಿ ರಾಜ್ಯವು ₹229.81ಕೋಟಿ ಮಾತ್ರ ಬಳಸಿದೆ.

₹1,000 ಕೋಟಿ
2013-14ನೇ ಸಾಲಿನಲ್ಲಿ ಆರಂಭಿಸಲಾಗಿದ್ದ ನಿರ್ಭಯಾ ನಿಧಿಗೆ ಕೇಂದ್ರ ಸರ್ಕಾರ ಮೀಸಲಿಟ್ಟ ಮೂಲಧನ

₹7,213 ಕೋಟಿ
2023–24ನೇ ಸಾಲಿನವರೆಗೆ ಕೇಂದ್ರ ಸರ್ಕಾರವು ನಿರ್ಭಯಾ ನಿಧಿಗೆ ಹಂಚಿಕೆ ಮಾಡಿದ ಮೊತ್ತ

₹5,448 ಕೋಟಿ
ಯೋಜನೆಗಳ ಅನುಷ್ಠಾನಕ್ಕಾಗಿ ವಿವಿಧ ಇಲಾಖೆಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣ

75%
ಮೀಸಲಿಟ್ಟ ಒಟ್ಟು ಹಣದಲ್ಲಿ ಮಂಜೂರಾದ ಪ್ರಮಾಣ

ದಶಕದಲ್ಲಿ ಸದ್ದು ಮಾಡಿದ ಪ್ರಕರಣಗಳು

- **ಆಗಸ್ಟ್ 22, 2013:** ದಕ್ಷಿಣ ಮುಂಬೈನ ಶಕ್ತಿ ಮಿಲ್ಸ್‌ನಲ್ಲಿ 22 ವರ್ಷದ ಪತ್ರಿಕಾ ಛಾಯಾಗ್ರಾಹಕಿ ಮೇಲೆ ಒಬ್ಬ ಬಾಲಕ ಸೇರಿದಂತೆ ಐದು ಮಂದಿ ಅತ್ಯಾಚಾರ ಮಾಡಿದ್ದರು
- **ಸೆಪ್ಟೆಂಬರ್ 3, 2013:** ದಕ್ಷಿಣ ಮುಂಬೈನ ಶಕ್ತಿ ಮಿಲ್ಸ್‌ನಲ್ಲಿ ತನ್ನ ಮೇಲೆ ಜುಲೈ, 31, 2013ರಂದು ನಾಲ್ವರು ಅತ್ಯಾಚಾರವೆಸಗಿದ್ದಾರೆ ಎಂದು 18 ವರ್ಷದ ಟೆಲಿಫೋನ್ ಆಪರೇಟರ್ ದೂರು. ಪತ್ರಿಕಾ ಛಾಯಾಗ್ರಾಹಕಿ ಮೇಲೆ ಅತ್ಯಾಚಾರವೆಸಗಿದ್ದ ಪ್ರಕರಣದ ಮೂವರು ಆರೋಪಿಗಳು ಈ ಪ್ರಕರಣದಲ್ಲಿಯೂ ಭಾಗಿಯಾಗಿದ್ದರು
- **ಏಪ್ರಿಲ್ 28, 2016:** ಕೇರಳದ ಪೆರುಂಬಾವೂರ್‌ನಲ್ಲಿ ದಲಿತ ಸಮುದಾಯಕ್ಕೆ ಸೇರಿದ ಕಾನೂನು ವಿದ್ಯಾರ್ಥಿನಿ ಮೇಲೆ ವಲಸೆ ಕಾರ್ಮಿಕನೊಬ್ಬನಿಂದ ಅತ್ಯಾಚಾರ ಮತ್ತು ಹತ್ಯೆ
- **ಡಿಸೆಂಬರ್ 2016:** ತಮಿಳುನಾಡಿನ ಅರಿಯಾಲೂರ್‌ನಲ್ಲಿ 17 ವರ್ಷದ ದಲಿತ ಬಾಲಕಿ ಮೇಲೆ ಆಕೆಯ ಗೆಳೆಯ ಸೇರಿದಂತೆ ನಾಲ್ವರಿಂದ ಅತ್ಯಾಚಾರ, ಹತ್ಯೆ
- **ಜೂನ್ 4, 2017:** ಉತ್ತರ ಪ್ರದೇಶದ ಉನ್ನಾವೊದಲ್ಲಿ 17 ವರ್ಷದ ಬಾಲಕಿ ಮೇಲೆ ಬಿಜೆಪಿ ಶಾಸಕನಾಗಿದ್ದ ಕುಲ್‌ದೀಪ್ ಸಿಂಗ್ ಸೆಂಗರ್‌ನಿಂದ ಅತ್ಯಾಚಾರ
- **ಜನವರಿ, 2018:** ಜಮ್ಮು–ಕಾಶ್ಮೀರದ ಕಠುವಾದಲ್ಲಿ ಒಬ್ಬ ಬಾಲಕ ಸೇರಿದಂತೆ ಏಳು ಮಂದಿಯಿಂದ 8 ವರ್ಷದ ಮುಸ್ಲಿಂ ಬಾಲಕಿಯ ಅಪಹರಣ, ಅತ್ಯಾಚಾರ, ಹತ್ಯೆ
- **ನವೆಂಬರ್ 28, 2019:** ಹೈದರಾಬಾದ್‌ನ ಹೊರವಲಯದಲ್ಲಿ ಪಶುವೈದ್ಯ ವಿದ್ಯಾರ್ಥಿನಿ ಮೇಲೆ ನಾಲ್ವರಿಂದ ಅತ್ಯಾಚಾರ, ಕೊಲೆ
- **ಸೆಪ್ಟೆಂಬರ್ 14, 2020:** ಉತ್ತರ ಪ್ರದೇಶದ ಹಾಥರಸ್‌ನಲ್ಲಿ 19 ವರ್ಷದ ದಲಿತ ಮಹಿಳೆಯ ಮೇಲೆ ಪ್ರಬಲ ಜಾತಿಯ ನಾಲ್ವರಿಂದ ಅತ್ಯಾಚಾರ, ಕೊಲೆ
- **ಆಗಸ್ಟ್ 21, 2021:** ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಎಂಬಿಎ ವಿದ್ಯಾರ್ಥಿನಿ ಮೇಲೆ ಬಾಲಕ ಸೇರಿದಂತೆ ಆರು ಮಂದಿಯಿಂದ ಸಾಮೂಹಿಕ ಅತ್ಯಾಚಾರ

ಆಧಾರ: ರಾಯಿಟರ್ಸ್, ಎನ್‌ಸಿಆರ್‌ಬಿ, ಸಂಸತ್ತಿನಲ್ಲಿ ಸಚಿವರ ಹೇಳಿಕೆ, ಪಿಟಿಐ

ಸಿನಿ ಬಿಟ್ಸ್

ಚೌತಿಗೆ ಶಿವರಾಜ್‌ಕುಮಾರ್ 131ನೇ ಸಿನಿಮಾ ಶೀರ್ಷಿಕೆ

ನವೀನ್ ಶಂಕರ್ – ಶಿವರಾಜ್‌ಕುಮಾರ್

ಸ್ಯಾಂಡಲ್‌ವುಡ್‌ನ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ತಮ್ಮ 131ನೇ ಸಿನಿಮಾದ ಚಿತ್ರೀಕರಣಕ್ಕೆ ಧುಮುಕಿದ್ದಾರೆ. ಎಚ್‌ಎಂಟಿ ಮೈದಾನದಲ್ಲಿ ಚಿತ್ರೀಕರಣ ನಡೆಯುತ್ತಿದೆ. ಕಾರ್ತಿಕ್ ಅದ್ವೈತ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದ ಶೀರ್ಷಿಕೆ ಚೌತಿಯಂದು ಗೊತ್ತಾಗಲಿದೆ.

ಖಳನಟನಾಗಿ ನವೀನ್ ಶಂಕರ್ ಬಣ್ಣಹಚ್ಚಲಿದ್ದಾರೆ. 2 ವರ್ಷದ ಹಿಂದೆಯೇ ಶಿವರಾಜ್‌ಕುಮಾರ್ ಒಪ್ಪಿಕೊಂಡಿದ್ದ ಈ ಸಿನಿಮಾದ ಮುಹೂರ್ತ ಕಳೆದ ಶುಕ್ರವಾರ (ಆ.16) ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ನಡೆಯಿತು.

‘2 ವರ್ಷಗಳ ಹಿಂದೆ ಚಿತ್ರತಂಡ ಕಥೆ ಹೇಳಿತ್ತು. ಸಿನಿಮಾ ಸೆಟ್ಟೇರಲು ಯಾಕೆ ಇಷ್ಟು ತಡ ಎಂದು ಕೇಳಬೇಡಿ. ಮೊದಲ ಬಾರಿಗೆ ಸ್ಕ್ರಿಪ್ಟ್ ಕೇಳಿದಾಗ ತುಂಬಾ ಚೆನ್ನಾಗಿ ಇತ್ತು. ಮನಸ್ಸಿಗೆ ಕೂತುಬಿಟ್ಟಿತ್ತು. ಆದರೆ ಅಲ್ಲಿ ಏನೋ ಬೇಕು ಎಂದು ನಿರ್ದೇಶಕರಿಗೆ ಹೇಳುತ್ತಿದ್ದೆ. ಈ ಸ್ಕ್ರಿಪ್ಟ್‌ನಲ್ಲಿ ಚಿತ್ರತಂಡ ಎಲ್ಲರಿಗೂ ಕೆಲಸವಿದೆ. ಒಂದು ಸಿನಿಮಾವೆಂದರೆ ಒಂದೋ ತಂತ್ರಜ್ಞರ ಸಿನಿಮಾ ಇಲ್ಲಾ ಕಲಾವಿದರ ಸಿನಿಮಾ ಎನ್ನುತ್ತಾರೆ. ಆದರೆ ಇದು ಹಾಗಲ್ಲ. ಇದು ಎಲ್ಲರ ಸಿನಿಮಾ. ಹೊಸ ನಿರ್ದೇಶಕರ ಮೇಲೆ ನಂಬಿಕೆ ಇಡಬೇಕು. ವ್ಯವಹಾರವಷ್ಟೇ ಮುಖ್ಯವಲ್ಲ. ಕೆಲವೊಮ್ಮೆ ಮನುಷ್ಯನೊಬ್ಬನನ್ನು ದೇವರಾಗಿ ನಂಬುತ್ತಾರೆ. ಆದರೆ ಆ ದೇವರಿಗೂ ದೇವರು ಬೇಕೇ ಬೇಕು. ಇದೊಂದು ಗ್ಯಾಂಗ್‌ಸ್ಟರ್ ಸಿನಿಮಾ ಆದರೂ ಭಿನ್ನವಾಗಿದೆ. ಗ್ಯಾಂಗ್‌ಸ್ಟರ್ ಸಿನಿಮಾವನ್ನಷ್ಟೇ ನಾನು ಮಾಡುತ್ತಿಲ್ಲ. ಮುಂದಿನ ವರ್ಷ ತಮಿಳು ನಿರ್ದೇಶಕರೊಬ್ಬರು ನಿರ್ದೇಶನ ಮಾಡಿರುವ ನನ್ನ ಲವ್‌ಸ್ಟೋರಿ ಸಿನಿಮಾವೊಂದು ಬಿಡುಗಡೆಯಾಗಲಿದೆ. ಇದು ಎಲ್ಲರಿಗೂ ಸರ್ಪ್ರೈಸ್. ನಾನು ನಟಿಸಿರುವ ‘ಭೈರತಿ ರಣಗಲ್’ ಸಿನಿಮಾ ಸದ್ಯದಲ್ಲೇ ತೆರೆಗೆ ಬರಲಿದೆ. ‘45’ ಸಿನಿಮಾದ ಕ್ಲೈಮ್ಯಾಕ್ಸ್ ಶೂಟಿಂಗ್ ಮುಂದಿನ ತಿಂಗಳು ನಡೆಯಲಿದೆ. ಇದಕ್ಕೆ ನಾನು, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಬೇಕು. ‘ಉತ್ತರಕಾಂಡ’ ಚಿತ್ರೀಕರಣವೂ ಪ್ರಾರಂಭವಾಗಲಿದೆ. ಡಿಸೆಂಬರ್‌ನಲ್ಲಿ ‘ಭೈರವನ ಕೊನೆ ಪಾಠ’ ಚಿತ್ರೀಕರಣ ಆರಂಭವಾಗಲಿದೆ’ ಎಂದರು ಶಿವರಾಜ್‌ಕುಮಾರ್.

‘ಶಿವರಾಜ್‌ಕುಮಾರ್ ಅವರ ಜೊತೆ ನಟಿಸಬೇಕು ಎನ್ನುವ ಆಸೆ ಬಹಳ ದಿನಗಳಿಂದ ಇತ್ತು. ಈ ಆಸೆ ಪೂರ್ಣವಾಗುತ್ತಿದೆ. ನಾನು ಇದುವರೆಗೂ ಮಾಡಿದ ಪಾತ್ರಗಳಿಗಿಂತ ಭಿನ್ನವಾದ ಪಾತ್ರ ಈ ಸಿನಿಮಾದಲ್ಲಿದೆ’ ಎನ್ನುತ್ತಾರೆ ನವೀನ್ ಶಂಕರ್. ಸ್ಯಾಮ್ ಸಿ.ಎಸ್ ಸಂಗೀತ, ಎ.ಜೆ ಶೆಟ್ಟಿ ಛಾಯಾಚಿತ್ರಗ್ರಹಣ ಸಿನಿಮಾಗೆ ಇದೆ. ದೀಪು ಎಸ್. ಕುಮಾರ್ ಸಂಕಲನ ಹಾಗೂ ರವಿ ಸಂತೆಹಕ್ಲು ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿರಲಿದೆ. ಭುವನೇಶ್ವರಿ ಪ್ರೊಡಕ್ಷನ್‌ನಡಿ ಎಸ್.ಎನ್. ರೆಡ್ಡಿ ಹಾಗೂ ಸುಧೀರ್ ಪಿ. ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

‘ವಿದ್ಯಾಪತಿ’ಯ ಕಿತಾಪತಿ!



‘ವಿದ್ಯಾಪತಿ’ ಸಿನಿಮಾ ಪೋಸ್ಟರ್

‘ಟಗರು ಪಲ್ಯ’ ಬೆನ್ನಲ್ಲೇ ನಟ ನಾಗಭೂಷಣ್ ‘ವಿದ್ಯಾಪತಿ’ಯಾಗಿ ತೆರೆಗೆ ಬರಲು ಸಜ್ಜಾಗುತ್ತಿದ್ದಾರೆ. ಇದು ನಟ ಧನಂಜಯ ಅವರ ಡಾಲಿ ಪಿಕ್ಚರ್ಸ್‌ನ 4ನೇ ಸಿನಿಮಾವಾಗಿದ್ದು, ಇತ್ತೀಚೆಗೆ ನಾಗಭೂಷಣ್ ಜನ್ಮದಿನದ ಪ್ರಯುಕ್ತ ವಿದ್ಯಾಪತಿಯ ಪ್ರೊಮೊ ರಿಲೀಸ್ ಮಾಡಿದೆ ಚಿತ್ರತಂಡ.

‘ಜೇಬು ತುಂಬ ಕಾಸಿರೋನು ಕೋಟ್ಯಾಧಿಪತಿ.. ನಿಮ್ಮನ್ನೆಲ್ಲ ಹೊಟ್ಟೆತುಂಬ ನಗಿಸುವವನೇ ನಮ್ಮ ‘ವಿದ್ಯಾಪತಿ’’ ಎಂದು ಚಿತ್ರದ ನಾಯಕನನ್ನು ಚಿತ್ರತಂಡ ಪರಿಚಯಿಸಿದೆ. ಕರಾಟೆ ಕಿಂಗ್ ವೇಷ ತೊಟ್ಟಿರುವ ನಾಗಭೂಷಣ್ ಮಾಡುವ ಎಡವಟ್ಟಿನ ತುಣುಕು ಪ್ರೊಮೊದಲ್ಲಿದೆ. ‘ಇಕ್ಕಟ್’ ಸಿನಿಮಾ ನಿರ್ದೇಶಿಸಿದ್ದ ಇಶಾಂ ಖಾನ್ ಹಾಗೂ ಹಸೀಂ ಖಾನ್ ಅವರೇ ‘ವಿದ್ಯಾಪತಿ’ಯ ಸಾರಥಿಗಳಾಗಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಡಾಸ್ ಮೋಡ್ ಸಂಗೀತ ನಿರ್ದೇಶನ, ಮುರುಳಿ ನೃತ್ಯ ನಿರ್ದೇಶನ, ಸುಜಿತ್ ವೆಂಕಟರಾಮಯ್ಯ ಸಾಹಿತ್ಯ, ಅರ್ಜುನ್ ಮಾಸ್ಟರ್ ಆ್ಯಕ್ಷನ್ ‘ವಿದ್ಯಾಪತಿ’ಗಿದೆ. ನಾಗಭೂಷಣ್‌ಗೆ ನಾಯಕಿಯಾಗಿ ‘ಉಪಾಧ್ಯಕ್ಷ’ ಸಿನಿಮಾ ಖ್ಯಾತಿಯ ಮಲೈಕಾ ವಸುಪಾಲ್ ನಟಿಸಿದ್ದಾರೆ. ರಂಗಾಯಣ ರಘು ಮುಖ್ಯ ಭೂಮಿಕೆಯಲ್ಲಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸ್ವಾತಂತ್ರ್ಯ ದಿನಾಚರಣೆಯಂದು ಕೇರಳದ ಊರೊಂದರಲ್ಲಿ ಧ್ವಜಾರೋಹಣದ ವೇಳೆ ಧ್ವಜ ಬಿಡಿಸಿಕೊಳ್ಳದಿದ್ದಾಗ ಹಕ್ಕಿಯೊಂದು ಬಂದು ಅದನ್ನು ಬಿಡಿಸಿ ಹಾರಿಹೋಗುವ ವಿಡಿಯೊ ತುಣುಕೊಂದು ಮೂರು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಕ್ಕಿಯ ದೇಶಭಕ್ತಿ, ದೇವರ ಪವಾಡ ಮುಂತಾದ ವಿಶೇಷಣಗಳನ್ನು ನೀಡಿ ವಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಬಳಕೆದಾರರು ತಮ್ಮ ಖಾತೆಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

ವಿಡಿಯೊವನ್ನು ಮೇಲ್ನೋಟಕ್ಕೆ ನೋಡಿದರೆ ಹಕ್ಕಿ ಬಿಡಿಸಿದಂತೆ ಕಾಣಿಸುತ್ತಿದೆ. ಆದರೆ ವಾಸ್ತವ ಅದಲ್ಲ. ಧ್ವಜ ಮೇಲಕ್ಕೇರಿದ ಸಂದರ್ಭದಲ್ಲಿ ತಕ್ಷಣಕ್ಕೆ ಅದು ಬಿಡಿಸಿಕೊಳ್ಳದೇ ಇದ್ದುದು ನಿಜ. ಅದೇ ಸಂದರ್ಭದಲ್ಲಿ ಹಕ್ಕಿಯೊಂದು ಹಾರಿ ಬಂದಿರುವುದೂ ನಿಜ. ಆದರೆ, ಹಕ್ಕಿ ಧ್ವಜದ ಬಳಿ ಬಂದಿರಲಿಲ್ಲ. ಅದೇ ಪರಿಸರದಲ್ಲಿದ್ದ ತೆಂಗಿನ ಮರದ ಗರಿಯ ಮೇಲೆ ಬಂದು ಕುಳಿತಿತ್ತು. ಧ್ವಜ ಮೇಲಕ್ಕೆ ಏರಿ ಕೆಲವು ಸೆಕೆಂಡುಗಳ ಪ್ರಯತ್ನದ ನಂತರ ಬಿಡಿಸಿಕೊಳ್ಳುತ್ತದೆ. ಆ ಸಂದರ್ಭದಲ್ಲಿ ಅಲ್ಲಿ ಸೇರಿದ್ದವರು ಚಪ್ಪಾಳೆ ತಟ್ಟುತ್ತಾರೆ. ಅದೇ ಸಂದರ್ಭದಲ್ಲಿ ಹಕ್ಕಿ ಹಾರಿಹೋಗುತ್ತದೆ. ಅದೇ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ಬೇರೆ ಕೋನದಿಂದ ತೆಗೆದ ವಿಡಿಯೊದಲ್ಲಿ ಇದು ಸ್ಪಷ್ಟವಾಗಿ ಕಾಣಿಸುತ್ತದೆ. ತಪ್ಪು ಮಾಹಿತಿ ನೀಡುವ ವಿಡಿಯೊಕ್ಕೆ ಪ್ರತಿಕ್ರಿಯೆ ನೀಡಿರುವ ಕೆಲವು ಬಳಕೆದಾರರು, ಮತ್ತೊಂದು ಕೋನದಲ್ಲಿ ಚಿತ್ರೀಕರಿಸಿರುವ ವಿಡಿಯೊ ತುಣುಕನ್ನು ಪೋಸ್ಟ್ ಮಾಡಿ ಸ್ಪಷ್ಟನೆ ನೀಡುತ್ತಿದ್ದಾರೆ.

ಗುಂಡಣ್ಣ

ಮನುಷ್ಯನ ವೈರಿ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ 4

ಒಬ್ಬ ಯುವಕ ಮಲಗಿದ್ದ. ಯಜಮಾನನೊಬ್ಬ ಬಂದು ಆತನನ್ನು ಎಬ್ಬಿಸಿ ‘ಬೆಳಿಗ್ಗೆ 8 ಗಂಟೆ ಆಗೈತಿ, 8 ಗಂಟೆತನ ಮಕ್ಕಂಡ್ರ ಜೀವನ ಹ್ಯಾಂಗ್ ನಡೀತೈತೋ’ ಎಂದು ಕೇಳಿದನಂತೆ. ಆಗ ಆ ಹುಡುಗ ‘ಎದ್ದರೆ ನಾನ್ ಏನ್ ಮಾಡಬೇಕು’ ಎಂದು ಕೇಳಿದ. ಅದಕ್ಕ ಯಜಮಾನ, ‘ಎದ್ದು ಹೊಲಕ್ಕೆ ಹೋಗು’ ಎಂದ. ‘ಹೊಲಕ್ಕೆ ಹೋಗಿ ಏನ್ ಮಾಡಬೇಕು’ ಎಂದು ಹುಡುಗ ಕೇಳಿದ. ‘ಏನಾರ ಬೆಳೆ ಬೆಳಿ, ಬೀಜ ಬಿತ್ತು’ ಎಂದ ಯಜಮಾನ. ‘ಬಿತ್ತಿದ ಮೇಲೆ ಏನ್ ಮಾಡಬೇಕು’ ಮತ್ತೆ ಹುಡುಗನ ಪ್ರಶ್ನೆ. ‘ಬಿತ್ತಿದ ಮೇಲೆ ಎಡೆ ಹೊಡಿ’. ‘ಎಡೆ ಹೊಡದು ಏನ್ ಮಾಡ್ಲಿ’. ‘ಜೋಳ ರಾಶಿ ಮಾಡು’. ‘ರಾಶಿ ಮಾಡಿ ಏನ್ ಮಾಡಲಿ’. ‘ಅದನ್ನು ದಲಾಲಿ ಅಂಗಡಿಗೆ ಹಾಕು. ರೊಕ್ಕ ಬರತ್ತೆ. ರೊಕ್ಕ ಬಂದಮ್ಯಾಲೆ ಒಳ್ಳೆ ಕನ್ಯಾ ನೋಡಿ ಮದಿವ್ಯಾಗು’ ಎಂದು ಸಲಹೆ ಕೊಟ್ಟ ಯಜಮಾನ.

‘ಮದಿವ್ಯಾಗಿ ಏನ್ ಮಾಡಲಿ’ ಎಂದು ಕೇಳಿದ ಹುಡುಗ. ‘ಎರಡು ಚಲೋ ಮಕ್ಕಳು ಮಾಡಕೊ. ಅವರನ್ನ ಒಳ್ಳೇತರ ಓದಿಸು. ಶಾಣ್ಯಾ ಮಾಡು. ಅವರು ಚಲೋ ಆಫೀಸರ್ ಆಗ್ತಾರೆ. ಆಗ ಅವರು ನಿನಗೆ ತಿಂಗಳಾ ತಿಂಗಳಾ ಚಲೋ ಹಣ ಕಳಿಸ್ತಾರ. ಆಗ ಅರಾಂ ಮಕ್ಕಬಹುದು’ ಎಂದನಂತೆ ಯಜಮಾನ. ಅದಕ್ಕೆ ಹುಡುಗ ‘ಈಗ ನಾನ್ ಏನ್ ಮಾಡಕತ್ತೀನಿ. ಇಷ್ಟೆಲ್ಲಾ ಮಾಡಿದ ಮ್ಯಾಲೂ ಇದನ್ನ ಮಾಡಬೇಕು ಅಂದರ ನಾ ಅದನ್ನೇ ಈಗ ಮಾಡಕತ್ತೇನಲ್ಲ. ಆಗ ಅರಾಂ ಮಕ್ಕಳಾಕ ಇಷ್ಟೆಲ್ಲಾ ಕೆಲಸ ಮಾಡಬೇಕಾ? ಅರಾಂ ಅದೀವ್ ನಾವ್, ನನ್ ತಂಟೆಗೆ ಬರಬೇಡಿ ಹೋಗ್’ ಎಂದು ಕಳಿಸಿದನಂತೆ.

ಮನುಷ್ಯನಿಗೆ ವೈರಿ ಹೊರಗಿಲ್ಲ. ನಮ್ಮೊಳಗೇ ಅದಾನ. ನಮ್ಮ ನೆರೆಮನೆಯಲ್ಲಿಯೂ ನಮ್ಮ ವೈರಿಗಳಿಲ್ಲ. ನಮ್ಮೊಳಗಿರುವ ಆಲಸ್ಯವೇ ನಮ್ಮ ಶತ್ರು. ಮನುಷ್ಯ ಉತ್ಸಾಹಿ ಆಗಿರಬೇಕು. ಕಾರ್ಯಶೀಲ ಆಗಿರಬೇಕು. ಏನಾದರೂ ಕೆಲಸ ಮಾಡುತ್ತಿರಬೇಕು. ಸುಮ್ಮನಿರಬಾರದು.

‘ಹೌದ್ರೀ ಕೆಲಸ ಮಾಡಬೇಕು ಅಂತೀರಿ. ಎಷ್ಟು ಕೆಲಸ ಮಾಡಬೇಕು. ಎಷ್ಟು ಅದಾವ ಅವು?’ ಮನುಷ್ಯ ಜೀವನದಲ್ಲಿ ಬಂದ ಮೇಲೆ ಏನು ಮಾಡಲಿ ಬಿಡಲಿ ಪ್ರಶ್ನೆ ಇಲ್ಲ. ಮೂರು ಕೆಲಸ ಮಾಡಲೇ ಬೇಕು. ಒಂದನೇದ್ದು, ನಮ್ಮ ಕುಟುಂಬ ನಡೀಬೇಕಲ್ಲ, ಅದಕ್ಕೆ ಯಾವುದಾದರೂ ಉಪಜೀವನ ನಡೆಸಲೇ ಬೇಕು. ಉಪಜೀವನಕ್ಕಾಗಿ ಕೆಲಸ ಮಾಡು. ಎರಡನೇದ್ದು, ಬರೀ ಉಪಜೀವನಕ್ಕೆ ಕೆಲಸ ಮಾಡೋದಲ್ಲ, ನಾವು ಈ ಭೂಮಿಗೆ ಬರಲು ಕಾರಣರಾದ ಮತ್ತು ನಮ್ಮನ್ನು ದೊಡ್ಡವರನ್ನಾಗಿ ಮಾಡಿದವರ ಉಪಕಾರ ಸ್ಮರಣೆಗಾಗಿ ಒಂದಿಷ್ಟು ಕೆಲಸ ಮಾಡಬೇಕು.

ಬರೀ ಇಷ್ಟೇ ಅಲ್ಲ. ಮೂರನೇದ್ದು ಇದೆ. ನನ್ನ ದೇಹ, ದೇಶ, ವಿಶ್ವ ವಿಕಾಸ ಆಗಬೇಕಲ್ಲ. ಅದಕ್ಕಾಗಿಯಾದರೂ ನಾವು ಏನಾದರೂ ಕೆಲಸ ಮಾಡಬೇಕು. ಉಪಜೀವನ, ಉಪಕಾರ ಸ್ಮರಣೆ, ವಿಕಾಸಕ್ಕಾಗಿ ಕೆಲಸ ಇವನ್ನು ಎಲ್ಲರೂ ನೆನಪಿಟ್ಟುಕೊಳ್ಳಬೇಕು. ಕೆಲಸ ಮಾಡಬೇಕು ಅಂದ್ರ ನಮ್ಮೊಳಗಿನ ಆಲಸ್ಯ ಎಂಬ ವೈರಿಯನ್ನು ಓಡಿಸಬೇಕು. ನಾವು ದುಡಿದೇ ಉಣ್ಣಬೇಕು. ಇದೇ ನಿಸರ್ಗದ ತತ್ವ. ದುಡಿಯದೇ ಇದ್ದರೆ ಇಲ್ಲಿ ಅವಕಾಶವೇ ಇಲ್ಲ. ಈ ಮಾತನ್ನು ಎಲ್ಲರೂ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಆಗಸ್ಟ್ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಪ್ರತಿಪದ್ ಗಂ. 20-33 ನಕ್ಷತ್ರ: ಧನಿಷ್ಠ ಗಂ. 05-45 ನಂತರ ಶತಭಿಷ ಗಂ. 27-10 ಯೋಗ: ಅತಿಗಂಡ ಗಂ. 20-55, ಸಿಂಹ ಮಾಸದ 04 ನೇ ದಿನ, ಮಳೆನಕ್ಷತ್ರ: ಮಘಾ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-22 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 15 ಸಫರ್
ಅದೃಷ್ಟ ಸಂಖ್ಯೆ : 5, 9

ಮೇಷ: ಒಡನಾಟ ಹೊಂದಿರುವ ವ್ಯಕ್ತಿಗಳೊಂದಿಗೆ ವ್ಯವಹಾರಿಕವಾಗಿ ಲಾಭತರುವ ಆಲೋಚನೆಯನ್ನು ಹಂಚಿಕೊಂಡು, ವಿವಿಧ ರೀತಿಯಲ್ಲಿ ನಷ್ಟ ಆಗುವುದು. ಮಕ್ಕಳ ಆರೋಗ್ಯದಲ್ಲಿ ಕೊರತೆ ಇರುವುದಿಲ್ಲ.

ವೃಷಭ: ಬಹುದಿನಗಳ ನಿರೀಕ್ಷೆಯ ವಿಚಾರಗಳು ಕಾರ್ಯ ರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ. ಸಂಬಂಧಿಕರ ಅತಿ ವಿಶ್ವಾಸ, ಪ್ರೀತಿ ಕಂಡು ಮರುಳಾಗಬೇಡಿ. ಶೀತದ ಬಾಧೆ ಕಾಡಬಹುದು.

ಮಿಥುನ: ಮುಖಂಡತ್ವದ ಸಾಮಾಜಿಕ ಕಾರ್ಯಕ್ಕೆ ಗ್ರಾಮಸ್ಥರಿಂದ ನಿರೀಕ್ಷೆಗೂ ಮೀರಿ ಸಹಾಯ ದೊರೆಯುವುದು. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಸರ್ಕಾರದಿಂದ ಉತ್ತಮ ಅವಕಾಶಗಳು ಸಿಗಲಿವೆ.

ಕರ್ಕಾಟಕ: ಕ್ಷಣಿಕ ಸುಖಗಳಿಗೆ ಗಮನ ನೀಡದೆ, ಮುಖ್ಯ ವಿಷಯ ಬಗ್ಗೆ ಗಂಭೀರವಾಗಿ ಆಲೋಚಿಸುವುದು ಅಭಿವೃದ್ಧಿಗೆ ಮೆಟ್ಟಿಲುಗಳಾಗುವುದು. ನೂತನ ತಾತ್ಕಾಲಿಕ ಉದ್ಯೋಗ ದೊರೆತು ಸಮಾಧಾನವಾಗುವುದು.

ಸಿಂಹ: ಎತ್ತರದಲ್ಲಿ ಕೆಲಸ ಮಾಡುವವರು, ಸಾಹಸಿ ಪ್ರವೃತ್ತಿಯವರು ಜಾಗ್ರತರಾಗಿರಿ. ವೃತ್ತಿ ಜೀವನದಲ್ಲಿ ಹಣಕಾಸಿನ ಸ್ಥಿತಿ ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು. ಕೆಲಸಗಳು ಮಂದಗತಿಯಲ್ಲಿ ಸಾಗುವುದು.

ಕನ್ಯಾ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ಸ್ನೇಹಿತರು ತಪ್ಪಿಸುವರು. ಆಡುವ ಸುಳ್ಳು ಮಾತಿನ ಫಲವನ್ನು ತಕ್ಷಣದಲ್ಲಿ ಅನುಭವಿಸುವಂತಾಗುವುದು. ಸಂಘ ಸಂಸ್ಥೆಗಳ ಪದಾಧಿಕಾರ ದೊರಕುವುದು.

ತುಲಾ: ಬ್ಯಾಂಕ್ ನೌಕರರಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಯಾವುದೋ ಮೂಲದಿಂದ ಬಂದ ಹಣ ದೇವ ಕಾರ್ಯಗಳಿಗೆ ಉಪಯೋಗಿಸುವುದು ಒಳ್ಳೆಯದು. ಭಾಷಾ ಅಧ್ಯಾಪಕರಿಗೆ ಉದ್ಯೋಗದಲ್ಲಿ ಅಸ್ಥಿರತೆ ಉಂಟಾಗುವುದು.

ವೃಶ್ಚಿಕ: ಮೇಲಧಿಕಾರಿಗಳು ಇಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯ ನಿರ್ವಹಿಸಲು ಅಶಕ್ತರಾಗುವ ಸಂಭವವಿದೆ. ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ, ಕೂಡಲೇ ಬಗೆಹರಿಸಿಕೊಳ್ಳಿರಿ.

ಧನು: ದೇವಸ್ಥಾನದಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ನಿಮ್ಮಿಂದ ಸಹಾಯ ಅಪೇಕ್ಷಿಸುವವರ ವಿಚಾರದಲ್ಲಿ ಮುಂಜಾಗ್ರತೆ ಇರಲಿ. ಕೆಲಸದಲ್ಲಿದ್ದ ಸಣ್ಣ ಪುಟ್ಟ ತೊಡಕು ನಿವಾರಿಸಿಕೊಳ್ಳುವುದನ್ನು ಸ್ವಂತವಾಗಿ ಅಭ್ಯಸಿಸಿ.

ಮಕರ: ಸಹೋದ್ಯೋಗಿಗಳ ಸಹಕಾರದಿಂದ ಕೆಲಸ ಕಾರ್ಯಗಳಲ್ಲಿ ಜಯ ದೊರೆತು ಮನಸ್ಸು ಉಲ್ಲಾಸದಿಂದ ಇರುವುದು. ಗೃಹಕೃತ್ಯದ ಪೂರ್ಣ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ಕುಂಭ: ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒತ್ತಡ ತೋರಿಬಂದರೂ ಅಭಿವೃದ್ಧಿದಾಯಕ ಬೆಳವಣಿಗೆ ಹರ್ಷವನ್ನು ತರವುದು. ನಿರುದ್ಯೋಗಿ ಯುವಕರು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಪ್ರಯತ್ನ ಪಡಬಹುದು. ಬಿಳಿ ಬಣ್ಣ ಶುಭತರಲಿದೆ.

ಮೀನ: ಸಾಲಕ್ಕೆಂದು ಅಡವಿಟ್ಟಿದ್ದ ನಿಮ್ಮ ಆಭರಣವು ಋಣ ಪರಿಹಾರವಾಗಿ ಕೈ ಸೇರಲಿದೆ. ನಿಮ್ಮ ಆರ್ಥಿಕ ಭಾಗವು ಈ ದಿನ ತುಂಬಿಕೊಂಡಿರುತ್ತದೆ. ಪರಿವಾರದವರೊಡನೆ ಸಂಚಾರ ಮಾಡುವಂಥ ಸಾಧ್ಯತೆ ಇದೆ.

ಪದಬಂಧ 5778

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೊಂದಿಕೆಯಿಲ್ಲದುದನ್ನು ಹೀಗೆ ಹೇಳಿ (4)
3.ಕತ್ತೆತ್ತಿದಾಗ ಕಾಣಿಸಿದ ಖಡ್ಗ (2)
5.ಸಂಗೀತದಲ್ಲಿ ಇಂಪಾಗುವಂತೆ ಹೊಂದಿಸಿದ ಸ್ವರಗಳ ಮೇಳೈಕೆ (2)
7.ಯುದ್ಧಭೂಮಿಯಿದು (4)
9.ಸೇರಿಕೆ ಇಲ್ಲಿ ತಿರುವುಮುರುವಾಗಿದೆ (2)
10.ಒಂದು ಬಗೆಯ ಸಿಡುಬು ರೋಗ (3)
11.ಜಾಗರೂಕತೆಯಿಂದ ನೋಡಿರುವ ಸ್ಥಳ (2)
12.ಗೊತ್ತು ಪಡಿಸಿದ ಅವಧಿಗೆ ಸರ್ಕಾರಕ್ಕೆ ಸಲ್ಲಿಸಬೇಕಾದ ಕಂದಾಯ ನಿಗದಿಪಡಿಸುವುದು (4)
14.ಆಸ್ಥಾನದಲ್ಲಿರುವ ಜಾಗ! (2)
15.ಉತ್ತರದವರ ಚಿಕ್ಕಪ್ಪ (2)
16.ಕಾರಣದಿಂದ ಕೂಡಿದುದು (4)

ಮೇಲಿಂದ ಕೆಳಕ್ಕೆ
2.ಕೊನೆಗೆ ಯೋಗವಿದ್ದಾಗಲೇ ಸೇರುವಿಕೆ! (3)
3.ಅಲೋಹ ಮೂಲಧಾತು ಉಲ್ಟಾ ಕಾಣುತ್ತಿದೆ (3)
4.ಓದು ಬರಹ ಬಾರದವನು (6)
5.ರಾರಾಜಿಸುತ್ತಿರುವ ಚಕ್ರವರ್ತಿ (5)
6.ಆನಂದದಿಂದ ತುಂಬಿದುದು (6)
8 .ಆನೆಯ ಜೊತೆಗೇ ನಿಧಾನವಾದ ನಡಿಗೆ (5)
13.ಮತ್ತು ಬರಿಸುವಂತದ್ದು (3)
14.ಕೊನೆಗೆ ವರನಿದ್ದರೆ ಚರವಲ್ಲದುದು ಕಾಣುತ್ತದೆ (3)



5777ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನವಿಲು 4.ಮೈಸೂರು
6.ಪಾಯ 7.ಸುಡಿನು
8.ಪುರಸ್ಕಾರ 9.ನರ
10.ಕಾಳು 11.ಹಾಲಾಹಲ
12.ಜಾಗರ 14.ಹತ್ತಿ
15.ಗಡವ 16.ಬಣವೆ

ಮೇಲಿಂದ ಕೆಳಕ್ಕೆ:
2.ವಿಜಯಪುರ 3.ತುರುಸು
4.ಮೈಲಾರಮಹಾದೇವ
5.ಜೇನುಹುಳು 9.ನವಜಾತ
10.ಕಾಲಹರಣ 13.ರಗಡು

ಸುಡೊಕು 6163

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6			
3		2					6	
	5			2		4		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6162 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಷೇರುಪೇಟೆ ವಹಿವಾಟು 12



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,541
ಇಂದಿನ ಅಂತ್ಯ	24,572
▲	31
ದಿನದ ಗರಿಷ್ಠ	24,579

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1540)
ಸೋಯಾ (ರಿಫೈನ್ಡ್)	₹946 (945)
ಸೂರ್ಯಕಾಂತಿ (ರಿಫೈನ್ಡ್)	₹957 (955)
ಪಾಮೋಲಿನ್	₹925 (913)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹500
12 ಕ್ಕೆ	₹68
ಮೈಸೂರು	
100ಕ್ಕೆ	₹504

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹209-476
ದ್ವಿತಳಿ (ಬಿ.ವಿ) ₹345-601

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹231
ಆರ್‌ಎಸ್‌ಎಸ್-5 ₹224
ಗುಡ್ ಲಾಟ್ ₹213
(ಪ್ರತಿ ಕೆ.ಜಿಗೆ)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

6ನೇ ವರ್ಷದ ಚಿರಸ್ಮರಣೆ



ಡಾ. ಎಸ್ ಭೀಮಪ್ಪ

ನಿಮ್ಮ ನಿಸ್ವಾರ್ಥ ಸೇವೆ, ಶೋಷಿತ ಹಾಗೂ ಹಿಂದುಳಿದ ವರ್ಗಗಳ ಆಶಾಕಿರಣ, ಬಹುಜನರ ಬದುಕಿನ ದಾರಿದೀಪ, ಸದಾ ನಿಮ್ಮ ನೆನಪು ನಮ್ಮ ಮನದಂಗಳದಲ್ಲಿ

ಕುಟುಂಬ ಮತ್ತು ಸಿಬ್ಬಂದಿ
ಭೀಮಚಂದ್ರ ಶಿಕ್ಷಣ ಸಂಸ್ಥೆ

ವೈಕುಂಠ ಸಮಾರಾಧನೆ



ಶ್ರೀಯುತ ಎನ್.ಎಸ್. ಚನ್ನಕೇಶವಯ್ಯ
ನಿಧನ : 07.08.2024
ದಿನಾಂಕ: 21.08.2024ನೇ ಬುಧವಾರ ಪುಣ್ಯಾಹ ಹಾಗೂ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತ – ಕುಟುಂಬವರ್ಗದವರು
ನಂದಿಗ್ರಾಮ ಚಿಕ್ಕಬಳ್ಳಾಪುರ ತಾಲ್ಲೂಕು

ಬ್ಯಾಂಕ್‌ಗಳ ಪ್ರಗತಿ ಪರಿಶೀಲನೆ: ಠೇವಣಿ ಸಂಗ್ರಹ ಹೆಚ್ಚಳಕ್ಕೆ ಸಚಿವೆ ಸೂಚನೆ

‘ಸಾಲ–ಠೇವಣಿ ಸರಿದೂಗಿಸಿ’

ನವದೆಹಲಿ (ಪಿಟಿಐ): ‘ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಠೇವಣಿ ಸಂಗ್ರಹ ಹೆಚ್ಚಳಕ್ಕೆ ಒತ್ತು ನೀಡಬೇಕಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೂಚಿಸಿದರು.

ಸೋಮವಾರ ನಡೆದ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

‘ಕಳೆದ ಕೆಲವು ತಿಂಗಳುಗಳಿಂದ ಬ್ಯಾಂಕ್‌ಗಳ ಸಾಲ ನೀಡಿಕೆಗೆ ಹೋಲಿಸಿದರೆ ಠೇವಣಿ ಸಂಗ್ರಹವು ಶೇ 3ರಿಂದ ಶೇ 4ರಷ್ಟು ಕಡಿಮೆಯಾಗಿದೆ. ಆಸ್ತಿ ಮತ್ತು ಹೊರೆ ನಡುವಿನ ಅಸಮತೋಲನ ಹೆಚ್ಚಾಗಿದೆ. ಈ ಬಗ್ಗೆ ಬ್ಯಾಂಕ್‌ಗಳು ಎಚ್ಚರಿಕೆ ವಹಿಸುವ ಅಗತ್ಯವಿದೆ’ ಎಂದರು.

ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣ ಹೆಚ್ಚುತ್ತಿದೆ. ಇದರ ಸುಸ್ಥಿರತೆ ಕಾಯ್ದುಕೊಳ್ಳಲು ಠೇವಣಿಗಳ ಸಂಗ್ರಹಕ್ಕೂ ಒತ್ತು ನೀಡಬೇಕಿದೆ ಎಂದರು.

ಬ್ಯಾಂಕ್ ಸಿಬ್ಬಂದಿ ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳ ವ್ಯಾಪ್ತಿಯ ಗ್ರಾಹಕರೊಂದಿಗೆ ಉತ್ತಮ ಬಾಂಧವ್ಯ ಹೊಂದಬೇಕು. ಸೈಬರ್ ಸುರಕ್ಷತೆಗೆ ಒತ್ತು ನೀಡಬೇಕು ಎಂದು ಸೂಚಿಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯು= ನವದೆಹಲಿಯಲ್ಲಿ ಸೋಮವಾರ ನಡೆಯಿತು. ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಡಾ.ವಿವೇಕ್ ಜೋಶಿ ಇದ್ದರು —ಪಿಟಿಐ ಚಿತ್ರ

ಯೋಜನೆಗಳ ಪರಾಮರ್ಶೆ: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಪಿಎಂ ಆವಾಸ್ ಯೋಜನೆ, ಪಿಎಂ ಸೂರ್ಯ ಘರ್ ಹಾಗೂ ಪಿಎಂ ವಿಶ್ವಕರ್ಮ ಯೋಜನೆ ಸೇರಿ ಹಲವು ಯೋಜನೆಗಳ ಬಗ್ಗೆ ನಿರ್ಮಲಾ ಅವರು, ಪರಿಶೀಲನೆ ನಡೆಸಿದರು.

ಸಾಲ ಮತ್ತು ಠೇವಣಿ ಅನುಪಾತ (ಸಿ:ಡಿ) ಹಾಗೂ ಬ್ಯಾಂಕ್‌ಗಳ ಆಸ್ತಿ ಗುಣಮಟ್ಟದ ಬಗ್ಗೆಯೂ ಪರಿಶೀಲಿಸಿದರು.

ನಿವ್ವಳ ಎನ್‌ಪಿಎ ಇಳಿಕೆ: 2023–24ರಲ್ಲಿ ಬ್ಯಾಂಕ್‌ಗಳ ನಿವ್ವಳ ಎನ್‌ಪಿಎ ಶೇ 0.76ಕ್ಕೆ ಇಳಿಕೆಯಾಗಿದೆ. ನಿವ್ವಳ ಬಡ್ಡಿ ಲಾಭ (ಎನ್‌ಐಎಂ) ಶೇ 3.22ರಷ್ಟಿದೆ. ಸಮರ್ಪಕ ಬಂಡವಾಳ ಅನುಪಾತ (ಸಿಎಆರ್) ಶೇ 15.55ರಷ್ಟಿದೆ. ಗ್ರಾಹಕರಿಗೆ ₹27,830 ಕೋಟಿ ಲಾಭಾಂಶ ವಿತರಿಸಿವೆ.

ನಿವ್ವಳ ಲಾಭ ಏರಿಕೆ

2023–24ನೇ ಆರ್ಥಿಕ ಸಾಲಿನಡಿ ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳು ₹1.40 ಲಕ್ಷ ಕೋಟಿ ನಿವ್ವಳ ಲಾಭ ಗಳಿಸಿವೆ. 2022–23ನೇ ಸಾಲಿನಲ್ಲಿ ₹1 ಲಕ್ಷ ಕೋಟಿ ಲಾಭ ಗಳಿಸಿದ್ದವು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 35ರಷ್ಟು ಹೆಚ್ಚಳವಾಗಿದೆ. ಈ ಪೈಕಿ ಸ್ಟೇಟ್ ಬ್ಯಾಂಕ್ ಇಂಡಿಯಾದ (ಎಸ್‌ಬಿಐ) ಪಾಲು ಶೇ 40ರಷ್ಟಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಎಸ್‌ಬಿಐ ₹61,077 ಕೋಟಿ ನಿವ್ವಳ ಲಾಭ ಗಳಿಸಿದೆ. 2022–23ರಲ್ಲಿ ₹50,232 ಕೋಟಿ ಲಾಭ ಗಳಿಸಿತ್ತು.

ಒಟ್ಟಾರೆ ಲಾಭದಲ್ಲಿ ಶೇ 22ರಷ್ಟು ಏರಿಕೆಯಾಗಿದೆ.

ಸುದ್ದಿ 2 ನಿಮಿಷ

ಹಬ್ಬದ ಋತು: ವಿಮಾನ ಟಿಕೆಟ್ ದರ ಏರಿಕೆ?

ನವದೆಹಲಿ (ಪಿಟಿಐ): ಹಬ್ಬದ ಋತುವಿನಲ್ಲಿ ದೇಶೀಯ ಮಾರ್ಗದ ವಿಮಾನ ಟಿಕೆಟ್ ದರದಲ್ಲಿ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಟ್ರಾವೆಲ್ ಪೋರ್ಟಲ್ ಇಕ್ಸಿಗೊ ತಿಳಿಸಿದೆ.

ದೀಪಾವಳಿಗೆ ಏಕಮುಖ ಸಂಚಾರ ದರದಲ್ಲಿ ಶೇ 10ರಿಂದ ಶೇ 15ರಷ್ಟು ಏರಿಕೆಯಾಗಬಹುದು. ಓಣಂ ಹಬ್ಬದ ಸಂದರ್ಭದಲ್ಲಿ ಶೇ 20ರಿಂದ ಶೇ 25ರಷ್ಟು ದರ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಅಕ್ಟೋಬರ್ 30ರಿಂದ ನವೆಂಬರ್ 5ರ ವರೆಗೆ ದೆಹಲಿ–ಚೆನ್ನೈ ನಡುವಿನ ತಡೆರಹಿತ ಸಂಚಾರ ದರವು ₹7,618 ಆಗುವ ಸಾಧ್ಯತೆಯಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 10ರಿಂದ ಶೇ 16ರಷ್ಟು ಹೆಚ್ಚಳವಾಗಲಿದೆ ಎಂದು ತಿಳಿಸಿದೆ.

‘ದೆಹಲಿ–ಚೆನ್ನೈ, ಮುಂಬೈ–ಬೆಂಗಳೂರು ಮತ್ತು ದೆಹಲಿ–ಹೈದರಾಬಾದ್ ನಡುವಿನ ಏಕಮುಖ ಸಂಚಾರದ ಸರಾಸರಿ ದರ ₹4 ಸಾವಿರದಿಂದ ₹5 ಸಾವಿರ ಇದೆ. ಈ ದರದಲ್ಲಿ ಶೇ 10ರಿಂದ ಶೇ 15ರಷ್ಟು ಏರಿಕೆಯಾಗಬಹುದು’ ಎಂದು ಇಕ್ಸಿಗೊ ಗ್ರೂಪ್‌ನ ಸಹ ಕಾರ್ಯ ನಿರ್ವಾಹಕ ಅಧಿಕಾರಿ ರಜನೀಶ್ ಕುಮಾರ್ ತಿಳಿಸಿದ್ದಾರೆ.

1.29 ಪ್ರಯಾಣಿಕರು ಸಂಚಾರ: ಜುಲೈ ತಿಂಗಳಿನಲ್ಲಿ ದೇಶೀಯ ವಿಮಾನ ಮಾರ್ಗದಲ್ಲಿ 1.29 ಕೋಟಿ ಪ್ರಯಾಣಿಕರು ಸಂಚರಿಸಿದ್ದಾರೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

ಕಳೆದ ವರ್ಷದ ಜುಲೈಗೆ ಹೋಲಿಸಿದರೆ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 7.3ರಷ್ಟು ಹೆಚ್ಚಳವಾಗಿದೆ.

ಎಲ್‌ಐಸಿ: ₹447 ಕೋಟಿ ಮೌಲ್ಯದ ಷೇರು ಮಾರಾಟ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಹಿಂದುಸ್ತಾನ್ ಕಾಪರ್ ಲಿಮಿಟೆಡ್‌ನಲ್ಲಿ (ಎಚ್‌ಸಿಎಲ್) ತನ್ನ ಒಡೆತನದಲ್ಲಿದ್ದ ಷೇರುಗಳ ಪೈಕಿ ಶೇ 2.09ರಷ್ಟು ಷೇರುಗಳನ್ನು ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಮುಕ್ತ ಮಾರುಕಟ್ಟೆ ಮೂಲಕ ಮಾರಾಟ ಮಾಡಿದೆ.

ಪ್ರತಿ ಷೇರಿಗೆ ₹221.64 ದರ ನಿಗದಿಪಡಿಸಲಾಗಿತ್ತು. ಈ ಷೇರುಗಳ ಒಟ್ಟು ಮೌಲ್ಯ ₹447 ಕೋಟಿ ಆಗಿದೆ ಎಂದು ಎಲ್‌ಐಸಿ, ಷೇರುಪೇಟೆಗೆ ತಿಳಿಸಿದೆ.

ಹಿಂದುಸ್ತಾನ್ ಕಾಪರ್ ಕಂಪನಿಯಲ್ಲಿ ಎಲ್‌ಐಸಿ ಶೇ 8.17ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿತ್ತು. ಸದ್ಯ ಶೇ 6.09ಕ್ಕೆ ಇಳಿಕೆಯಾಗಿದೆ.

ಎಚ್‌ಸಿಎಲ್ ಕೇಂದ್ರ ಗಣಿಗಾರಿಕೆ ಸಚಿವಾಲಯದ ಅಧೀನದಲ್ಲಿ ಬರುತ್ತದೆ. ಈ ಕಂಪನಿಯು ತಾಮ್ರದ ಅದಿರು ಗಣಿಗಾರಿಕೆ ನಡೆಸುತ್ತದೆ. ಜೊತೆಗೆ, ಸಂಸ್ಕರಿಸಿದ ತಾಮ್ರ ಉತ್ಪಾದಿಸುವ ಸರ್ಕಾರದ ಏಕೈಕ ಕಂಪನಿಯಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಫೆ. 27ಕ್ಕೆ ಜಿಎಎಫ್‌ಎಕ್ಸ್ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ವರ್ಷದ ಫೆಬ್ರುವರಿ 27ರಿಂದ ಮಾರ್ಚ್ 1ರ ವರೆಗೆ ನಡೆಯಲಿರುವ ‘ಅನಿಮೇಷನ್, ವಿಷುಯಲ್ ಎಫೆಕ್ಟ್ ಗೇಮಿಂಗ್ ಮತ್ತು ಕಾಮಿಕ್ಸ್’ಗೆ (ಎವಿಜಿಸಿ) ಸಂಬಂಧಿಸಿದ ‘ಜಿಎಎಫ್‌ಎಕ್ಸ್ ಸಮ್ಮೇಳನ 2025–ಇಮ್ಯಾಜಿನೇಶನ್ ನೆಕ್ಸ್ಟ್’ ಘೋಷವಾಕ್ಯ ಮತ್ತು ಕರಪತ್ರವನ್ನು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಬಿಡುಗಡೆ ಮಾಡಿದರು.

‘ಕರ್ನಾಟಕ ಸರ್ಕಾರವು ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರಿ (ಎಬಿಎಐ) ಸಹಯೋಗದಡಿ ಈ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ. ಈ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಕೆಲಸ ಮಾಡುತ್ತಿರುವ, ಮಾಡಲು ಇಚ್ಛಿಸುವ ಕನಸುಗಾರರು ಒಟ್ಟು ಸೇರಲಿದ್ದಾರೆ. ಹೊಸ ಚಿಂತನೆ ಮತ್ತು ತಂತ್ರಜ್ಞಾನಕ್ಕೆ ಸಮ್ಮೇಳನ ಪ್ರೋತ್ಸಾಹ ನೀಡಲಿದೆ’ ಎಂದು ಸಚಿವರು ವಿವರಿಸಿದರು.

ಜಿಎಎಫ್‌ಎಕ್ಸ್ ಸಮ್ಮೇಳನದ ಘೋಷವಾಕ್ಯ ಮತ್ತು ಕರಪತ್ರವನ್ನು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಬಿಡುಗಡೆ ಮಾಡಿದರು. ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಎಬಿಎಐ ಅಧ್ಯಕ್ಷ ಬಿರೇನ್ ಘೋಷ್ ಆಸ್ಟ್ರೇಲಿಯಾದ ಕೌನ್ಸಿಲ್ ಜನರಲ್ ಹಿಲರಿ ಮ್ಯಾಕ್‌ಗೀಚಿ, ಇಟಲಿಯ ಕೌನ್ಸಿಲ್ ಜನರಲ್ ಅಲ್ಫಾನ್ಸೊ ತಾಗ್‌ಲಿಯ ಫೆರ್ರಿ ಇದ್ದರು —ಪ್ರಜಾವಾಣಿ ಚಿತ್ರ

ಎವಿಜಿಸಿ ಕ್ಷೇತ್ರದಲ್ಲಿ ರಾಜ್ಯವು ಮುಂಚೂಣಿಯಲ್ಲಿದೆ. ಈ ಕ್ಷೇತ್ರದಲ್ಲಿ ನವೋದ್ಯಮ, ಸಣ್ಣ ಉದ್ಯಮ ಆರಂಭಿಸುವವರಿಗೆ ಕೆಐಟಿವಿಜಿಎನ್–4 ನಿಧಿ ಮೂಲಕ ರಾಜ್ಯ ಸರ್ಕಾರವು ಪ್ರೋತ್ಸಾಹ ನೀಡಲಿದೆ. ₹50 ಲಕ್ಷದಿಂದ ₹1 ಕೋಟಿವರೆಗೆ ಪ್ರಾಥಮಿಕ ಹೂಡಿಕೆ ಅನುದಾನ, ಬಳಿಕ ಉದ್ಯಮ ಬೆಳೆಸಲು ₹2 ಕೋಟಿವರೆಗೆ ಅನುದಾನ ನೀಡಲಾಗುವುದು ಎಂದು ತಿಳಿಸಿದರು.

ಉಗ್ರರ ದಾಳಿ: ನಾಲ್ವರು ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದಲ್ಲಿ ಭಾನುವಾರ ಉಗ್ರರು ನಡೆಸಿದ ಎರಡು ಪ್ರತ್ಯೇಕ ದಾಳಿಗಳಲ್ಲಿ ಕನಿಷ್ಠ ನಾಲ್ವರು ಪೊಲೀಸ್ ಸಿಬ್ಬಂದಿ ಮತ್ತು ಭದ್ರತಾ ಪಡೆ ಅಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಳಿಯಿಂದ ಒಬ್ಬ ಅಧಿಕಾರಿ ಸ್ಥಳದಲ್ಲೇ ಮೃತಪಟ್ಟಿದ್ದು, ಗಾಯಗೊಂಡ ಎಸ್‌ಎಚ್‌ಒ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯಲ್ಲಿ ಉಗ್ರರು ಭದ್ರತಾ ಪಡೆಗಳ ಬೆಂಗಾವಲು ಪಡೆಯ ಮೇಲೆ ಹೊಂಚುದಾಳಿ ನಡೆಸಿದರು. ಈ ದಾಳಿಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ . ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000–20,000/– ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಕ್ಲಾಸಿಫೈಡ್ಸ್ ADMISSION CORNER

ಪ್ರವಾಸ

Travel

9.9.2024, 23.9.2024, 30.9.2024 ರಿಂದ 6ದಿನಗಳ ಕಾಶಿ ಅಯೋಧ್ಯಾ, ಅಲಹಾಬಾದ್, ಗಯಾ ವಿಮಾನ ಪ್ರವಾಸ ರೂ.27,000/- ಒಬ್ಬರಿಗೆ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9902008056

8.9.2024 ಗುಜರಾತ್, ಮಧ್ಯಪ್ರದೇಶ್ 12.9.2024 ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್20.9.2024 ಭುವನೇಶ್ವರ್, ಪುರಿಜಗನ್ನಾಥ್,ಕೊಲ್ಕತ್ತಾ 4.10.2024 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್, (ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
www.dhclassifieds.com
BOOK NOW
@ 500/-* PER SQCM
SINGLE / DOUBLE / MULTIPLE COLUMN
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9900428036

ಭಾರತ ತಲುಪಲಿರುವ ಯುವ ಪೈಲಟ್

ಲಂಡನ್ (ಪಿಟಿಐ): 19 ವರ್ಷದ ಚೀನಾ–ಅಮೆರಿಕನ್ ಪೈಲಟ್ ಈಥನ್ ವಾ ಮುಂದಿನ ವಾರ ಭಾರತದ ದೆಹಲಿಯ ಇಂದಿರಾಗಾಂಧಿ ಅಂತರ ರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಬಂದಿಳಿಯಲಿದ್ದಾರೆ.


ಈಥನ್ ವಾ

ಈ ವಿಷಯವನ್ನು ಅವರು ಸೌದಿ ಅರೇಬಿಯಾದಿಂದ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಮಕ್ಕಳಲ್ಲಿನ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ಅಗತ್ಯವಿರುವ ದೇಣಿಗೆ ಸಂಗ್ರಹಿಸುವ ನಿಟ್ಟಿನಲ್ಲಿ ಅವರು ಏಳು ಖಂಡಗಳಲ್ಲಿ ಒಬ್ಬರೇ ವಿಮಾನ ಹಾರಾಟ ನಡೆಸುತ್ತಿದ್ದಾರೆ. ಗಿನ್ನಿಸ್ ದಾಖಲೆ ನಿರ್ಮಿಸುವ ಉದ್ದೇಶದ ಯಾನವೂ ಇದಾಗಿದೆ.

‘ಫ್ಲೈಟ್ ಅಗೇನ್ಸ್ಟ್ ಕ್ಯಾನ್ಸರ್’ ಎನ್ನುವ ಹೆಸರಿನ ಯಾನವು ಸ್ವಿಟ್ಜರ್ ಲೆಂಡ್‌ನ ಜಿನೀವಾದಲ್ಲಿ ಶುರುವಾಗಿತ್ತು. 50 ಸಾವಿರ ಮೈಲು ದೂರದ ಪ್ರಯಾಣವು 75 ಟೇಕಾಫ್‌ಗಳು ಹಾಗೂ ಲ್ಯಾಂಡಿಂಗ್‌ಗಳನ್ನು ಒಳಗೊಂಡಿದೆ. 60 ದೇಶಗಳಲ್ಲಿ ಅವರು ಸಂಚರಿಸಿದ್ದಾರೆ. ಟೆನೆಸ್ಸಿಯ ಮೆಂಫಿಸ್‌ನಲ್ಲಿ ಇರುವ ಸೇಂಟ್ ಜ್ಯೂಡ್ ಮಕ್ಕಳ ಕಾಯಿಲೆಗಳ ಸಂಶೋಧನಾ ಆಸ್ಪತ್ರೆಗಾಗಿ ಅವರು 10 ಲಕ್ಷ ಡಾಲರ್ ದೇಣಿಗೆ ಸಂಗ್ರಹಿಸಲು ನಿಶ್ಚಯಿಸಿದ್ದಾರೆ.

ಹಣಕಾಸು ಸಚಿವಾಲಯಕ್ಕೆ ಸಿಎಜಿ ಸೂಚನೆ

ರಾಜಿ ತೆರಿಗೆ: ಅರ್ಹರನ್ನು ಗುರುತಿಸಿ

ನವದೆಹಲಿ (ಪಿಟಿಐ): ಸಣ್ಣ ವರ್ತಕರಿಗೆ ನೆರವು ಕಲ್ಪಿಸಲು ಸರಕು ಮತ್ತು ಸೇವಾ ತೆರಿಗೆಯಡಿ ಪರಿಚಯಿಸಿರುವ ರಾಜಿ ತೆರಿಗೆ ಪದ್ಧತಿ (ಕಂಪೋಸಿಷನ್ ಸ್ಕೀಮ್) ವ್ಯಾಪ್ತಿಗೆ ಬರುವ ಅರ್ಹ ತೆರಿಗೆದಾರರನ್ನು ಕೇಂದ್ರ ಹಣಕಾಸು ಸಚಿವಾಲಯವು ಗುರುತಿಸಬೇಕಿದೆ ಎಂದು ಮಹಾ ಲೆಕ್ಕಪರಿಶೋಧಕ ಮತ್ತು ಮಹಾಲೇಖಪಾಲರ (ಸಿಎಜಿ) ವರದಿ ತಿಳಿಸಿದೆ.

₹1.50 ಕೋಟಿವರೆಗಿನ ವಾರ್ಷಿಕ ವಹಿವಾಟು ನಡೆಸುವ ತೆರಿಗೆದಾರರಿಗೆ ಜಿಎಸ್‌ಟಿ ಪಾವತಿಗೆ ಪರ್ಯಾಯವಾಗಿ ಈ ಸೌಲಭ್ಯ ಕಲ್ಪಿಸಲಾಗಿದೆ. ಕೆಲವು ರಾಜ್ಯಗಳಲ್ಲಿ ಈ ವಹಿವಾಟಿನ ಮೊತ್ತವನ್ನು ₹75 ಲಕ್ಷಕ್ಕೆ ನಿಗದಿಪಡಿಸಲಾಗಿದೆ.

ಈ ಪದ್ಧತಿ ಆಯ್ಕೆ ಮಾಡಿಕೊಳ್ಳುವ ವರ್ತಕರಿಗೆ ಜಿಎಸ್‌ಟಿ ಅಡಿ ನಿಗದಿಪಡಿಸಿರುವ ಸಾಮಾನ್ಯ ತೆರಿಗೆ ದರಗಳಿಗೆ ಬದಲಾಗಿ, ಶೇ 1ರಿಂದ ಶೇ 5ರ ವರೆಗೆ ತೆರಿಗೆ ಪಾವತಿಗೆ ಅವಕಾಶ ಸಿಗಲಿದೆ.

‘ಸಚಿವಾಲಯವು ಇಂತಹ ತೆರಿಗೆದಾರರ ವಹಿವಾಟಿನ ಮೌಲ್ಯ ಪರಿಶೀಲಿಸುವ ಮೂಲಕ ತೆರಿಗೆ ವಂಚನೆಯನ್ನು ಪತ್ತೆ ಹಚ್ಚಬೇಕಿದೆ’ ಎಂದು ಇತ್ತೀಚೆಗೆ ಸಂಸತ್‌ನಲ್ಲಿ ಮಂಡಿಸಿರುವ ಸಿಎಜಿ ವರದಿ ತಿಳಿಸಿದೆ.

2019–20ರಿಂದ 2021–22ರ ವರೆಗೆ 8.66 ಲಕ್ಷ ತೆರಿಗೆದಾರರನ್ನು ರಾಜಿ ತೆರಿಗೆ ಪದ್ಧತಿಯಡಿ ಗುರುತಿಸಲಾಗಿದೆ. ಆದರೆ, ಈ ಪದ್ಧತಿಯಡಿ ನಿಗದಿಪಡಿಸಿರುವ ವಹಿವಾಟಿನ ಮೊತ್ತ ಮೀರಿದ ತೆರಿಗೆದಾರರು ಇದ್ದಾರೆ. ಅಂತಹವರನ್ನೂ ಪತ್ತೆ ಹಚ್ಚಬೇಕಿದೆ ಎಂದು ಸೂಚಿಸಿದೆ.

ವರ್ತಕರು ಸಲ್ಲಿಸುವ ಜಿಎಸ್‌ಟಿಆರ್–4ಎ, ಜಿಎಸ್‌ಟಿಆರ್–7 ನಮೂನೆಯ ಆಡಿಟ್ ವೇಳೆ ಇವರನ್ನು ಗುರುತಿಸಬೇಕು. ಐ.ಟಿ ರಿಟರ್ನ್ಸ್, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವಾಹನ್ ಜಾಲತಾಣದಲ್ಲಿ ನೋಂದಣಿಯಾಗುವ ವಿವರ ಪರಿಶೀಲಿಸಿಯೂ ಪತ್ತೆ ಹಚ್ಚಬಹುದಾಗಿದೆ ಎಂದು ನಿರ್ದೇಶನ ನೀಡಿದೆ.

ಕೆಲವು ತೆರಿಗೆದಾರರು ಜಿಎಸ್‌ಟಿ ನಿಯಮಾವಳಿ ಅನ್ವಯ ನಿಗದಿಪಡಿಸಿರುವ ಅರ್ಹತಾ ಮಾನದಂಡ ಪೂರೈಸದಿದ್ದರೂ ಈ ಪದ್ಧತಿಯಡಿ ಪ್ರಯೋಜನ ಪಡೆಯುತ್ತಿದ್ದಾರೆ. ಅಂತಹ ತೆರಿಗೆದಾರರನ್ನು ಪತ್ತೆ ಹಚ್ಚಲು ಹಣಕಾಸು ಸಚಿವಾಲಯವು ಹೊಸ ವ್ಯವಸ್ಥೆಯನ್ನು ರೂಪಿಸಬೇಕಿದೆ. ಈ ಪದ್ಧತಿಯನ್ನು ದುರ್ಬಳಕೆ ಮಾಡಿಕೊಳ್ಳುವವರ ವಿರುದ್ಧ ಕ್ರಮಕೈಗೊಳ್ಳಬೇಕಿದೆ ಎಂದು ಸೂಚಿಸಿದೆ.

‘ಚುನಾವಣೆ: ಕಮಲಾ ತಂದರು ಬಲ’

ಶಿಕಾಗೊ,(ಪಿಟಿಐ): ‘ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಭಾರತ ಮೂಲದ ಕಮಲಾ ಹ್ಯಾರಿಸ್ ಅವರು ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿ ಪ್ರಚಂಡ ಬಲ ತಂದುಕೊಟ್ಟಿದ್ದಾರೆ. ಟ್ರಂಪ್ ಅವರನ್ನು ಮಣಿಸಲು ಶಿಕಾಗೊದಲ್ಲಿ ನಡೆಯುವ ಪಕ್ಷದ ಸಮಾವೇಶವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುವುದು’ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಪಕ್ಷದ ರಾಷ್ಟ್ರೀಯ ಸಮಾವೇಶವು ಸೋಮವಾರ ಆರಂಭಗೊಂಡಿದ್ದು, ಇಲಿನಾಯ್ಸ್‌ನ ಲೇಕ್ ಮಿಶಿಗನ್‌ನಲ್ಲಿ ಆಯೋಜಿತವಾಗಿದೆ. ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಿರುವ ಕಮಲಾ ಹ್ಯಾರಿಸ್, ಉಪಾಧ್ಯಕ್ಷ ಅಭ್ಯರ್ಥಿ ಟಿಮ್ ವಾಲ್ಜ್ ಅವರ ಸಂಭ್ರಮಾಚರಣೆಯೂ ಮಂಗಳವಾರ ನಡೆಯಲಿದೆ.

ನವೆಂಬರ್ 5ರಂದು ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಮೀನು ವ್ಯಾಪಾರಿ ಸಾವಿಗೆ ಸಂಬಂಧಿಸಿದ ಕೇಸ್

ಹಸೀನಾ ವಿರುದ್ಧ ಕೊಲೆ ಪ್ರಕರಣ ದಾಖಲು

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ವಿರುದ್ಧ ಕೊಲೆ ಪ್ರಕರಣವೊಂದನ್ನು ಹೊಸದಾಗಿ ದಾಖಲಿಸಲಾಗಿದೆ.

ಹಸೀನಾ ಮಾತ್ರವಲ್ಲದೆ ಅವರ ಸಂಪುಟದಲ್ಲಿ ಸಚಿವರಾಗಿದ್ದ ಕೆಲವರು ಸೇರಿದಂತೆ ಒಟ್ಟು 62 ಮಂದಿಯ ವಿರುದ್ಧ ಈ ಪ್ರಕರಣ ದಾಖಲಾಗಿದೆ. ಮೀಸಲಾತಿ ವಿಚಾರವಾಗಿ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಿ ಮೀನು ವ್ಯಾಪಾರಿಯೊಬ್ಬರ ಸಾವಿಗೆ ಸಂಬಂಧಿಸಿದಂತೆ ಈ ಪ್ರಕರಣ ದಾಖಲಿಸಲಾಗಿದೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.ಹಸೀನಾ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ, ದೇಶ ತೊರೆದ ನಂತರದಲ್ಲಿ ಅವರ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿವೆ. ಈಗಿನ ಪ್ರಕರಣವನ್ನು ಭಾನುವಾರ ದಾಖಲಿಸಲಾಗಿದೆ.

ಶೇಖ್ ಹಸೀನಾ

ಮೃತ ವ್ಯಾಪಾರಿಯ ಪತ್ನಿ ಶಹನಾಜ್ ಬೇಗಂ ಸಲ್ಲಿಸಿರುವ ದೂರು ಆಧರಿಸಿ ಪ್ರಕರಣ ದಾಖಲಾಗಿದೆ. ಮೀನು ಮಾರುಕಟ್ಟೆಯಿಂದ ಜುಲೈ 21ರಂದು ವಾಪಸ್ ಬರುತ್ತಿದ್ದಾಗ ಗುಂಡಿಕ್ಕಿ ಅವರನ್ನು ಹತ್ಯೆ ಮಾಡಲಾಗಿತ್ತು.

ಮಾಜಿ ಸಚಿವರಾದ ಅಸಾದುಜ್ಜಮಾನ್ ಖಾನ್, ಒಬೈದುಲ್ ಖಾದರ್, ಮಾಜಿ ಸಂಸದ ಶಮೀಮ್ ಒಸ್ಮಾನ್ ಅವರು ಕೂಡ ಆರೋಪಿಗಳು ಎಂದು ಉಲ್ಲೇಖಿಸಲಾಗಿದೆ. ಪ್ರತಿಭಟನೆಯಲ್ಲಿ ತೊಡಗಿದ್ದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಮೇಲೆ ಗುಂಡು ಹಾರಿಸಲು ಹಸೀನಾ, ಖಾದರ್ ಮತ್ತು ಅಸಾದುಜ್ಜಮಾನ್ ಅವರು ಆದೇಶಿಸಿದ್ದರು ಎಂದು ದೂರಲಾಗಿದೆ.

ಪೊಲೀಸ್ ಠಾಣೆಗಳಲ್ಲಿ ವರ್ಗಾವಣೆ

ಶೇಖ್ ಹಸೀನಾ ಅವರ ನೇತೃತ್ವದ ಸರ್ಕಾರವು ಪದಚ್ಯುತಗೊಂಡ ನಂತರ ದೇಶದಲ್ಲಿ ಪೊಲೀಸ್ ಅಧಿಕಾರಿಗಳ ವರ್ಗಾವಣೆ ಪರ್ವ ಆರಂಭವಾಗಿದೆ.

18 ಮಂದಿ ಠಾಣೆ ಉಸ್ತುವಾರಿ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ ಬೆನ್ನಲ್ಲೇ, ಢಾಕಾದಲ್ಲಿರುವ 32 ಠಾಣೆಗಳ ಮುಖ್ಯಸ್ಥರನ್ನು ವರ್ಗಾವಣೆ ಮಾಡಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಭಾನುವಾರ ಮಧ್ಯರಾತ್ರಿ ವರ್ಗಾವಣೆ ಆದೇಶ ಕಳುಹಿಸಲಾಗಿದೆ ಎಂದು ಬಿಡಿನ್ಯೂಸ್24.ಕಾಮ್ ಸುದ್ದಿ ಪೋರ್ಟಲ್ ಹೇಳಿದೆ.

ಈವರೆಗೆ ಢಾಕಾ ಮೆಟ್ರೊಪಾಲಿಟನ್ ಪೊಲೀಸ್ (ಡಿಎಂಪಿ) ವ್ಯಾಪ್ತಿಯಲ್ಲಿ ಬರುವ 50 ಠಾಣೆಗಳ ಮುಖ್ಯಸ್ಥರನ್ನು ವರ್ಗಾವಣೆ ಮಾಡಲಾಗಿದೆ. ಆಗಸ್ಟ್ 13ರಂದು 18 ಮಂದಿ ಠಾಣೆ ಉಸ್ತುವಾರಿಗಳನ್ನು ವರ್ಗಾವಣೆ ಮಾಡಲಾಗಿತ್ತು.

ವರದಿ ಪ್ರಕಾರ, ವರ್ಗಾವಣೆಗೊಂಡ ಮುಖ್ಯಸ್ಥರ ಬಳಿ ಈ ಹಿಂದೆ ಇದ್ದ ಆದೇಶ ಹೊರಡಿಸುವ ಅಧಿಕಾರ ಇರುವುದಿಲ್ಲ. ಇವರಲ್ಲಿ ಕೆಲವರನ್ನು ದೇಶದಾದ್ಯಂತ ಇರುವ ಪೊಲೀಸ್ ಸಿಬ್ಬಂದಿ ತರಬೇತಿ ಕೇಂದ್ರಗಳಿಗೆ ಕಳುಹಿಸಲಾಗಿದೆ.

ಉಳಿದವರನ್ನು ಪ್ರವಾಸಿ ಪೊಲೀಸ್, ಕೈಗಾರಿಕಾ ಪೊಲೀಸ್‌ಗಳಾಗಿ ವರ್ಗಾವಣೆ ಮಾಡಲಾಗಿದೆ.

ಸಿನ್ಸಿನಾಟಿ ಓಪನ್ ಟೆನಿಸ್: ಮಹಿಳೆಯರ ಸಿಂಗಲ್ಸ್‌ನ ಫೈನಲ್‌ಗೆ ಸಬಲೆಂಕಾ, ಪೆಗುಲಾ

ಯಾನಿಕ್ ಸಿನ್ನರ್‌ಗೆ ಮಣಿದ ಜ್ವೆರೇವ್

ಸಿನ್ಸಿನಾಟಿ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಯಾನಿಕ್ ಸಿನ್ನರ್ ಅವರು ಸಿನ್ಸಿನಾಟಿ ಓಪನ್ ಟೆನಿಸ್ ಟೂರ್ನಿಯಲ್ಲಿ ಅಲೆಕ್ಸಾಂಡರ್ ಜ್ವೆರೇವ್ ಅವರನ್ನು ಸೋಲಿಸಿ ಫೈನಲ್ ಪ್ರವೇಶಿಸಿದರು.

ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಇಟಲಿಯ 23 ವರ್ಷ ವಯಸ್ಸಿನ ಸಿನ್ನರ್ 7-6 (11/9), 5-7, 7-6 (7/4)ರಿಂದ ಮೂರನೇ ಶ್ರೇಯಾಂಕದ ಜ್ವೆರೇವ್ ಅವರನ್ನು ಹಿಮ್ಮೆಟ್ಟಿಸಿದರು.

ಮಂಗಳವಾರ ಫೈನಲ್‌ನಲ್ಲಿ ಅವರು ಅಮೆರಿಕದ ಫ್ರಾನ್ಸಿಸ್ ಟಿಯಾಫೊ ಅವರನ್ನು ಎದುರಿಸಲಿದ್ದಾರೆ. ಸಿನ್ನರ್ ಅವರಿಗೆ ಇದು ವೃತ್ತಿಜೀವನದ ಐದನೇ ಮಾಸ್ಟರ್ಸ್ 1000 ಫೈನಲ್ ಆಗಿದೆ.

ಸಿನ್ನರ್, ಕಳೆದ ನಾಲ್ಕು ಮುಖಾಮುಖಿಯಲ್ಲಿ ಜ್ವೆರೇವ್ ವಿರುದ್ಧ ಸೋತಿದ್ದರು. ನಾಲ್ಕು ವರ್ಷಗಳ ಹಿಂದೆ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಸಿನ್ನರ್ ಅವರು, ಜರ್ಮನಿ ಆಟಗಾರನ ವಿರುದ್ಧ ಕೊನೆಯ ಜಯ ಸಾಧಿಸಿದ್ದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಟಿಯಾಫೊ ಅವರು 4-6, 6-1, 7-6 (7/4) ರಿಂದ 15ನೇ ಶ್ರೇಯಾಂಕದ ಹೋಲ್ಗರ್ ರೂನ್ ಅವರನ್ನು ಸೋಲಿಸಿದರು.

2013ರ ನಂತರ ಸಿನ್ಸಿನಾಟಿ ಓಪನ್‌ನಲ್ಲಿ ಫೈನಲ್ ತಲುಪಿದ ಅಮೆರಿಕದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಟಿಯಾಫೊ ಪಾತ್ರವಾದರು. 2013ರಲ್ಲಿ ಜಾನ್ ಇಸ್ನರ್ ಫೈನಲ್ ತಲುಪಿದ್ದರು.

ಪೆಗುಲಾ, ಸಬಲೆಂಕಾ ಫೈನಲ್‌ಗೆ: ಮಹಿಳೆಯರ ಸಿಂಗಲ್ಸ್‌ನಲ್ಲಿ ಆರನೇ ಶ್ರೇಯಾಂಕದ ಅಮೆರಿಕದ ಜೆಸ್ಸಿಕಾ ಪೆಗುಲಾ ಅವರು ಫೈನಲ್‌ಗೆ ಲಗ್ಗೆ ಹಾಕಿದರು. ಪ್ರಶಸ್ತಿ ಸುತ್ತಿನಲ್ಲಿ ಅವರು ಮೂರನೇ ಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು ಎದುರಿಸುವರು.

ಕಳೆದ ವಾರ ಕೆನಡಿಯನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದ 30 ವರ್ಷ ವಯಸ್ಸಿನ ಪೆಗುಲಾ ಸೆಮಿಫೈನಲ್‌ನಲ್ಲಿ 6-2, 3-6, 6-3ರಿಂದ ಸ್ಪೇನ್‌ನ ಪೌಲಾ ಬಡೋಸಾ ಅವರನ್ನು ಮಣಿಸಿದರು.

ಇದಕ್ಕೂ ಮೊದಲು ಮತ್ತೊಂದು ಸೆಮಿಫೈನಲ್‌ನಲ್ಲಿ ಸಬಲೆಂಕಾ ಅವರು 6-3, 6-3ರಿಂದ ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರಿಗೆ ಆಘಾತ ನೀಡಿದ್ದರು. ಬಲ್ಗೇರಿಯಾದ 26 ವರ್ಷ ವಯಸ್ಸಿನ ಸಬಲೆಂಕಾ 6-3, 6-3ರಿಂದ ಪೋಲೆಂಡ್‌ನ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು. ಈ ಗೆಲುವಿನೊಂದಿಗೆ ಸಬಲೆಂಕಾ ಡಬ್ಲ್ಯುಟಿಎ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆಯಲಿದ್ದಾರೆ.

ಇಟಲಿಯ ಯಾನಿಕ್ ಸಿನ್ನರ್ —ಎಎಫ್‌ಪಿ ಚಿತ್ರ

ಮೊದಲ ಸುತ್ತಿನಲ್ಲಿ ನಗಾಲ್‌ಗೆ ನಿರಾಸೆ

ವಿನ್‌ಸ್ಟನ್ ಸೇಲಂ (ಅಮೆರಿಕ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಇಲ್ಲಿ ನಡೆಯುತ್ತಿರುವ 'ವಿನ್‌ಸ್ಟನ್ ಸೇಲಂ ಓಪನ್ ಟೆನಿಸ್ ಟೂರ್ನಿಯ ಆರಂಭಿಕ ಸುತ್ತಿನಲ್ಲಿ ನಿರಾಸೆ ಅನುಭವಿಸಿದರು.

27 ವರ್ಷ ವಯಸ್ಸಿನ ನಗಾಲ್ ಸೋಮವಾರ ನಡೆದ 64ರ ಘಟ್ಟದ ಪಂದ್ಯದಲ್ಲಿ 4-6, 2-6ರ ನೇರ ಸೆಟ್‌ಗಳಿಂದ ಬೋರ್ನಾ ಕೊರಿಕ್ ಅವರಿಗೆ ಶರಣಾದರು. 1 ಗಂಟೆ 10 ನಿಮಿಷ ನಡೆದ ಹೋರಾಟದಲ್ಲಿ ಕ್ರೊವೇಷ್ಯಾ ಆಟಗಾರ ಗೆಲುವು ಸಾಧಿಸಿದರು.

ರಾಷ್ಟ್ರೀಯ ಜೂನಿಯರ್ ಮಾಜಿ ಚಾಂಪಿಯನ್ ದಕ್ಷಿಣೇಶ್ವರ್ ಸುರೇಶ್ ಅವರು ಬ್ರಿಟನ್ ಜೊತೆಗಾರ ಲುಕಾ ಪೊವ್ ಅವರೊಂದಿಗೆ ಪುರುಷರ ಡಬಲ್ಸ್‌ನಲ್ಲಿ ಕಣಕ್ಕೆ ಇಳಿಯುವರು. ಮಂಗಳವಾರ 16ರ ಘಟ್ಟದ ಪಂದ್ಯದಲ್ಲಿ ಅವರು ಆರನೇ ಶ್ರೇಯಾಂಕದ ಉರುಗ್ವೆಯ ಏರಿಯಲ್ ಬೆಹರ್ ಮತ್ತು ಅರ್ಜೆಂಟೀನಾದ ಆಂಡ್ರೆಸ್ ಮೊಲ್ತೆನಿ ಜೋಡಿಯನ್ನು ಎದುರಿಸಲಿದ್ದಾರೆ.

26 ವರ್ಷ ವಯಸ್ಸಿನ ದಕ್ಷಿಣೇಶ್ವರ್, ಸಿಂಗಲ್ಸ್‌ನ ಮುಖ್ಯ ಸುತ್ತಿಗೆ ಅರ್ಹತೆ ಪಡೆಯಲು ವಿಫಲವಾದರು. ಅರ್ಹತಾ ಸುತ್ತಿನ ಎರಡನೇ ಪಂದ್ಯದಲ್ಲಿ 3-6, 4-6ರಿಂದ ಅಮೆರಿಕಾದ ಲರ್ನರ್ ಟಿಯೆನ್ ಅವರ ವಿರುದ್ಧ ಪರಾಭವಗೊಂಡರು.

ಸ್ನೂಕರ್: ಪಂಕಜ್ ಅಡ್ವಾಣಿಗೆ ಪ್ರಶಸ್ತಿ ಡಬಲ್

ಮುಂಬೈ (ಪಿಟಿಐ): ಅಗ್ರಮಾನ್ಯ ಆಟಗಾರ ಪಂಕಜ್ ಅಡ್ವಾಣಿ, ವೆಸ್ಟರ್ನ್ ಇಂಡಿಯಾ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಸೀನಿಯರ್ ಸ್ನೂಕರ್ ಪ್ರಶಸ್ತಿ ಜಯಿಸಿದರು. ಇದರೊಂದಿಗೆ ಡಬಲ್ ಕಿರೀಟ ಸಾಧನೆ ಮಾಡಿದರು.

ಅವರು ಸುಮಾರು ಏಳು ತಾಸುಗಳ ಕಾಲ ನಡೆದ ಫೈನಲ್‌ನಲ್ಲಿ 6-4ರಿಂದ ರೈಲ್ವೆಯ ಕಮಲ್ ಚಾವ್ಲಾ ವಿರುದ್ಧ ಜಯಗಳಿಸಿದರು. ಖಾರ್ ಜಿಮ್ಖಾನಾದ ಬಿಲಿಯರ್ಡ್ಸ್ ಹಾಲ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಬೆಂಗಳೂರು ನಿವಾಸಿ ಪಂಕಜ್ ಅವರು 11-72, 31-58, 95-40, 52-42, 69-43, 43-74, 22-59, 75-62, 84-58 ಮತ್ತು 58-10ರ ಫ್ರೇಮ್‌ಗಳಲ್ಲಿ ಜಯಶಾಲಿಯಾದರು.

ಸೆಮಿಫೈನಲ್‌ನಲ್ಲಿ ಪಂಕಜ್ 5-1 (131-0, 85-43, 82-53, 58-41, 59-83, 70-35) ರಿಂದ ರೈಲ್ವೆಸ್‌ನ ಫೈಸಲ್ ಖಾನ್ ವಿರುದ್ಧ ಜಯಿಸಿದ್ದರು. ಇನ್ನೊಂದು ಸೆಮಿಫೈನಲ್‌ನಲ್ಲಿ ಚಾವ್ಲಾ 5-2 (119-18, 41-46, 51-60, 82-39, 73-0, 86-20, and 62-40) ರಿಂದ ಬಿಪಿಸಿಎಲ್‌ನ ಶ್ರೀಕೃಷ್ಣ ಎದುರು ಗೆದ್ದರು. ಭಾನುವಾರ ಅವರು ಬಿಲಿಯರ್ಡ್ಸ್ ಫೈನಲ್‌ನಲ್ಲಿ ಶ್ರೀಕೃಷ್ಣ ಅವರ ವಿರುದ್ಧ 3 ತಾಸುಗಳ ಹೋರಾಟದ ನಂತರ ಗೆದ್ದಿದ್ದರು. ಪಂಕಜ್ ಈಗಾಗಲೇ 27 ವಿಶ್ವ ಪ್ರಶಸ್ತಿ ಗೆದ್ದಿದ್ದಾರೆ.

ಪಂಕಜ್ ಅಡ್ವಾಣಿ

'ತೂಕ ನಿರ್ವಹಣೆ: ಕ್ರೀಡಾಪಟುಗಳ ಹೊಣೆ'

ನವದೆಹಲಿ (ಪಿಟಿಐ): ಕುಸ್ತಿಯಲ್ಲಿ ದೇಹತೂಕ ನಿರ್ವಹಣೆಯ ನಿಯಮಗಳು ಸ್ಪಷ್ಟವಾಗಿವೆ. ಅವು ಎಲ್ಲ ಸ್ಪರ್ಧಿಗಳಿಗೂ ಒಂದೇ ಆಗಿವೆ. ನಿಗದಿತ ತೂಕಕ್ಕಿಂತ ಹೆಚ್ಚಿದ್ದರೆ ಅದು ನಿಯಮದ ಉಲ್ಲಂಘನೆಯಾಗುತ್ತದೆ. ಮಹಿಳಾ ಕುಸ್ತಿಪಟುಗಳು ತೂಕಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಧರಿಸುವ ಸಿಂಗ್ಲೆಟ್ ಪೋಷಾಕಿನ ತೂಕವನ್ನೂ ಪರಿಗಣಿಸುವುದಿಲ್ಲ. ಆದ್ದರಿಂದ ತಮ್ಮ ನಿಗದಿತ ತೂಕದ ವ್ಯಾಪ್ತಿಯೊಳಗೆ ಇರಬೇಕಾಗಿರುವುದು ಕ್ರೀಡಾಪಟುಗಳ ಹೊಣೆ ಎಂದು ಕ್ರೀಡಾ ಮಧ್ಯಸ್ಥಿಕೆ ನ್ಯಾಯ ಮಂಡಳಿ (ಸಿಎಎಸ್) ಸ್ಪಷ್ಟಪಡಿಸಿದೆ.

ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಮಹಿಳೆಯರ 50 ಕೆ.ಜಿ. ಫ್ರೀಸ್ಟೈಲ್ ಕುಸ್ತಿ ವಿಭಾಗದಲ್ಲಿ 100 ಗ್ರಾಮ್ ಹೆಚ್ಚು ದೇಹತೂಕವಿದ್ದ ಕಾರಣಕ್ಕೆ ವಿನೇಶ್ ಫೋಗಟ್ ಫೈನಲ್ ಬೌಟ್‌ನಿಂದ ಅನರ್ಹಗೊಂಡಿದ್ದರು. ಅವರು ಫೈನಲ್ ತಲುಪಿದ ಕಾರಣಕ್ಕಾಗಿ ಬೆಳ್ಳಿ ನೀಡಬೇಕು ಎಂದು ಸಿಎಎಸ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಮಂಡಳಿಯು ಮೇಲ್ಮನವಿಯನ್ನು ತಿರಸ್ಕರಿಸಿತ್ತು. ಇದರಿಂದಾಗಿ ವಿನೇಶ್ ಖಾಲಿ ಕೈಯಲ್ಲಿ ಸ್ವದೇಶಕ್ಕೆ ಮರಳಿದರು. ವಿನೇಶ್ ಪ್ರಕರಣದ ತೀರ್ಪಿನ ವರದಿಯನ್ನು ಸಿಎಎಸ್ ಸೋಮವಾರ ಪ್ರಕಟಿಸಿದೆ.

'ಅವರ (ವಿನೇಶ್) ದೇಹತೂಕದಲ್ಲಿ 100 ಗ್ರಾಂ ಹೆಚ್ಚು ಇರುವುದರ ಸಾಕ್ಷ್ಯಾಧಾರಗಳು ಇದ್ದವು. ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಅವುಗಳನ್ನೂ ಪರಿಶೀಲಿಸಲಾಗಿದೆ. ಅವರ ಪ್ರಕರಣದಲ್ಲಿ ದಾಖಲಾಗಿರುವ 100 ಗ್ರಾಂ ಸಣ್ಣ ಪ್ರಮಾಣವೆನಿಸಿದರೂ ನಿಗದಿಗಿಂತ ಹೆಚ್ಚುವರಿಯಾಗಿದೆ. ನೀರಿನ ಸೇವನೆ ಮತ್ತು ನೀರಿನ ಧಾರಣದ ಕಾರಣಗಳಿರಬಹುದು. ಅದರಲ್ಲೂ ಋತುಚಕ್ರದ ಪೂರ್ವದ ಹಂತದಲ್ಲಿ ಆಗಿರಬಹುದು' ಎಂದು ಸಿಎಎಸ್ ಉಲ್ಲೇಖಿಸಿದೆ.

ವಿನೇಶ್ ಅವರು ಪ್ಯಾರಿಸ್ ಒಲಿಂಪಿಕ್ಸ್ ಸೆಮಿಫೈನಲ್‌ನಲ್ಲಿ ಕ್ಯೂಬಾದ ಯುಸನೈಲಿಸ್ ಗುಜ್ಮನ್ ಲೋಪೆಜ್ ವಿರುದ್ಧ ಜಯಿಸಿದ್ದರು.

ಸಹೋದರನಿಗೆ ರಾಖಿ ಕಟ್ಟಿದ ಫೋಗಟ್

ಶನಿವಾರ ತವರೂರು ಬಲಾಲಿಗೆ ಮರಳಿದ್ದಾರೆ. ಭಾನುವಾರವೂ ಅವರಿಗೆ ಊರಿನಲ್ಲಿ ಸನ್ಮಾನ ಸಮಾರಂಭಗಳು ಏರ್ಪಟ್ಟಿದ್ದವು. ಸೋಮವಾರ ಒಂದಿಷ್ಟು ನಿರಾಳವಾಗಿದ್ದ ಅವರು ರಕ್ಷಾ ಬಂಧನದ ಅಂಗವಾಗಿ ತಮ್ಮ ಸಹೋದರ ಹರವಿಂದರ್ ಸಿಂಗ್ ಅವರಿಗೆ ರಾಖಿ ಕಟ್ಟಿದರು.

'ಹೋದ ವರ್ಷ ₹ 500 ಕೊಟ್ಟಿದ್ದ ಹರವಿಂದರ್, ಈ ಸಲ ಬರೀ ಹತ್ತು ರೂಪಾಯಿ ಕೊಟ್ಟಿದ್ದಾನೆ' ಎಂದು ವಿನೇಶ್ ತಮ್ಮ ಸಹೋದರನೊಂದಿಗೆ ಲಘು ಹಾಸ್ಯ ಮಾಡುವ ವಿಡಿಯೊವೊಂದನ್ನು ಇನ್ಸ್ಟಾಗ್ರಾಮ್‌ನಲ್ಲಿ ಇದೆ. ಅದನ್ನು ಹರವಿಂದರ್ ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಈ ವಿಡಿಯೋದಲ್ಲಿ ವಿನೇಶ್ ಅವರ ಕೈಗಳಲ್ಲಿ ₹ 500ರ ನೋಟುಗಳ ಬಂಡಲ್ ಇದೆ.

ವಿಶ್ವ ಯೂತ್ ಅಥ್ಲೆಟಿಕ್ಸ್: ರಾಜ್ಯದ 6 ಮಂದಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತಿ ಅಯ್ಯಪ್ಪ ಸೇರಿದಂತೆ ಕರ್ನಾಟಕದ ಆರು ಅಥ್ಲೀಟ್‌ಗಳು ಇದೇ 27ರಿಂದ 31ರವರೆಗೆ ಪೆರುನಲ್ಲಿ ನಡೆಯುವ ವಿಶ್ವ ಅಥ್ಲೆಟಿಕ್ಸ್ (20 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಉನ್ನತಿ (100 ಮೀಟರ್ ಹರ್ಡಲ್ಸ್ ಮತ್ತು 200 ಮೀ), ಶ್ರೇಯಾ ರಾಜೇಶ್ (400 ಮೀ ಹರ್ಡಲ್ಸ್), ಪಾವನಾ ನಾಗರಾಜ್ (ಲಾಂಗ್‌ಜಂಪ್), ನಿಯೋಲ್ ಕಾರ್ನೆಲಿಯೊ, ಸುದೀಕ್ಷಾ ವಿ. (ಮಹಿಳೆಯರ 4x100 ಮೀ ರಿಲೆ) ಮತ್ತು ರಿಹಾನ್ ಸಿ.ಎಚ್. (ಪುರುಷರ 4x400 ಮೀ. ರಿಲೆ) ಸ್ಪರ್ಧಿಸಲಿದ್ದಾರೆ.

ಮಾಜಿ ಅಥ್ಲೀಟ್ ಸಹನಾ ಕುಮಾರಿ ತಂಡಕ್ಕೆ ಮಾರ್ಗದರ್ಶನ ನೀಡುವರು ಕಾರ್ಯದರ್ಶಿ ಎ.ರಾಜವೇಲು ಎಂದು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಅಥ್ಲೆಟಿಕ್ಸ್ (20 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿರುವ ಕರ್ನಾಟಕದ ಅಥ್ಲೀಟ್‌ಗಳಾದ (ಎಡದಿಂದ) ಪಾವನಾ ನಾಗರಾಜ್, ರಿಹಾನ್ ಸಿ.ಎಚ್, ನಿಯೋಲ್ ಕಾರ್ನೆಲಿಯೊ, ಸುದೀಕ್ಷಾ ವಿ, ಶ್ರೇಯಾ ರಾಜೇಶ್ ಮತ್ತು ಉನ್ನತಿ ಅಯ್ಯಪ್ಪ

ಚೆಸ್: ಅಂಕ ಹಂಚಿಕೊಂಡ ಅಭಿಜಿತ್

ಬೆಂಗಳೂರು: ಎರಡನೇ ಶ್ರೇಯಾಂಕದ ಆಟಗಾರ, ಗ್ರ್ಯಾಂಡ್‌ಮಾಸ್ಟರ್ ಅಭಿಜಿತ್ ಗುಪ್ತಾ, ಹರಿಯಾಣದ ಗುರುಗ್ರಾಮದಲ್ಲಿ ನಡೆಯುತ್ತಿರುವ 61ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಮೂರನೇ ಸುತ್ತಿನಲ್ಲಿ ಸೋಮವಾರ ಮಹಾರಾಷ್ಟ್ರದ ಸಿದ್ಧಾಂತ್ ಗವಾಯಿ ಜೊತೆ 'ಡ್ರಾ' ಮಾಡಿಕೊಂಡಿದ್ದು ದಿನದ ಅನಿರೀಕ್ಷಿತ ಎನಿಸಿತು.

ಸಿದ್ಧಾಂತ್ 2057 ರೇಟಿಂಗ್ ಹೊಂದಿದ್ದರೆ, ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್‌ನ ಅಭಿಜಿತ್ 2583ರ ರೇಟಿಂಗ್ ಪಡೆದಿದ್ದಾರೆ. ಹತ್ತನೇ ಬೋರ್ಡ್‌ನಲ್ಲೂ ಅನಿರೀಕ್ಷಿತ ಫಲಿತಾಂಶದಲ್ಲಿ ರೈಲ್ವೇಸ್‌ನ ಎನ್‌.ಆರ್.ವಿಘ್ನೇಶ್ (2.5), ಹರಿಯಾಣದ ಅರ್ಷಪ್ರೀತ್ ಸಿಂಗ್ (2.5) ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು. ಈ ಎರಡು ಅನಿರೀಕ್ಷಿತಗಳನ್ನು ಬಿಟ್ಟರೆ ಉಳಿದಂತೆ ಶ್ರೇಯಾಂಕ ಆಟಗಾರರು ಮುನ್ನಡೆ ಸಾಧಿಸಿದರು.

ಆರು ಬಾರಿಯ ಚಾಂಪಿಯನ್, ಅಗ್ರ ಶ್ರೇಯಾಂಕದ ಸೂರ್ಯಶೇಖರ ಗಂಗೂಲಿ (ಪಿಎಸ್‌ಸಿಬಿ), ಎಸ್.ಪಿ.ಸೇತುರಾಮನ್ (ಪಿಎಸ್‌ಸಿಬಿ), ರೈಲ್ವೇಸ್‌ನ ದೀಪ್ತಾಯನ್ ಘೋಷ್, ಗ್ರ್ಯಾಂಡ್‌ಮಾಸ್ಟರ್ ಕಾರ್ತಿಕ್ ವೆಂಕಟರಾಮನ್ (ಆಂಧ್ರ ಪ್ರದೇಶ), ತಮಿಳುನಾಡಿನ ಇನಿಯನ್, ಮಹಾರಾಷ್ಟ್ರದ ಸಂಕಲ್ಪ್ ಗುಪ್ತಾ, ರೈಲ್ವೇಸ್‌ನ ಮಿತ್ರಬಾ ಗುಹಾ, ಅರಣ್ಯಕ್ ಘೋಷ್, ಕರ್ನಾಟಕದ ವಿಯಾನಿ ಡಿಕುನ್ಹಾ, ಕರ್ನಾಟಕದ ಎ.ಬಾಲಕಿಶನ್ ಅವರು ತಲಾ ಮೂರು ಅಂಕ ಗಳಿಸಿದ ಆಟಗಾರರಲ್ಲಿ ಒಳಗೊಂಡಿದ್ದಾರೆ.

ವಿಯಾನಿ, ಪಂಜಾಬ್‌ನ ಉತ್ಕೃಷ್ಟ್ ತುಲಿ (2) ವಿರುದ್ಧ ಜಯಗಳಿಸಿದರು. ಬಾಲಕಿಶನ್, ಪಂಜಾಬ್‌ನ ಶುಭಂ ಶುಕ್ಲಾ (2) ವಿರುದ್ಧ ಜಯಗಳಿಸಿದರು.

'ಬ್ಯಾಸ್ಕೆಟ್‌ಬಾಲ್ ಆಟಗಾರರಿಗೆ ಮಾಸಿಕ ವೇತನ'

ಬೆಂಗಳೂರು: ಸಂಭಾವನೆಯಿಲ್ಲದೆ ಹೈರಾಣಾಗಿರುವ ಬ್ಯಾಸ್ಕೆಟ್‌ಬಾಲ್ ಆಟಗಾರರಿಗೆ ಆರ್ಥಿಕ ಉತ್ತೇಜನ ನೀಡಲು ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಮುಂದಾಗಿದೆ.

ಬಿಎಫ್‌ಐ ಅಧ್ಯಕ್ಷ ಆಧವ್ ಅರ್ಜುನ ಈ ವಿಷಯವನ್ನು ಸೋಮವಾರ 'ಪ್ರಜಾವಾಣಿ'ಗೆ ಖಚಿತಪಡಿಸಿದ್ದಾರೆ. 'ಬಿಎಫ್‌ಐ ಸುಮಾರು ₹ 14 ಕೋಟಿ ಆದಾಯವನ್ನು ಸುತ್ತು ನಿಧಿಯಿಂದ ಗಳಿಸಿದೆ. ಹೀಗಾಗಿ, ಕೆಲ ಆಟಗಾರರಿಗೆ ಮಾಸಿಕ ವೇತನ ನೀಡಲು ನಮ್ಮ ಬಳಿ ಆರ್ಥಿಕ ಸಂಪನ್ಮೂಲವಿದ್ದು, ಅದಕ್ಕಾಗಿ ಸರ್ಕಾರವನ್ನು ಅವಲಂಬಿಸಬೇಕಾಗಿಲ್ಲ' ಎಂದು ಅವರು ಹೇಳಿದ್ದಾರೆ.

'ಕೆಲವು ಅತ್ಯುತ್ತಮ ಆಟಗಾರರು ತಮ್ಮ ಉದ್ಯೋಗದಾತ ಸಂಸ್ಥೆಗಳಿಂದ ಕನಿಷ್ಠ ವೇತನವನ್ನು ಪಡೆಯುತ್ತಿದ್ದಾರೆ ಎಂಬುದು ನಮ್ಮ ಗಮನದಲ್ಲಿದೆ. ಹೀಗಾಗಿ, ಆರ್ಥಿಕ ನೆರವು ನೀಡಲು ಯೋಜನೆ ರೂಪಿಸುತ್ತಿದ್ದೇವೆ' ಎಂದಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ಬಿಎಫ್‌ಐ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾಸಿಕ ವೇತನದ ವಿವರಗಳು ಸ್ಪಷ್ಟವಾಗಲಿದೆ. ಆಯ್ಕೆ ಸಮಿತಿಯ ಪ್ರತಿಭಾಶೋಧ ವಿಭಾಗವು ಒಟ್ಟು 32 ಆಟಗಾರರನ್ನು ಈ ಯೋಜನೆಗೆ ಆಯ್ಕೆ ಮಾಡಲಿದೆ. ಪುರುಷರು, ಮಹಿಳೆಯರು ಮತ್ತು 18 ವರ್ಷದೊಳಗಿನ ಆಟಗಾರರು ಇದರಲ್ಲಿ ಸೇರಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಆಟಗಾರರನ್ನು ಎ ಮತ್ತು ಬಿ ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಎ ಗುಂಪಿನ ಆಟಗಾರರು ತಿಂಗಳಿಗೆ ₹ 1 ಲಕ್ಷ ಮತ್ತು ಬಿ ಗುಂಪಿನ ಆಟಗಾರರು ₹ 50,000 ವೇತನ ಪಡೆಯಲಿದ್ದಾರೆ.

ಪ್ರತಿ ರಾಷ್ಟ್ರೀಯ ಮಟ್ಟದ ಟೂರ್ನಿಯ ಕೊನೆಯಲ್ಲಿ ಆಟಗಾರರ ಪಟ್ಟಿಯನ್ನು ನವೀಕರಿಸಲಾಗುತ್ತದೆ. ಇದಲ್ಲದೆ, ಮುಂದಿನ ಋತುವಿನಲ್ಲಿ ಅವರು ಯೋಜನೆಗೆ ಅರ್ಹರಾಗುತ್ತಾರೆಯೇ ಎಂದು ನಿರ್ಣಯಿಸಲು ಪ್ರತಿ ಆರು ತಿಂಗಳಿಗೊಮ್ಮೆ ಈ ಆಟಗಾರರ ಮೇಲೆ ಪ್ರಮಾಣೀಕೃತ ಫಿಟ್‌ನೆಸ್ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

ಯೋಜನೆ ಕೈಬಿಡುವಂತೆ ನಾಡಿನ ಪ್ರಜ್ಞಾವಂತರಿಂದ ಮುಖ್ಯಮಂತ್ರಿಗೆ ಬಹಿರಂಗ ಪತ್ರ

ಬೆಂಗಳೂರಿಗೆ ಶರಾವತಿ ನೀರು; ವಿರೋಧ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಲಿಂಗನಮಕ್ಕಿ ಜಲಾಶಯದ ಶರಾವತಿ ಹಿನ್ನೀರು ಪ್ರದೇಶದಿಂದ ಬೆಂಗಳೂರು ಮಹಾನಗರಕ್ಕೆ ನೀರು ತರುವ ಯೋಜನೆ ಕೈಬಿಟ್ಟು ಪಶ್ಚಿಮಘಟ್ಟವನ್ನು ಉಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಾಡಿನ ಪ್ರಜ್ಞಾವಂತರು ಬಹಿರಂಗ ಪತ್ರ ಬರೆದಿದ್ದಾರೆ.

ಜಗತ್ತಿನ ಅತ್ಯಂತ ಅಪರೂಪದ, ಅತಿ ಸೂಕ್ಷ್ಮ ಜೀವ ವೈವಿಧ್ಯದ ತಾಣವಾದ ಶರಾವತಿ ಕೊಳ್ಳದಿಂದ ನೀರು ತರುವ ಯೋಜನೆ ಕೈಗೆತ್ತಿಕೊಳ್ಳಲು ಸರ್ಕಾರ ಮತ್ತೆ ಮುಂದಾಗಿದೆ. ಆದರೆ, ಈ ಯೋಜನೆ ಶರಾವತಿ ಕೊಳ್ಳವಷ್ಟೇ ಅಲ್ಲದೆ, ಪಶ್ಚಿಮಘಟ್ಟದ ಪರಿಸರ ಸಮತೋಲನದ ಮೇಲೆ ಅಪಾಯಕಾರಿ ಪರಿಣಾಮ ಬೀರಲಿದೆ ಎಂದು ಈಗಾಗಲೇ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು, ಹಲವು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ ಎಂದು ಅವರು ವಿವರಿಸಿದ್ದಾರೆ.

'2019ರಲ್ಲಿ ಬಿಜೆಪಿ ನೇತೃತ್ವದ ಆಡಳಿತ ಮಲೆನಾಡು ಜನರ ನಿರಂತರ ಹೋರಾಟಕ್ಕೆ ಮಣಿದು ಯೋಜನೆಯನ್ನು ಕೈಬಿಟ್ಟಿತ್ತು. 5 ವರ್ಷಗಳಲ್ಲೇ ಸರ್ಕಾರ ಮತ್ತೊಮ್ಮೆ ಶರಾವತಿ ನದಿ ನೀರಿನ ಮೇಲೆ ದೃಷ್ಟಿ ನೆಟ್ಟಿದೆ. ಆದರೆ, ರಾಜ್ಯದ ಅತ್ಯಂತ ಅಪರೂಪದ ಸಿಂಗಳೀಕ (ಲೈಯನ್ ಟೇಲ್ಡ್ ಮಕಾಕಿ- ಎಲ್‌ಟಿಎಂ) ಸಂರಕ್ಷಿತ ಅಭಯಾರಣ್ಯವನ್ನೂ ಒಳಗೊಂಡಂತೆ ಮಹತ್ವದ ಜೀವ ಸಂಕುಲ, ಸಾವಿರಾರು ಎಕರೆ ಕಾಡು ಮತ್ತು ರೈತಾಪಿ ಜನರ ಜಮೀನು ನಾಶ ಮಾಡಿ, ₹ 12,000 ಕೋಟಿ ರೂಪಾಯಿಗೂ ಹೆಚ್ಚು ಜನರ ತೆರಿಗೆ ಹಣ ಪೋಲು ಮಾಡುವ ಈ ಯೋಜನೆಗೆ ನಮ್ಮ ಸ್ಪಷ್ಟ ವಿರೋಧವಿದೆ. ಏಕೆಂದರೆ, ಜೀವನದಿಯನ್ನು ಬತ್ತಿಸಿ ಬೆಂಗಳೂರಿಗೆ ನೀರು ತರುವುದು ವೈಜ್ಞಾನಿಕವಾಗಿ ಮಾತ್ರವಲ್ಲದೆ, ವಿವೇಚನೆಯ ದೃಷ್ಟಿಯಿಂದಲೂ ಒಪ್ಪುವಂತಹ ಚಿಂತನೆಯಲ್ಲ' ಎಂದು ತಿಳಿಸಲಾಗಿದೆ.

ಎತ್ತಿನಹೊಳೆ ಯೋಜನೆ ಗಮನಿಸಿದರೆ ಇದು ಮೂಲತಃ ಗುತ್ತಿಗೆದಾರರ ಮೂಲಕ ಭ್ರಷ್ಟಾಚಾರದ ಹೊಳೆ ಹರಿಸುವ ಇನ್ನೊಂದು ಯೋಜನೆಯಾಗಲಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಬೆಂಗಳೂರಿಗೆ ಅಗತ್ಯವಿರುವ 15 ಟಿಎಂಸಿ ಅಡಿಗಿಂತ ಅಧಿಕ ನೀರು ಸಿಗುವ ಮಹಾನಗರದಲ್ಲಿ ಮಳೆ ನೀರು ಇಂಗಿಸುವ ಮತ್ತು ಕೆರೆಕಟ್ಟೆಗಳ ಪುನರುಜ್ಜೀವನ ಕೈಗೆತ್ತಿಕೊಳ್ಳುವುದೊಂದೇ ವಿವೇಚನೆಯ ಮಾರ್ಗ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಶರಾವತಿ ನೀರನ್ನು ಬೆಂಗಳೂರಿಗೆ ತರುವ ಪರಿಸರ ಘಾತುಕ, ಜೀವವಿರೋಧಿ ಯೋಜನೆ ಕೈಬಿಡಬೇಕು. ಆ ಮೂಲಕ ನಾಡಿನ ಕಾಡು ಮತ್ತು ನಾಡಿನ ಸ್ವಾಸ್ಥ್ಯ ಕಾಯುವ ತನ್ನ ಹೊಣೆಗಾರಿಕೆ ತೋರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಲಾಗಿದೆ.ಶರಾವತಿ ನದಿ ಉಳಿಸಿ ಹೋರಾಟ ಒಕ್ಕೂಟದ ಪರವಾಗಿ ಸಾಹಿತಿಗಳಾದ ನಾ.ಡಿಸೋಜಾ, ಬಂಜಗೆರೆ ಜಯಪ್ರಕಾಶ್, ರಹಮತ್ ತರೀಕೆರೆ, ಪುರುಷೋತ್ತಮ ಬಿಳಿಮಲೆ, ರಾಜೇಂದ್ರ ಚೆನ್ನಿ, ಶ್ರೀಕಂಠ ಕೂಡಿಗೆ, ಕವಲಕ್ಕಿಯ ಡಾ.ಎಚ್.ಎಸ್. ಅನುಪಮಾ, ಹಿರಿಯ ಪತ್ರಕರ್ತ ನಾಗೇಶ ಹೆಗಡೆ, ಹೊಸನಗರ ಮೂಲೆಗದ್ದೆ ಮಠದ ಅಭಿನವ ಚನ್ನಬಸವ ಸ್ವಾಮೀಜಿ, ಹೆಗ್ಗೋಡಿನ ಚಿದಂಬರರಾವ್ ಜಂಬೆ, ಧಾರವಾಡದ ಶಾರದಾ ಗೋಪಾಲ, ಮೈಸೂರಿನ ಹೊರೆಯಾಲ ದೊರೆಸ್ವಾಮಿ, ಕಲಬುರ್ಗಿಯ ಡಾ.ಪ್ರತಾಪ್ ಸಿಂಗ್ ತಿವಾರಿ, ಚಿಕ್ಕಬಳ್ಳಾಪುರದ ಆಂಜನೇಯ ರೆಡ್ಡಿ, ರೈತ ಸಂಘದ ಕೆ.ಟಿ.ಗಂಗಾಧರ, ಎಚ್.ಆರ್.ಬಸವರಾಜಪ್ಪ ಸೇರಿದಂತೆ 65 ಜನ ಸಹಿ ಹಾಕಿದ್ದಾರೆ.

ರಾಜ್ಯದ ಕೆಲವೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ದಾವಣಗೆರೆ/ಚಿಕ್ಕಮಗಳೂರು: ರಾಜ್ಯದ ಕೆಲವೆಡೆ ಸೋಮವಾರ ಮಳೆಯಾಗಿದೆ. ದಾವಣಗೆರೆ ನಗರವೂ ಸೇರಿ ಜಿಲ್ಲೆಯ ವಿವಿಧೆಡೆ ಬಿರುಗಾಳಿ ಸಹಿತ ಉತ್ತಮ ಮಳೆ ಸುರಿದಿದೆ.

ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಗುಡುಗು ಸಹಿತ ಭಾರಿ ಮಳೆ ಸುರಿಯಿತು. ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ಬಿಸಿಲು ಮತ್ತು ವಿಪರೀತ ಸೆಕೆ ವಾತಾವರಣ ಇತ್ತು. ಸಂಜೆ ಬಳಿಕ ಧಾರಾಕಾರ ಮಳೆ ಸುರಿಯಿತು. ಕಳಸ, ಕೊಪ್ಪ, ಬಾಳೆಹೊನ್ನೂರು, ಎನ್.ಆರ್. ಪುರ ಸುತ್ತಮುತ್ತ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ.

ಬಾಳೆಹೊನ್ನೂರು, ಕಳಸ ತಾಲ್ಲೂಕಿನ ಸಂಸೆಯಲ್ಲಿ ಅರ್ಧಗಂಟೆ ಸುರಿದ ಮಳೆಗೆ ರಸ್ತೆ ಮತ್ತು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತು. ಸೋಮವಾರ ನಸುಕಿನಲ್ಲಿ ಆರಂಭವಾದ ಮಳೆ ಚನ್ನಗಿರಿ ತಾಲ್ಲೂಕಿನಲ್ಲಿ ಉತ್ತಮವಾಗಿ ಸುರಿದಿದೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿ ಭಾರಿ ಮಳೆಯಾಗಿದೆ. ತಾಲ್ಲೂಕಿನ ಚಿಕ್ಕಜಾಜೂರು ಹೋಬಳಿ ವ್ಯಾಪ್ತಿಯಲ್ಲಿ ಕೆಲ ಮನೆಗಳ ಗೋಡೆಗಳು ಕುಸಿದಿದ್ದು, ನಿವಾಸಿಗಳಿಗೆ ಸಮಸ್ಯೆ ಉಂಟಾಗಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರದ ಸುತ್ತಮುತ್ತ ರಭಸದ ಮಳೆ ಸುರಿದಿದ್ದು, ಭತ್ತದ ಗದ್ದೆಗಳು, ಅಡಿಕೆ ತೋಟಗಳು ಜಲಾವೃತವಾಗಿವೆ. ಗುಡುಗು, ಮಿಂಚು ಸಹಿತ ಅಬ್ಬರದ ಮಳೆಯಿಂದಾಗಿ ಮುಂಬಾಳು ಗ್ರಾಮದ ನೂರಾರು ಎಕರೆ ಜಮೀನು ಜಲಾವೃತವಾಗಿದೆ.

ಬೀದರ್ ವರದಿ: ಜಿಲ್ಲೆಯ ಹುಲಸೂರ ಮತ್ತು ಕಮಲನಗರದಲ್ಲಿ ಬಿರುಸಿನ ಮಳೆಯಾಗಿದೆ. ಭಾನುವಾರ ರಾತ್ರಿಯಿಂದ ಬಿಟ್ಟು ಬಿಟ್ಟು ವರ್ಷಧಾರೆಯಾಗುತ್ತಿದೆ. ಬೀದರ್ ನಗರ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ಜಿಟಿಜಿಟಿ ಮಳೆಯಾಗಿದೆ.

ಚಾಮರಾಜನಗರ ವರದಿ: ಜಿಲ್ಲೆಯಾದ್ಯಂತ ಸೋಮವಾರ ಉತ್ತಮ ಮಳೆ ಸುರಿಯಿತು. ರಾಜಕಾಲುವೆ ಉಕ್ಕಿದ ಪರಿಣಾಮ ಬಿ.ರಾಚಯ್ಯ ಜೋಡಿ ರಸ್ತೆಗೆ ತ್ಯಾಜ್ಯ ಹರಿದು ಸುಗಮ ಸಂಚಾರಕ್ಕೆ ಅಡ್ಡಿಯಾಯಿತು. ಚೆನ್ನಾಪುರದ ಮೊಳೆ ರಸ್ತೆಯಲ್ಲಿ ಚರಂಡಿ ತುಂಬಿ ರಸ್ತೆಗೆ ಹರಿದು ನಿವಾಸಿಗಳು ಸಮಸ್ಯೆ ಅನುಭವಿಸಿದರು.

ಹುಬ್ಬಳ್ಳಿ ವರದಿ : ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಕೆಲವೆಡೆ ರಭಸದ ಮಳೆಯಾಗಿದೆ. ವಿಜಯಪುರ ಜಿಲ್ಲೆ ನಾಲತವಾಡ ಪಟ್ಟಣದಲ್ಲಿ ಮಧ್ಯಾಹ್ನ ಒಂದು ಗಂಟೆಗೂ ಹೆಚ್ಚು ಸಮಯ ರಭಸದ ಮಳೆಯಾದ್ದರಿಂದ ಸಂತೆ ಮಾರುಕಟ್ಟೆ ಅಸ್ತವ್ಯಸ್ತಗೊಂಡಿತು.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪಟ್ಟಣ ಸೇರಿ ಗ್ರಾಮೀಣ ಪ್ರದೇಶದಲ್ಲಿ ನಸುಕಿನಲ್ಲಿ ಹಾಗೂ ಸಂಜೆ ಗುಡುಗು-ಸಿಡಿಲಿನ ಆರ್ಭಟದೊಂದಿಗೆ ಒಂದು ಗಂಟೆಗೂ ಹೆಚ್ಚು ಸಮಯ ಧಾರಾಕಾರ ಮಳೆಯಾಗಿದೆ.

ಎಂಪಾಕ್ಸ್ ಸೋಂಕು: ಕಟ್ಟೆಚ್ಚರಕ್ಕೆ ಸೂಚನೆ

ನವದೆಹಲಿ (ಪಿಟಿಐ): ವಿವಿಧ ದೇಶಗಳಲ್ಲಿ ಎಂಪಾಕ್ಸ್ (ಮಂಕಿಪಾಕ್ಸ್) ಸೋಂಕು ವ್ಯಾಪಿಸುತ್ತಿರುವುದರಿಂದ ಎಲ್ಲ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ಸೂಚಿಸಿದೆ.

ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ಗಡಿಯಲ್ಲಿರುವ ಚೆಕ್‌ಪೋಸ್ಟ್‌ಗಳಲ್ಲೂ ಜಾಗರೂಕತೆ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ. ವಿದೇಶಗಳಿಂದ ಬರುವವರಲ್ಲಿ ಎಂಪಾಕ್ಸ್ ಸೋಂಕಿನ ಲಕ್ಷಣಗಳು ಇವೆಯೇ ಎಂಬ ಬಗ್ಗೆ ನಿಗಾ ವಹಿಸುವಂತೆ ಹೇಳಿದೆ.

ದೇಶದಲ್ಲಿ ಇದುವರೆಗೆ ಎಂಪಾಕ್ಸ್ ಸೋಂಕು ಎಲ್ಲೂ ದೃಢಪಟ್ಟಿಲ್ಲ ಎಂದು ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ. ಸೋಂಕು ದೃಢಪಟ್ಟರೆ ಅವರ ಪ್ರತ್ಯೇಕ ವಾಸ ಮತ್ತು ಚಿಕಿತ್ಸೆಗಾಗಿ ದೆಹಲಿಯ ರಾಮ ಮನೋಹರ್ ಲೋಹಿಯಾ, ಸಫ್ದರ್‌ಜಂಗ್ ಮತ್ತು ಲೇಡಿ ಹಾರ್ಡಿಂಗ್ ಆಸ್ಪತ್ರೆಗಳನ್ನು ನೋಡಲ್ ಕೇಂದ್ರಗಳಾಗಿ ಗುರುತಿಸಿದೆ. ಇದೇ ರೀತಿಯ ನೋಡಲ್ ಕೇಂದ್ರಗಳನ್ನು ಗುರುತಿಸುವಂತೆ ಎಲ್ಲ ರಾಜ್ಯಗಳಿಗೂ ಸೂಚಿಸಿದೆ.

ಪಾಕಿಸ್ತಾನದಲ್ಲಿ ಮತ್ತೊಬ್ಬರಿಗೆ 'ಎಂ–ಪಾಕ್ಸ್'

ಇಸ್ಲಾಮಾಬಾದ್ (ಪಿಟಿಐ): ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮಂಕಿ–ಪಾಕ್ಸ್ (ಎಂ–ಪಾಕ್ಸ್) ಲಕ್ಷಣ ಇರುವ ಮತ್ತೊಬ್ಬ ವ್ಯಕ್ತಿಯನ್ನು ಪತ್ತೆಹಚ್ಚಲಾಗಿದ್ದು, ಈ ರೋಗದ ಶಂಕೆ ಇರುವವರ ಸಂಖ್ಯೆ ನಾಲ್ಕಕ್ಕೆ ಏರಿದಂತೆ ಆಗಿದೆ.

ದಕ್ಷಿಣ ಅರೇಬಿಯಾಗೆ ಇತ್ತೀಚೆಗೆ ಪ್ರವಾಸ ಮಾಡಿ ಮರಳಿದ್ದ 47 ವರ್ಷದ ವ್ಯಕ್ತಿಗೆ ಮಂಕಿ–ಪಾಕ್ಸ್ ಇರುವುದಾಗಿ ಶಂಕಿಸಲಾಗಿದೆ ಎಂದು ಪಾಕಿಸ್ತಾನ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ವೈದ್ಯ ಡಾ. ನಸೀಮ್ ಅಖ್ತರ್ ಸೋಮವಾರ ತಿಳಿಸಿದ್ದಾರೆ.

ರಾಜ್ಯಪಾಲರ ಬಗ್ಗೆ ಅವಹೇಳನ: ಬಿಜೆಪಿಯಿಂದ ದೂರು

ಪ್ರಜಾವಾಣಿ ವಾರ್ತೆ

ಮಂಡ್ಯ: 'ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಬಗ್ಗೆ ಹಗುರವಾಗಿ ಮಾತನಾಡಿರುವ ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರಿಗೆ ಸೋಮವಾರ ದೂರು ನೀಡಿದರು.

'ಸದನದಲ್ಲಿ ಶಾಸಕರಿಗೆ ಕನ್ನಡ ವ್ಯಾಕರಣದ ಬಗ್ಗೆ ಪಾಠ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪಕ್ಷದ ಶಾಸಕ ನರೇಂದ್ರಸ್ವಾಮಿಗೆ ಏಕವಚನ, ಬಹುವಚನದ ಪಾಠ ಹೇಳಿಕೊಡಬೇಕು' ಎಂದು ಒತ್ತಾಯಿಸಿದರು.

'ರಾಜ್ಯಪಾಲರು ಸಂವಿಧಾನ ರಕ್ಷಣೆಯ ಹೊಣೆ ಹೊತ್ತಿದ್ದಾರೆ. ಅಂಥ ಗೌರವಾನ್ವಿತ ಹುದ್ದೆಯಲ್ಲಿರುವವರ ಬಗ್ಗೆ ಶಾಸಕರು ಏಕವಚನದಲ್ಲಿ ಮಾತನಾಡಿ ಸಂವಿಧಾನಕ್ಕೆ ಅಗೌರವ ತಂದಿದ್ದಾರೆ. ಮಾಜಿ ಸಚಿವೆ ಶಶಿಕಲಾ ಜೊಲ್ಲೆಯವರ ಬಗ್ಗೆಯೂ ಕೀಳುಮಟ್ಟದ ಭಾಷೆ ಬಳಸಿದ್ದಾರೆ' ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ. ಮಂಜುನಾಥ್, ಹೊಸಹಳ್ಳಿ ಶಿವು, ಶಿವಲಿಂಗಯ್ಯ, ನಾಗಾನಂದ್, ಶಿವಕುಮಾರ್, ಹನುಮಂತು, ಪ್ರಸನ್ನ, ಚಂದ್ರು ಇದ್ದರು.

ನಕಲಿ ಎನ್‌ಸಿಸಿ ಶಿಬಿರ: ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ

ಒಂದನೇ ಪುಟದಿಂದ...

ಪೋಕ್ಸೊ ಕಾಯ್ದೆಯಡಿ ಪ್ರಕರಣ: ಈ ಆರೋಪಿಗಳ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತಲೆಮರೆಸಿಕೊಂಡಿದ್ದ ಶಿವರಾಮನ್ ಅನ್ನು ಸೋಮವಾರ ಬೆಳಿಗ್ಗೆ ಕೊಯಮತ್ತೂರಿನಲ್ಲಿ ಪತ್ತೆ ಹಚ್ಚಿ, ಬಂಧಿಸಲಾಯಿತು ಎಂದು ಅವರು ವಿವರಿಸಿದ್ದಾರೆ.

ಕೃಷ್ಣಗಿರಿ ಜಿಲ್ಲೆಯ ಬರ್ಗೂರ್‌ನಲ್ಲಿ ಆಗಸ್ಟ್ 5ರಿಂದ ಆಗಸ್ಟ್ 9ರ ನಡುವೆ ಈ ಘಟನೆ ನಡೆದಿದೆ. ತಮಿಳು ರಾಷ್ಟ್ರೀಯವಾದಿ ಸಂಘಟನೆ 'ನಾಮ್ ತಮಿಳರ್ ಕಚ್ಚಿ'ಯ (ಎನ್‌ಟಿಕೆ) ಪದಾಧಿಕಾರಿಯಾದ ಶಿವರಾಮನ್ ಎನ್‌ಸಿಸಿಯ ಭಾಗವಾಗಿದ್ದಾರೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸದೇ ಶಾಲೆಯವರು ಎನ್‌ಸಿಸಿ ಶಿಬಿರ ನಡೆಸಲು ಅವರಿಗೆ ಅನುಮತಿ ನೀಡಿದ್ದರು ಎಂದು ಗೊತ್ತಾಗಿದೆ. 17 ಬಾಲಕಿಯರು ಸೇರಿದಂತೆ ಒಟ್ಟು 41 ವಿದ್ಯಾರ್ಥಿಗಳು ಈ ನಕಲಿ ಎನ್‌ಸಿಸಿ ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರದ ಕೊನೆಯ ದಿನ ಶಿವರಾಮನ್, ಎಂಟನೇ ತರಗತಿ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ಮುಚ್ಚಿಹಾಕಲು ಯತ್ನಿಸಿದ್ದ ಶಾಲೆ: 'ಬಾಲಕಿಯು ನಡೆದ ಘಟನೆಯ ಕುರಿತು ಪ್ರಾಚಾರ್ಯರಿಗೆ ತಿಳಿಸಿದಾಗ, ಅದನ್ನು ಗಂಭೀರವಾಗಿ ಪರಿಗಣಿಸದೆ ಪ್ರಕರಣ ಮುಚ್ಚಿಹಾಕಲು ಆಡಳಿತ ಮಂಡಳಿ ಯತ್ನಿಸಿತ್ತು. ಈ ಬಗ್ಗೆ ಬಾಲಕಿಯ ಪೋಷಕರು ಆಗಸ್ಟ್ 16ರಂದು ದೂರು ನೀಡಿದ ಕೂಡಲೇ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಲಾಯಿತು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿ. ತಂಗದೊರೆ 'ಪ್ರಜಾವಾಣಿ'ಗೆ ಹೇಳಿದ್ದಾರೆ.

ಎಸ್‌ಒಪಿ ಪಾಲನೆಯಾಗಿಲ್ಲ: 'ಶಿಬಿರದಲ್ಲಿ ಬಾಲಕಿಯರು ಪಾಲ್ಗೊಂಡಿದ್ದಾಗ, ರಾತ್ರಿ ವೇಳೆಯಲ್ಲಿ ಅವರೊಂದಿಗೆ ಶಿಕ್ಷಕಿ ಇರಬೇಕು ಎಂಬ ನಿಯಮವನ್ನು ಈ ಶಾಲೆ ಪಾಲನೆ ಮಾಡಿಲ್ಲ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

'ಈ ಪ್ರಕರಣ ಸಂಬಂಧ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಪ್ರತ್ಯೇಕ ವಿಚಾರಣೆ ನಡೆಸುತ್ತಿದ್ದಾರೆ. ಸಂತ್ರಸ್ತ ಬಾಲಕಿಯರು ಮತ್ತು ಅವರ ಪೋಷಕರಿಗೆ ಆಪ್ತ ಸಮಾಲೋಚನೆ ನೀಡಲಾಗುತ್ತಿದೆ' ಎಂದು ಹೇಳಿದ ಅವರು, ಶಿಬಿರ ನಡೆಸುವುದಾಗಿ ಬಂದ ವ್ಯಕ್ತಿಯ ಪೂರ್ವಾಪರ ಪರಿಶೀಲಿಸುವಲ್ಲಿ ಶಾಲೆ ವಿಫಲವಾಗಿದೆ ಎಂದಿದ್ದಾರೆ. 'ಖಾಸಗಿ ಶಾಲೆಯಲ್ಲಿ ನಡೆದ ಶಿಬಿರಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ' ಎಂದು ಎನ್‌ಸಿಸಿ ಸ್ಪಷ್ಟಪಡಿಸಿದೆ.

ನರ್ಸ್ ಮೇಲೆ ವೈದ್ಯನಿಂದ ಅತ್ಯಾಚಾರ

ಒಂದನೇ ಪುಟದಿಂದ...

ಪೊಲೀಸರಿಗೆ ದೂರು ನೀಡಿದರೆ ಗಂಭೀರ ಪರಿಣಾಮ ಎದುರಿಸಬೇಕಾಗಬಹುದು ಎಂದು ಆರೋಪಿಗಳು ಸಂತ್ರಸ್ತೆಯನ್ನು ಬೆದರಿಸಿದ್ದು, ವಿಷಯ ಬಹಿರಂಗಪಡಿಸದಂತೆ ಹಣದ ಆಮಿಷ ಕೂಡಾ ಒಡ್ಡಿದ್ದಾರೆ. ಆದರೆ, ಸಂತ್ರಸ್ತೆಯು ಘಟನೆಯನ್ನು ಹೆತ್ತವರಿಗೆ ತಿಳಿಸಿದ್ದು, ಅವರು ಭಾನುವಾರ ದೂರು ನೀಡಿದ್ದಾರೆ. ಕೆಲ ದಿನಗಳ ಹಿಂದೆ ನೆರೆಯ ಉತ್ತರಾಖಂಡ ರಾಜ್ಯದಲ್ಲಿ ನರ್ಸ್ ಒಬ್ಬರ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿತ್ತು. ಸಂತ್ರಸ್ತೆಯ ಮೃತದೇಹ ಉತ್ತರ ಪ್ರದೇಶದ ಬಿಲಾಸಪುರ ಪ್ರದೇಶದಲ್ಲಿ ಪತ್ತೆಯಾಗಿತ್ತು. ಆರೋಪಿಯನ್ನು ರಾಜಸ್ಥಾನದ ಜೋಧಪುರದಲ್ಲಿಬಂಧಿಸಲಾಗಿತ್ತು.

ಸಮಗ್ರ ತನಿಖೆಗೆ 2014ರಲ್ಲೇ ಆದೇಶ: ಆರೋಪ

'ಎಚ್‌ಡಿಕೆ ಕುಟುಂಬದಿಂದ ಭೂಅಕ್ರಮ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ಅವರ ಸಂಬಂಧಿಕರು ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿಯ ಗೋಮಾಳದ ಜಾಗವನ್ನು ಅತಿಕ್ರಮಣ ಮಾಡಿದ್ದಾರೆ' ಎಂದು ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್.ಹಿರೇಮಠ ಆರೋಪಿಸಿದರು.

'ಎಚ್.ಡಿ.ಕುಮಾರಸ್ವಾಮಿ, ಅವರ ಚಿಕ್ಕಮ್ಮ ಸಾವಿತ್ರಮ್ಮ ಮತ್ತು ಸಂಬಂಧಿ ಡಿ.ಸಿ.ತಮ್ಮಣ್ಣ ಕುಟುಂಬದವರು ಜಾಗ ಕಬಳಿಸಿದ್ದಾರೆ. ಇದರ ಬಗ್ಗೆ ಸಮಗ್ರ ತನಿಖೆ ನಡೆಸಲು 2014ರ ಆಗಸ್ಟ್ 5ರಂದು ಆದೇಶವಾಗಿತ್ತು' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಮಂಜೂರಾತಿ ದಾಖಲೆಪತ್ರಗಳು ಸಿಗದಿದ್ದರೆ, ತಪ್ಪಿತಸ್ಥರ ವಿರುದ್ಧ ನೋಟಿಸ್ ಜಾರಿಗೊಳಿಸಿ ಸರ್ಕಾರವು ಜಾಗವನ್ನು ವಶಕ್ಕೆ ಪಡೆಯಬೇಕು. ಅಕ್ರಮ, ಒತ್ತುವರಿಗೆ ಸಹಕರಿಸಿದ ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ನಾಲ್ಕು ತಿಂಗಳಲ್ಲಿ ತನಿಖೆ ಮುಗಿಸಿ, ಕ್ರಮ ಕೈಗೊಂಡು ಅನುಪಾಲನಾ ವರದಿ ಸಲ್ಲಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿತ್ತು' ಎಂದರು.

ಜಾಗ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಪತ್ರಗಳನ್ನು ದಿ. ಜಿ. ಮಾದೇಗೌಡ ಅವರಿಂದ ಪಡೆದಿದ್ದೆವು. ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲೂ ದಾವೆ ಹೂಡಿದ್ದೇವೆ

ಎಸ್.ಆರ್.ಹಿರೇಮಠ, ಸಂಸ್ಥಾಪಕ, ಸಮಾಜ ಪರಿವರ್ತನಾ ಸಮುದಾಯ

ಜಾಗ ಒತ್ತುವರಿ ಪ್ರಕರಣದ ಕುರಿತ ಮೂಲ ದಾಖಲೆಗಳು ಲಭ್ಯವಿಲ್ಲ. ಪ್ರಕರಣ ಮುಚ್ಚಿ ಹಾಕಲು ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಪ್ರಯತ್ನಿಸಿದವು. ಒಳ ಒಪ್ಪಂದದ ರಾಜಕಾರಣ ನಡೆದಿದೆ.

ರವಿಕೃಷ್ಣಾ ರೆಡ್ಡಿ, ಅಧ್ಯಕ್ಷ, ಕೆಆರ್‌ಎಸ್ ಪಕ್ಷ

ಕೆಆರ್‌ಎಸ್ ಪಕ್ಷದ ರವಿಕೃಷ್ಣಾ ರೆಡ್ಡಿ ಮಾತನಾಡಿ, 'ಎಚ್.ಡಿ.ಕುಮಾರಸ್ವಾಮಿ ಮತ್ತು ಅವರ ಸಂಬಂಧಿಕರು ಅಕ್ರಮವಾಗಿ ಜಾಗ ಕಬಳಿಸಿದ ಬಗ್ಗೆ 'ದಾಖಲೆಗಳು ಮಾತಾಡುತ್ತಿವೆ' ಎಂಬ ಪುಸ್ತಕ ಬಿಡುಗಡೆ ಮಾಡಿದ್ದೇವೆ. 110 ಎಕರೆ ಗೋಮಾಳ ಸಹಿತ 200 ಎಕರೆ ಜಮೀನು ಒತ್ತುವರಿ ಪ್ರಕರಣ ಬಗ್ಗೆ ತನಿಖೆ ನಡೆಸಿ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವಂತೆ 2014ರ ಆಗಸ್ಟ್ 25ರಂದು ರಾಮನಗರ ಉಪ ವಿಭಾಗಾಧಿಕಾರಿ ಬರೆದ ಒಕ್ಕಣೆಯು ಪುಸ್ತಕದಲ್ಲಿದೆ' ಎಂದರು. '40 ವರ್ಷಗಳ ಹಿಂದೆಯೇ ಭೂಕಬಳಿಕೆಯಾಗಿದ್ದು, ಕೇತಗಾನಹಳ್ಳಿಯ ಒತ್ತುವರಿ ಜಾಗದಲ್ಲೇ ಕುಮಾರಸ್ವಾಮಿ ಅವರ ಮನೆ, ತೋಟವಿದೆ. ಬಿಜೆಪಿ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರು ಕೇತಗಾನಹಳ್ಳಿಯಲ್ಲಿ ಜಮೀನು ಇದೆ ಎಂದು 'ಪ್ರಮಾಣಪತ್ರ'ದಲ್ಲಿ (ಅಫಿಡವಿಟ್) ಘೋಷಿಸಿಕೊಂಡಿದ್ದಾರೆ. ಅದು ಗೋಮಾಳಕ್ಕೆ ಸೇರಿದ್ದು, ಅದರ ಬಗ್ಗೆಯೂ ತನಿಖೆಯಾಗಲಿ' ಎಂದರು.

ಪ್ರಮುಖರಾದ ಲಕ್ಷ್ಮಣ ಬಕ್ಕಾಯಿ, ಶಮೀಮ್ ರಹಮತ್ ಮುಲ್ಲಾ ಇದ್ದರು.

ಪ್ರಜಾವಾಣಿ
ಸ್ಪರ್ಧಾ ವಾಣಿ
MASTERMIND
ಆಗಸ್ಟ್ ಸಂಚಿಕೆ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ
ಚಂದಾದಾರಿಕೆ ಕೇವಲ ₹360 ರಿಂದ ಪ್ರಾರಂಭ
ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128
ಸ್ಕ್ಯಾನ್ ಮಾಡಿ ಚಂದಾದಾರರಾಗಿ
*ಷರತ್ತುಗಳು ಅನ್ವಯ

ಮಹಾರಾಜ ಟ್ರೋಫಿ: ಹ್ಯಾಟ್ರಿಕ್ ಜಯ ಸಾಧಿಸಿದ ಮನೀಷ್ ಪಾಂಡೆ ಬಳಗ

ವಿದ್ವತ್ ದಾಳಿ: ಗೆದ್ದ ಹುಬ್ಬಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಗಿ ವಿದ್ವತ್ ಕಾವೇರಪ್ಪ ಅವರ ಪರಿಣಾಮಕಾರಿ ದಾಳಿ ಹಾಗೂ ತಿಪ್ಪಾರೆಡ್ಡಿಯವರ ಉತ್ತಮ ಬ್ಯಾಟಿಂಗ್ ಬಲದಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸತತ ಮೂರನೇ ಜಯ ಸಾಧಿಸಿತು. ಬೆಂಗಳೂರು ಬ್ಲಾಸ್ಟರ್ಸ್ ಮೊದಲ ಸೋಲಿನ ಕಹಿಯುಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು 5 ವಿಕೆಟ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಜಯಿಸಿತು. ಬೆಂಗಳೂರು ತಂಡಕ್ಕೆ ಇದು ನಾಲ್ಕನೇ ಪಂದ್ಯವಾಗಿದೆ. ಕಳೆದ ಮೂರರಲ್ಲಿ ಜಯಿಸಿತ್ತು.

ಟಾಸ್ ಗೆದ್ದ ಹುಬ್ಬಳ್ಳಿ ತಂಡದ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬೆಂಗಳೂರು ತಂಡವು ಆರಂಭಿಕ ಬ್ಯಾಟರ್ ಎಲ್.ಆರ್. ಚೇತನ್ (48; 35ಎ, 4X5, 6X2) ಮತ್ತು ಶುಭಾಂಗ್ ಹೆಗ್ಡೆ (ಔಟಾಗದೆ 52, 36ಎ, 4X5, 6X1) ಅವರ ನೆರವಿನಿಂದ 19.5 ಓವರ್‌ಗಳಲ್ಲಿ 142 ರನ್ ಗಳಿಸಿತು. ವಿದ್ವತ್ ಮತ್ತು ಮನ್ವಂತ್ ಅವರು ತಲಾ 3 ವಿಕೆಟ್ ಗಳಿಸಿದರು. ಅವರಿಬ್ಬರ ದಾಳಿಯ ಮುಂದೆ ಉಳಿದೆಲ್ಲ ಬ್ಯಾಟರ್‌ಗಳೂ ಬೇಗನೆ ಔಟಾದರು.

ಗುರಿ ಬೆನ್ನಟ್ಟಿದ ಹುಬ್ಬಳ್ಳಿ ತಂಡವು 18.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 144 ರನ್ ಗಳಿಸಿ ಗೆದ್ದಿತು. 3ನೇ ಓವರ್‌ನಲ್ಲಿಯೇ ಮೊಹಮ್ಮದ್ ತಾಹ ಔಟಾಗಿದ್ದರಿಂದ ತಂಡವು ಹಿನ್ನಡೆಯ ಆತಂಕ ಎದುರಿಸಿತ್ತು. ಆದರೆ ತಿಪ್ಪಾರೆಡ್ಡಿ (47; 37ಎ, 4X4, 6X3) ಮತ್ತು ಕೃಷನ್ ಶ್ರೀಜಿತ್ (41; 35ಎ, 4X4, 6X1) ಅವರು ತಂಡಕ್ಕೆ ಆಸರೆಯಾದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು. ಇದರಿಂದಾಗಿ ತಂಡವು ಶತಕದ ಗಡಿ ದಾಟಿತು.

ಆದರೆ ತಿಪ್ಪಾರೆಡ್ಡಿ ಮತ್ತು ಶ್ರೀಜಿತ್ ಅವರಿಬ್ಬರೂ ಅರ್ಧಶತಕ ಪೂರೈಸಲು ಬೌಲರ್‌ಗಳು ಬಿಡಲಿಲ್ಲ. ಕ್ರಾಂತಿಕುಮಾರ್ (29ಕ್ಕೆ3) ಮತ್ತು ಶುಭಾಂಗ್ (10ಕ್ಕೆ1) ಮಿಂಚಿದರು. ಆದರೆ ಈ ಸವಾಲು ಮೀರಿ ನಿಂತ ಅನೀಶ್ವರ್ ಗೌತಮ್ (ಔಟಾಗದೆ 14) ಮತ್ತು ಮನ್ವಂತ್ ಕುಮಾರ್ (ಔಟಾಗದೆ 10) ತಂಡವನ್ನು ಗೆಲುವಿನ ದಡ ಸೇರಿಸಿದರು.

ಹುಬ್ಬಳ್ಳಿ ಟೈಗರ್ಸ್ ತಂಡದ ವಿದ್ವತ್ ಕಾವೇರಪ್ಪ ಬೌಲಿಂಗ್ ವೈಖರಿ

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ನೆಟ್ ರನ್‌ರೇಟ್
ಬೆಂಗಳೂರು ಬ್ಲಾಸ್ಟರ್ಸ್	4	3	1	6	1.392
ಹುಬ್ಬಳ್ಳಿ ಟೈಗರ್ಸ್	3	3	0	6	0.939
ಮೈಸೂರು ವಾರಿಯರ್ಸ್	4	2	2	4	0.339
ಮಂಗಳೂರು ಡ್ರ್ಯಾಗನ್ಸ್	3	1	2	2	-0.020
ಗುಲ್ಬರ್ಗ ಮಿಸ್ಟಿಕ್ಸ್	3	1	2	2	-1.592
ಶಿವಮೊಗ್ಗ ಲಯನ್ಸ್	3	0	3	0	-1.618

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 19.5 ಓವರ್‌ಗಳಲ್ಲಿ 142 (ಎಲ್.ಆರ್. ಚೇತನ್ 48, ಶುಭಾಂಗ್ ಹೆಗ್ಡೆ ಔಟಾಗದೆ 52, ವಿದ್ವತ್ ಕಾವೇರಪ್ಪ 23ಕ್ಕೆ3, ಎಲ್. ಮನ್ವಂತ್ ಕುಮಾರ್ 38ಕ್ಕೆ3) **ಹುಬ್ಬಳ್ಳಿ ಟೈಗರ್ಸ್:** 18.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 144 (ತಿಪ್ಪಾ ರೆಡ್ಡಿ 47, ಕ್ರಿಷನ್ ಶ್ರೀಜಿತ್ 41, ಕ್ರಾಂತಿಕುಮಾರ್ 29ಕ್ಕೆ3) **ಫಲಿತಾಂಶ:** ಹುಬ್ಬಳ್ಳಿ ಟೈಗರ್ಸ್ ತಂಡಕ್ಕೆ 5 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ವಿದ್ವತ್ ಕಾವೇರಪ್ಪ.

ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 4 ಕ್ಕೆ 226 (ಎಸ್.ಯು. ಕಾರ್ತಿಕ್ 23, ಕರುಣ್ ನಾಯರ್ ಔಟಾಗದೇ 124; ಅಭಿಲಾಷ್ ಶೆಟ್ಟಿ 27ಕ್ಕೆ 2). **ಮಂಗಳೂರು ಡ್ರ್ಯಾಗನ್ಸ್:** 14 ಓವರ್‌ಗಳಲ್ಲಿ 7 ವಿಕೆಟ್‌ಗೆ 138 (ನಿಕಿನ್ ಜೋಸ್ 32, ಕೃಷ್ಣಮೂರ್ತಿ ಸಿದ್ಧಾರ್ಥ್ 50; ಕೋದಂಡ ಅಜಿತ್ ಕಾರ್ತಿಕ್ 27ಕ್ಕೆ 2, ಜಗದೀಶ ಸುಚಿತ್ 16ಕ್ಕೆ 2). **ಫಲಿತಾಂಶ:** ಮೈಸೂರು ವಾರಿಯರ್ಸ್ ತಂಡಕ್ಕೆ 27 ರನ್‌ಗಳ ಜಯ (ವಿ.ಜಯದೇವನ್ ನಿಯಮದಡಿ). **ಪಂದ್ಯದ ಆಟಗಾರ:** ಕರುಣ್ ನಾಯರ್

ಕರುಣ್ ಶತಕ, ಮೈಸೂರಿಗೆ ಜಯ

ನಾಯಕ ಕರುಣ್ ನಾಯರ್ (ಔಟಾಗದೇ 124; 48ಎ) ಅವರ ಬಿರುಸಿನ ಶತಕದ ಬಲದಿಂದ ಮೈಸೂರು ವಾರಿಯರ್ಸ್ ತಂಡವು ದಿನದ ಮತ್ತೊಂದು ಪಂದ್ಯದಲ್ಲಿ 27 ರನ್‌ಗಳಿಂದ (ವಿ.ಜಯದೇವನ್ ನಿಯಮದಡಿ) ಮಂಗಳೂರು ಡ್ರ್ಯಾಗನ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ವಾರಿಯರ್ಸ್ 20 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗೆ 226 ರನ್ ಗಳಿಸಿ, ಎದುರಾಳಿ ತಂಡಕ್ಕೆ ಕಠಿಣ ಸವಾಲು ನೀಡಿತು. ಆದರೆ, ಮಂಗಳೂರು ತಂಡದ ಇನಿಂಗ್ಸ್ ವೇಳೆ ಮಳೆ ಅಡಚಣೆ ಉಂಟುಮಾಡಿತು. ಹೀಗಾಗಿ, ಗುರಿಯನ್ನು ಪರಿಷ್ಕರಿಸಲಾಯಿತು. ಗೆಲುವಿಗೆ ಮಂಗಳೂರು ತಂಡವು 14 ಓವರ್‌ಗೆ 166 ರನ್ ಗಳಿಸಬೇಕಿತ್ತು. ಆದರೆ, 7 ವಿಕೆಟ್‌ಗೆ 138 ರನ್‌ಗಳಿಸಲಷ್ಟೇ ಶಕ್ತವಾಯಿತು. ಕೃಷ್ಣಮೂರ್ತಿ ಸಿದ್ಧಾರ್ಥ್ (50;37ಎ) ಮತ್ತು ನಿಕಿನ್ ಜೋಸ್ (32;21ಎ) ಕೊಂಚ ಹೋರಾಟ ತೋರಿದರು.

ಇದಕ್ಕೂ ಮೊದಲು ಕರುಣ್, ಎದುರಾಳಿ ತಂಡದ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಕೇವಲ 43 ಎಸೆತಗಳಲ್ಲಿ ಶತಕ ಪೂರೈಸಿದರು. 13 ಬೌಂಡರಿ ಮತ್ತು 9 ಭರ್ಜರಿ ಸಿಕ್ಸರ್‌ನೊಂದಿಗೆ 258.33ರ ಸರಾಸರಿಯಲ್ಲಿ ರನ್ ಗಳಿಸಿ, ತಂಡದ ಮೊತ್ತವನ್ನು ಇನ್ನೂರರ ಗಡಿ ದಾಟಿಸಿದರು.

ಗ್ರೀನ್, ಮಾರ್ಷ್‌ಗೆ ಬೌಲಿಂಗ್ ಹೊಣೆ

ಭಾರತದ ಎದುರಿನ ಟೆಸ್ಟ್‌ಗೆ ನಾಯಕ ಕಮಿನ್ಸ್ ಯೋಜನೆ

ಮೆಲ್ಬರ್ನ್ (ಪಿಟಿಐ): ಮುಂಬರಲಿರುವ ಭಾರತ ತಂಡದ ಎದುರಿನ ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಗಾಗಿ ಆಸ್ಟ್ರೇಲಿಯಾ ತಂಡವು ಈಗಾಗಲೇ ಸಿದ್ಧತೆ ಗಂಭೀರವಾಗಿಯೇ ಆರಂಭಿಸಿದೆ. ತಂತ್ರಗಾರಿಕೆಗಳನ್ನು ಹೆಣೆಯುತ್ತಿದೆ.

ಭಾರತದ ಬ್ಯಾಟಿಂಗ್ ಬಲವನ್ನು ಕಟ್ಟಿಹಾಕಲು ತಮ್ಮ ಆಲ್‌ರೌಂಡರ್‌ಗಳ ಸಾಮರ್ಥ್ಯವನ್ನು ಬಳಸಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ತಮ್ಮ ಪರಿಣತ ಬೌಲರ್‌ಗಳ ಕಾರ್ಯ-ಬಾಹುಳ್ಯವನ್ನು ಆಲ್‌ರೌಂಡರ್‌ಗಳಾದ ಕ್ಯಾಮರಾನ್ ಗ್ರೀನ್ ಮತ್ತು ಮಿಚೆಲ್ ಮಾರ್ಷ್ ಅವರಿಗೂ ಹಂಚಲು ನಾಯಕ ಪ್ಯಾಟ್ ಕಮಿನ್ಸ್ ಯೋಜಿಸಿದ್ದಾರೆ.

‘ಮುಂಬರುವ ಬೇಸಿಗೆ ಋತುವು ಈ ಹಿಂದಿನ ಎಲ್ಲ ಋತುಗಳಿಗಿಂತ ವಿಭಿನ್ನವಾಗಲಿದೆ. ನಾವು ಗ್ರೀನ್ ಮತ್ತು ಮಾರ್ಷ್ ಅವರ ಬೌಲಿಂಗ್ ಸಾಮರ್ಥ್ಯವನ್ನು ತುಸು ಹೆಚ್ಚು ಬಳಸಿಕೊಳ್ಳುವ ಯೋಚನೆಯಲ್ಲಿದ್ದೇವೆ. ಈ ಹಿಂದಿನ ಟೆಸ್ಟ್‌ಗಳಲ್ಲಿ ಅವರಿಗೆ ಹೆಚ್ಚು ಒತ್ತಡ ಹಾಕಿರಲಿಲ್ಲ. ದೇಶಿ ಕ್ರಿಕೆಟ್‌ನಲ್ಲಿ ಕ್ಯಾಮ್ (ಗ್ರೀನ್) ಬೌಲಿಂಗ್ ಹೆಚ್ಚು ಮಾಡಿದವರು. ಆದರೆ ಟೆಸ್ಟ್‌ನಲ್ಲಿ ಬ್ಯಾಟಿಂಗ್ ಮೇಲೆ ಹೆಚ್ಚು ಗಮನ ಕೊಟ್ಟರು’ ಎಂದರು.


ಪ್ಯಾಟ್ ಕಮಿನ್ಸ್

25 ವರ್ಷದ ಗ್ರೀನ್ ಅವರು ಒಟ್ಟು 28 ಟೆಸ್ಟ್‌ಗಳನ್ನು ಆಡಿದ್ದಾರೆ. ಅದರಲ್ಲಿ 35 ವಿಕೆಟ್ ಗಳಿಸಿದ್ದಾರೆ.

‘ಮೊದಲನೇಯದಾಗಿ ಅವರಿಬ್ಬರೂ (ಗ್ರೀನ್ ಮತ್ತು ಮಾರ್ಷ್) ಮೊದಲ ಆರು ಬ್ಯಾಟಿಂಗ್ ಕ್ರಮಾಂಕಗಳಲ್ಲಿ ಇರುವುದು ಖಚಿತ. ಈ ವಿಷಯದಲ್ಲಿ ಅವರು ನಿರಾಶೆಗೊಳಿಸುವುದಿಲ್ಲ. ಬೌಲಿಂಗ್‌ನಲ್ಲಿ ನಮಗೆ ಅದೃಷ್ಟವಶಾತ್ ಸ್ಪಿನ್ನರ್ ನೇಥನ್ ಲಯನ್ ಹೆಚ್ಚು ಓವರ್‌ಗಳನ್ನು ಬೌಲಿಂಗ್ ಮಾಡುತ್ತಾರೆ. ಆದ್ದರಿಂದ ಆಲ್‌ರೌಂಡರ್‌ಗಳು ಬೌಲಿಂಗ್ ಮಾಡುವ ಅಗತ್ಯ ಹೆಚ್ಚು ಇರುವುದಿಲ್ಲ. ಆದರೆ ಈಗ ಮಿಚ್ (ಮಾರ್ಷ್) ಮತ್ತು ಕ್ಯಾಮ್ (ಗ್ರೀನ್) ಅವರು ಇರುವುದರಿಂದ ಐದು ಹಾಗೂ ಆರನೇ ಬೌಲರ್‌ಗಳ ಸ್ಥಾನವನ್ನು ತುಂಬಿದ್ದಾರೆ. ಇದು ತಂಡದ ಸಾಮರ್ಥ್ಯವನ್ನು ಹೆಚ್ಚಿಸಿದೆ’ ಎಂದು ವೇಗದ ಬೌಲರ್ ಕಮಿನ್ಸ್ ಅಭಿಪ್ರಾಯಪಟ್ಟರು.

ಹಂಡ್ರೆಡ್ ಬಾಲ್ ಕ್ರಿಕೆಟ್: ಮಿಂಚಿದ ದೀಪ್ತಿ, ಜಾರ್ಜಿಯಾ

ಲಂಡನ್ ಸ್ಪಿರಿಟ್ಸ್‌ಗೆ ಚೊಚ್ಚಲ ಕಿರೀಟ

ಲಂಡನ್ (ಪಿಟಿಐ): ಲಂಡನ್ ಸ್ಪಿರಿಟ್ಸ್ ತಂಡವು ಇದೇ ಮೊದಲ ಬಾರಿ ನಡೆದ ಹಂಡ್ರೆಡ್ ಬಾಲ್ ಕ್ರಿಕೆಟ್ ಟೂರ್ನಿಯ ಮಹಿಳೆಯರ ವಿಭಾಗದ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಭಾನುವಾರ ತಡರಾತ್ರಿ (ಭಾರತೀಯ ಕಾಲಮಾನ) ಮುಗಿದ ಫೈನಲ್‌ನಲ್ಲಿ ಸ್ಪಿರಿಟ್ಸ್ ತಂಡವು 4 ವಿಕೆಟ್‌ಗಳಿಂದ ವೆಲ್ಷ್ ಫೈರ್ ವಿರುದ್ಧ ಜಯಿಸಿತು. ಈ ತಂಡದಲ್ಲಿದ್ದ ಭಾರತದ ದೀಪ್ತಿ ಶರ್ಮಾ (23ಕ್ಕೆ1, ಔಟಾಗದೆ 16) ಆಲ್‌ರೌಂಡ್ ಆಟವಾಡಿ ಗಮನ ಸೆಳೆದರು.

ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಟಾಮಿ ಬೀಮಾಂಟ್ ನಾಯಕತ್ವದ ವೆಲ್ಷ್ ಫೈರ್ ತಂಡವು 100 ಎಸೆತಗಳಲ್ಲಿ 8 ವಿಕೆಟ್‌ಗಳಿಗೆ 115 ರನ್‌ಗಳ ಮೊತ್ತ ಗಳಿಸಿತು. ಅರ್ಧಶತಕ ಗಳಿಸಿದ ಜೆಸ್ ಜಾನ್ಸನ್ (54; 41ಎ. 4X8), ಬೀಮಾಂಟ್ (21; 16ಎ) ಹಾಗೂ ಹೆಯಲಿ ಮ್ಯಾಥ್ಯೂಸ್ (22; 26ಎ) ಅವರ ಉತ್ತಮ ಬ್ಯಾಟಿಂಗ್‌ನಿಂದ ತಂಡವು ಉತ್ತಮ ಗಳಿಸಿತು.

ದೀಪ್ತಿ ಶರ್ಮಾ –ಫ್ಯಾನ್ ಕೋಡ್ ಎಕ್ಸ್ ಚಿತ್ರ

ಲಂಡನ್ ತಂಡದ ಬೌಲರ್‌ಗಳಾದ ಇವಾ ಗ್ರೇ 20 ಎಸೆತ ಹಾಕಿ 26 ರನ್ ಕೊಟ್ಟು ಎರಡು ವಿಕೆಟ್ ಪಡೆದರು. ಸಾರಾ ಗ್ಲೆನ್ 20 ಎಸೆತಗಳಲ್ಲಿ 17 ರನ್ ಕೊಟ್ಟು 2 ವಿಕೆಟ್ ಪಡೆದರು. ದೀಪ್ತಿ ಕೂಡ 20 ಎಸೆತಗಳಲ್ಲಿ, 23 ರನ್ ಕೊಟ್ಟು ಒಂದು ವಿಕೆಟ್ ಗಳಿಸಿದರು. ಗುರಿ ಬೆನ್ನಟ್ಟಿದ ಲಂಡನ್ ತಂಡಕ್ಕೆ ಆರಂಭಿಕ ಬ್ಯಾಟರ್ ಜಾರ್ಜಿಯಾ ರೆಡ್‌ಮೈನ್ (34; 32ಎ, 4x3) ಅವರು ಆಸರೆಯಾದರು. ತಂಡವು 98 ಎಸೆತಗಳಲ್ಲಿ 2 ವಿಕೆಟ್‌ಗಳಿಗೆ 118 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ವೆಲ್ಷ್ ಫೈರ್: 100 ಎಸೆತಗಳಲ್ಲಿ 8ಕ್ಕೆ115 (ಟಾಮಿ ಬೀಮಾಂಟ್ 21, ಹೆಯಲಿ ಮ್ಯಾಥ್ಯೂಸ್ 22, ಜೆಸ್ ಜಾನ್ಸೆನ್ 54, ಇವಾ ಗ್ರೇ 26ಕ್ಕೆ2, ಸಾರಾ ಗ್ಲೆನ್ 17ಕ್ಕೆ2) ಲಂಡನ್ ಸ್ಪಿರಿಟ್: 98 ಎಸೆತಗಳಲ್ಲಿ 6ಕ್ಕೆ118 (ಜಾರ್ಜಿಯಾ ರೆಡ್‌ಮೈನ್ 34, ಹೀಥರ್ ನೈಟ್ 24, ಡೇನಿಯಲ್ ಗಿಬ್ಸನ್ 22, ಶಬ್ನಿಮ್ ಇಸ್ಮಾಯಿಲ್ 24ಕ್ಕೆ3) ಫಲಿತಾಂಶ: ಲಂಡನ್ ಸ್ಪಿರಿಟ್ ತಂಡಕ್ಕೆ 4 ವಿಕೆಟ್‌ಗಳ ಜಯ.

ಪಂದ್ಯದ ಆಟಗಾರ್ತಿ: ಜಾರ್ಜಿಯಾ ರೆಡ್‌ಮೈನ್.

ಸುಬ್ರತೊ ಕಪ್: ಮೂರು ತಂಡಗಳ ಅಮಾನತು

ಬೆಂಗಳೂರು: ಹೆಚ್ಚಿನ ವಯೋಮಿತಿಯ ಆಟಗಾರರನ್ನು ಕಣಕ್ಕಿಳಿಸಿದ ಕಾರಣ ಸುಬ್ರತೊ ಕಪ್ ಸಬ್ ಜೂನಿಯರ್ ಬಾಲಕರ ಅಂತರ ರಾಷ್ಟ್ರೀಯಫುಟ್‌ಬಾಲ್ ಟೂರ್ನಿಯಿಂದ ಮೂರು ತಂಡಗಳನ್ನು ಅನರ್ಹಗೊಳಿಸಲಾಗಿದೆ.

ಟೂರ್ನಿ ಸೋಮವಾರ ಆರಂಭವಾಯಿತು. ಅಸ್ಸಾಮಿನ ದಿಮಾ ಹಸಾವೊದ ನಝುರೆತ್ ಮಾಡೆಲ್ ಹೈಸ್ಕೂಲ್, ಬಿಹಾರದ ಜಮುಯಿಯ ನೆಹರೂ ಪಬ್ಲಿಕ್ ಸ್ಕೂಲ್ ಮತ್ತು ಮಣಿಪುರದ ವಿಷ್ಣುಪುರದ ಉಲ್ತೌ ಸರ್ಕಾರಿ ಮಾದರಿ ಹೈಸ್ಕೂಲ್ ತಂಡಗಳನ್ನು ಟೂರ್ನಿಯಿಂದ ಹೊರಗಟ್ಟಲಾಯಿತು. ಈ ಬಗ್ಗೆ ಸುಬ್ರತೊ ಮುಖರ್ಜಿ ಸ್ಪೋರ್ಟ್ಸ್ ಎಜುಕೇಷನ್ ಸೊಸೈಟಿ ಅಧಿಕೃತ ಪ್ರಕಟಣೆ ಹೊರಡಿಸಿದೆ. ಈ ಮೂರು ತಂಡಗಳು ಹೆಚ್ಚಿನ ವಯೋಮಿತಿಯನಾಲ್ವರುಆಟಗಾರರನ್ನುಕಣಕ್ಕಿಳಿಸಿದ್ದವು ಎಂದು ಈ ಹೇಳಿಕೆ ತಿಳಿಸಿದೆ.

ಹೋದ ಆವೃತ್ತಿಯಲ್ಲಿ 16 ತಂಡಗಳನ್ನು ವಯೋಮಿತಿ ಉಲ್ಲಂಘಿಸಿದ ಕಾರಣಕ್ಕೆ ಅನರ್ಹಗೊಳಿಸಲಾಗಿತ್ತು ಎಂದು ಆಯೋಜಕರು ತಿಳಿಸಿದ್ದಾರೆ.

ಹಾಕಿ: ರಾಷ್ಟ್ರೀಯ ಟೂರ್ನಿಗೆ ಕೊಡಗು ತಂಡ ಆಯ್ಕೆ

ಕುಶಾಲನಗರ: ಕೊಡಗು ಜಿಲ್ಲಾ ತಂಡವು ಬೆಂಗಳೂರಿನಲ್ಲಿ ಸೋಮವಾರ ನಡೆದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದ ಪುರುಷರ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಈ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಯಿತು.

ಶಾಂತಿನಗರದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಕೊಡಗು ತಂಡವು ಬೀದರ್ ಜಿಲ್ಲಾ ತಂಡವನ್ನು 5-0 ಗೋಲುಗಳಿಂದ ಮಣಿಸಿತು. ವಿಜೇತ ತಂಡದ ಪರವಾಗಿ ಸತೀಶ್, ಶ್ರೀನಿವಾಸ್ ರೈ ,ಪೂಣಚ್ಚ, ಜಾಗೃತ್ , ಮಂಜುನಾಥ್ ತಲಾ ಒಂದೊಂದು ಗೋಲು ಗಳಿಸಿದರು.

ಸೆಮಿಫೈನಲ್‌ನಲ್ಲಿ ಕೊಡಗು, ಬೆಂಗಳೂರು ನಗರ ತಂಡವನ್ನು 5-0 ಗೋಲುಗಳ ಅಂತರದಿಂದ ಮಣಿಸಿತು.

100 DAYS OF HAPPINESS^ | STAND A CHANCE TO WIN 100% CASHBACK ON YOUR PURCHASE

INDIA'S FIRST 5 YEAR WARRANTY* *Conditions apply

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354I. Accessories and features shown may not be a part of standard fitment. Always wear a helmet while riding a two-wheeler. *As per cumulative dispatch number from June 2023 till March 2024 - Source SIAM data.ᵛThe offer is applicable on purchase of Hero Passion+ from authorised dealer of HeroMotocorp using any HDFC Credit Card on all Pine Labs POS terminals. The 5% cashback upto Rs.5000/- is applicable on minimum transaction of ₹40,000, subject to HDFC's T&Cs.^This Centennial Celebration Campaign is open only for Indian residents who buy a new Hero two wheeler during the campaign period from 26th June 2024 to 3rd Oct 2024.**Offer amount and combination of offer may vary for model/variant and states and it is applicable on select models only. Offer may change without any prior intimation; the cash discount is applicable on purchase through Flipkart only. Flipkart cash discount is not applicable on virtual wallet transactions and is available at select dealerships only, subject to Flipkart's T&Cs. For more details, visit https://www.heromotocorp.com/ or visit your nearest Hero MotoCorp dealership. Hero MotoCorp reserves the rights to modify or withdraw any or all the offers without prior notice.

HeroMotoCorp.com | Toll Free Number: 1800 266 0018

ᵛGet instant cashback of 5% upto ₹5,000*
HDFC BANK

AUTHORISED DEALERS: BENGALURU - PEENYA: SAI HERO - PH: 9289922830. MAGADI ROAD: POORNA HERO - PH: 9289923212. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. HOSUR ROAD: RT KRISHNA HERO - PH: 9289923177. BYATARAYANAPURA: BIMAL HERO - PH: 9289922863. LALBAGH ROAD: PRAKASH HERO - PH: 9289922117. RAJAJI NAGAR: MAX HERO - PH: 9289923023. MARATHALLI: VAAYURATHA HERO - PH: 9289923811. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL Hero 9535327710. DODDABALLAPURA: BIMAL Hero 9742202125. TUMKUR: SAI HERO - PH: 9289922986. B.H.ROAD – SAI HERO, PH. 7022752841 .TIPTUR: SAI HERO PH. 9164840456. KUNIGAL: SAI HERO - PH: 7022752858. KOLAR: SAI BALAJI HERO PH. 9821745024. Associate Dealer: MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD:9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064 Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. . ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. JIGANI: 9986498884. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. VIDYARANYAPURA: 9606934533. For Buy/Sell/Exchange Old any Vehicle contact VV PURAM, Bengaluru Olety Sai Hero Sure: 98450 74491.

FCB INTERFACE/9101/AUG2024/KAN